ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್-2016
ಬೆಲೆ ರೂ. 1



## ರಾಷ್ಟ್ರದ ರಾಜಧಾನಿಯಲ್ಲಿ ಕರ್ನಾಟಕ ಜನಪದ ಸಂಭ್ರಮ




## ಸಂಘದಲ್ಲಿ ನಾದಬ್ರಹ್ಮ ಡಾ. ಹಂಸಲೇಖ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 3
ಡಿಸೆಂಬರ್ 2016, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟಿಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ನೇರ ಮಾತು

ಹತ್ತು ಹಲವು ಆಕಾಂಕ್ಷೆಗಳು, ಕಲ್ಪನೆಗಳು ಮತ್ತು ನಿರ್ಧಾರಗಳೊಂದಿಗೆ ಆರಂಭಗೊಂಡ 2016ರ ವರ್ಷ ಮುಕ್ತಾಯದ ಹಂತಕ್ಕೆ ತಲುಪಿದೆ. ಡಿಸೆಂಬರ್ ತಿಂಗಳಲ್ಲಿ ಈ ವರ್ಷ ಸಾಧಿಸಿದ್ದನ್ನು, ಸಾಧಿಸಲಾಗದ್ದನ್ನು ವಿವಿಧ ಲೆಕ್ಕಾಚಾರಗಳೊಂದಿಗೆ ಮೆಲುಕು ಹಾಕುತ್ತಾ, ಕಾರಣ ಹುಡುಕುತ್ತಾ ಮುಂದಿನ ವರ್ಷದ ಗುರಿ ಏನೆಂಬುದನ್ನು ಹತ್ತು ಹಲವು ಯೋಚನೆಗಳ ನಂತರ ಹೀಗಿರಬೇಕು ಎನ್ನುವ ಯೋಜನೆ ರೂಪಿಸುವ ಸಂದರ್ಭದ ಸಮಯವಿದು.

ಸಂಘದಲ್ಲಿ ಕಳೆದ ಒಂದು ವರ್ಷದಲ್ಲಿ ಹತ್ತಾರು ಭಿನ್ನ–ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸುವ ಪ್ರಯತ್ನ ಮಾಡಲಾಗಿದೆ. ಇನ್ನೂ ಹಲವು ಕಾರ್ಯಕ್ರಮಗಳು, ಆಟೋಟ ಸ್ಪರ್ಧೆಗಳು, ಪ್ರಶಸ್ತಿ ಪ್ರದಾನ, ತರಬೇತಿ ಶಿಬಿರಗಳನ್ನು ಮಾಡಲು ನಿರ್ಧರಿಸಲಾಗಿದೆಯಾದರೂ ಕಾರಣಾಂತರಗಳಿಂದ ಅವುಗಳಲ್ಲಿ ಕೆಲವನ್ನು ಕಾರ್ಯಗತಗೊಳಿಸಲಾಗಿಲ್ಲ. ಈಗ, ಮತ್ತೊಮ್ಮೆ ಎಲ್ಲ ಪುನರ್‌ವಿಮರ್ಶಿಸಿ ಹಮ್ಮಿಕೊಂಡ ಕಾರ್ಯ ಚಟುವಟಿಕೆಗಳನ್ನು ಮುಂದಿನ ಮಾರ್ಚ್ 30ರ ಒಳಗಾಗಿ ವ್ಯವಸ್ಥಿತವಾಗಿ ನಡೆಸಲು ಕಾರ್ಯ ಸೂಚಿ ತಯಾರಿಸುತ್ತಿದ್ದೇವೆ. ಹಿರಿಯ ಕನ್ನಡಿಗ ಶ್ರೀ ಪಿ.ಎಸ್. ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ಡಾ. ಎಂ.ಎಸ್. ಶಶಿಕುಮಾರ್ ಅವರ ಸಂಚಾಲಕತ್ವದಲ್ಲಿ ಸಂಘದ ನಿಯಾಮಾವಳಿಯನ್ನು ತಿದ್ದುಪಡಿ ಮಾಡಲು ಹಲವು ಬಾರಿ ಸಭೆ ಸೇರಿ ಸಂವಿಧಾನದ ಕರಡು ಪ್ರತಿಯನ್ನು ಈಗಾಗಲೇ ಸಿದ್ಧತೆ ಮಾಡಿರುತ್ತಾರೆ. ಇದಕ್ಕೆ ಪೂರಕವಾಗಿ ಸ್ಪಂದಿಸಿ ಸಹಕರಿಸಿದ ಸಂವಿಧಾನ ತಿದ್ದುಪಡಿ ಸಮಿತಿಯ ಶ್ರೀ ಇ.ಸಿ. ವಿದ್ಯಾಸಾಗರ್, ಶ್ರೀ ಅನಂತನಾರಾಯಣ ಭಟ್, ಶ್ರೀ ಬಿ.ಎಲ್. ಸುರೇಶ್ ಹಾಗೂ ಡಾ. ವಿ.ಆರ್. ಗುಡ್ಡೇಗೌಡ ಅವರಿಗೆ ಕೃತಜ್ಞತೆಗಳು. ದೆಹಲಿಗೆ ಬಂದು ಇಲ್ಲಿ ನೆಲೆನಿಂತ ಕನ್ನಡಿಗರಿಗೆ ಸಂಘದ ಆಜೀವ ಸದಸ್ಯರಾಗಲು ಈಗಿನ ನಿಯಮಾವಳಿ ಪ್ರಕಾರ 4 ವರ್ಷಗಳು ಬೇಕಾಗುತ್ತದೆ. ಈ ರೀತಿ ಕನ್ನಡಿಗರನ್ನು ಸಂಘದಿಂದ ದೂರವಿಡುವ ಬದಲು, ತಕ್ಷಣದಿಂದಲೇ ಅವರಿಗೆ ಆಜೀವ ಸದಸ್ಯತ್ವ ನೀಡಿ ಸಕ್ರೀಯವಾಗಿ ಸಂಘದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂಬುದೇ ನಮ್ಮ ಉದ್ದೇಶ. ಇದಲ್ಲದೆ ಇನ್ನೂ ಕೆಲವೊಂದು ಸಣ್ಣಪುಟ್ಟ ನಿಯಮಾವಳಿಯ ಮಾರ್ಪಾಡಿನೊಂದಿಗೆ ತಯಾರಾಗಿರುವ ಕರಡುನ್ನು ಮಂಡಿಸಲು ಶೀಘ್ರದಲ್ಲೇ ವಿಶೇಷ ಸರ್ವಸದಸ್ಯರ ಸಭೆಯನ್ನು ಕರೆಯಲಾಗುತ್ತಿದೆ. ಸಂಘ ಎಲ್ಲಾ ಕನ್ನಡಿಗರಿಗೂ ಮುಕ್ತವಾಗಿರಬೇಕು. ಹೀಗಾಗಿ ಇದರ ಯಶಸ್ಸಿಗೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತಿದ್ದೇನೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. ಡಾ. ನಾಗತಿಹಳ್ಳಿ ಚಂದ್ರಶೇಖರ್ ಅವರ ಪ್ರಶಸ್ತಿ ಪಡೆದ ಮೂರು ಸಿನಿಮಾಗಳ ಹೆಸರು ಸೂಚಿಸಿ?
2. ನಾದಬ್ರಹ್ಮ ಡಾ. ಹಂಸಲೇಖ ಅವರ ಮಡದಿಯ ಹೆಸರೇನು?
3. ಡಾ. ಹಂಸಲೇಖರವರ ಅತ್ಯಂತ ಪ್ರಸಿದ್ಧಿ ಪಡೆದ ಹಾಡು ಮತ್ತು ಸಿನಿಮಾ ಯಾವುದು?
4. ಡಾ. ಹಂಸಲೇಖಾರವರು ಪ್ರಸ್ತುತಪಡಿಸಿದ ಸಂಗೀತ ನಾಟಕ ಯಾವುದು? ಆ ನಾಟಕದಲ್ಲಿ ಗಾಂಧಿಯ ಪಾತ್ರಧಾರಿ ಯಾರು?
5. ಈ ಬಾರಿ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪಡೆದ ವರು ಯಾರು? ಅವರು ಯಾವ ಉದ್ಯೋಗದಲ್ಲಿದ್ದಾರೆ?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.12.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ನವೆಂಬರ್ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ** 1) ಡಾ. ಮನುಬಳಿಗಾರ್ 2) ಸಾಹಿತಿ ದೇವನೂರು ಮಹಾದೇವ 3) ಡಾ. ಎಚ್.ಎಸ್. ಅನುಪಮಾ 4) ಶ್ರೀ ಅನಂತಕುಮಾರ್ 5) ಡಾ. ಅಹಲ್ಯಾಚಿಂತಾಮಣಿ, ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಶ್ರೀಮತಿ ಸವಿತಾ ಇನಾಮದಾರ್, ಶ್ರೀಮತಿ ಸುಬ್ಬು ಹೊಲೆಯಾರ್, ಡಾ. ಬಸು ಬೇವಿನಗಿಡದ, ಶ್ರೀಮತಿ ಎಚ್.ಎಸ್. ಆರತಿ, ಡಾ. ರಮೇಶ್ ಅರೋಲಿ, ಶ್ರೀ ಕೋಟಾರಗಸ್ತಿ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಡಿ.ಎಸ್. ರಾಜಶೇಖರ, ಶ್ರೀ ಶ್ರೀಕಾಂತ್ ಆರ್ ಡಾ. ಪಿ. ರಾಮಕೃಷ್ಣ ಭಟ್ಟ, ಶ್ರೀ ಬಸವರಾಜು ಸಿ, ಶ್ರೀಮತಿ ಶಾಲಿನಿ ವಿ. ನಾಯಕ್

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ಸಾಲುಸಾಲಾಗಿ ನಡೆಯುತ್ತಿವೆ. ಸಂಗೀತಲೋಕದಲ್ಲಿ ಹೆಸರು ಮಾಡಿರುವಂತಹ ನಾದಬ್ರಹ್ಮ ಹಂಸಲೇಖರವರು ದೆಹಲಿಯ ಸ್ಥಳೀಯ 150ಕ್ಕೂ ಹೆಚ್ಚು ಕನ್ನಡಿಗರ ಮಕ್ಕಳು ಹಾಗೂ ಕಲಾವಿದರಿಗೆ ಸಂಗೀತ ತರಬೇತಿ ಮತ್ತು 'ಭರತಭೂಮಿ ವರಪುತ್ರ' ಎಂಬ ಕಿರು ಸಂಗೀತ ನಾಟಕ ಕಾರ್ಯಕ್ರಮವನ್ನು ಕೇವಲ ಮೂರು ದಿನಗಳಲ್ಲಿ ಅತ್ಯಂತ ಶ್ರಮವಹಿಸಿ ತರಬೇತಿ ನೀಡಿ ಯಶಸ್ವಿಯಾಗಿ ಪ್ರದರ್ಶಿಸುವುದರ ಮೂಲಕ ಜನ ಮೆಚ್ಚುಗೆಯನ್ನು ಪಡೆದಿರುತ್ತಾರೆ.

ಹಂಸಲೇಖರವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಕರ್ನಾಟಕದ ಚಲನಚಿತ್ರ ಸಂಗೀತಲೋಕದ ಮಾಂತ್ರಿಕ, ಗಾರುಡಿಗ, ನಾದಬ್ರಹ್ಮರೆಂದೇ ಮನೆಮಾತಾಗಿರುವ ಹೆಸರಾಂತ ನಿರ್ದೇಶಕರಾದ ಹಂಸಲೇಖಾರವರು ನಮ್ಮ ದೆಹಲಿ ಕರ್ನಾಟಕ ಸಂಘಕ್ಕೆ ಬರುವುದು ಒಂದು ಕನಸೇ ಎಂಬಂತಿತ್ತು. ಅದೀಗ ನನಸಾಗಿದೆ ಮತ್ತು ಅಂತಹ ದೊಡ್ಡ ಕಲಾವಿದರನ್ನು ನಮ್ಮ ಸಂಘದಿಂದ ಅತ್ಯಂತ ಪ್ರೀತಿ, ಆದರ ಮತ್ತು ಗೌರವಗಳಿಂದ ಹಂಸಲೇಖಾ ದಂಪತಿಗಳನ್ನು ಅಭಿನಂದಿಸುವ ಸೌಭಾಗ್ಯ ನಮ್ಮೆಲ್ಲ ದೆಹಲಿ ಕನ್ನಡಿಗರಾದಾಗಿತ್ತು ಎಂಬುದೇ ನಮಗೊಂದು ದೊಡ್ಡ ಹೆಮ್ಮೆ. ಹಂಸಲೇಖಾರವರು ಸಹ ಅಷ್ಟೇ ವಿನಮ್ರತೆ ಮತ್ತು ತುಂಬಾ ಸಂತೋಷದಿಂದ ನಮ್ಮ ಈ ಪುಟ್ಟ ಕಾಣಿಕೆಯನ್ನು ಸ್ವೀಕರಿಸಿದರು. ಅದು ನಮ್ಮ ಭಾಗ್ಯ. ಅವರ ಜೊತೆ ಶ್ರೀ ರಾಮಚಂದ್ರ, ನಾಟಕ ಅಕಾಡೆಮಿಯ ಸದಸ್ಯರು, ಬೆಂಗಳೂರು ಅವರು ಕನ್ನಡ ಚಿತ್ರರಂಗದಲ್ಲಿ ಎಷ್ಟೋ ಕಲಾವಿದರಿಗೆ ಬಣ್ಣ ಹಚ್ಚಿದವರು. ನಮ್ಮ ಸ್ಥಳೀಯ ಕಲಾವಿದರಿಗೆ ಪ್ರೀತಿಯಿಂದ ಬಣ್ಣ ಹಚ್ಚಿದ್ದಾರೆ. ಹಂಸಲೇಖ ತಂಡ ಮತ್ತು ರಾಮಚಂದ್ರ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಸಂಘದ ಜೊತೆಗೂಡಿ ಕರ್ನಾಟಕದ ವಿವಿಧ ಅಕಾಡೆಮಿಗಳ ಕಾರ್ಯಕ್ರಮಗಳು ನಡೆಯುತ್ತಾ ಬರುತ್ತಿದೆ. ಜನಪದ ಅಕಾಡೆಮಿಯಿಂದ ಸುಮಾರು 150 ಕಲಾವಿದರು ಬಂದು ಅದ್ಭುತವಾದ ಕಾರ್ಯಕ್ರಮ ನೀಡಿ ಮೆಚ್ಚುಗೆ ಪಡೆದಿರುತ್ತಾರೆ ಹಾಗೂ ತುಳು ಸಾಹಿತ್ಯ ಅಕಾಡೆಮಿಯು ಒಂದು ಅರ್ಥಗರ್ಭಿತ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ ನಡೆಸಿದೆ.

ಡಿಸೆಂಬರ್ 10 ಮತ್ತು 11 ರಂದು ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಸಹಯೋಗದೊಂದಿಗೆ ವಿಚಾರಸಂಕಿರಣ, ಬಯಲಾಟ, ಯಕ್ಷಗಾನ, ತಾಳಮದ್ದಳೆ ಕಾರ್ಯಕ್ರಮಗಳು ನಡೆಯಲಿವೆ ತಾವೆಲ್ಲರೂ ಬಂದು ಭಾಗವಹಿಸಿ.

ಜನವರಿ ತಿಂಗಳಲ್ಲಿ ಚಳಿಗಾಲದ ಪ್ರಯುಕ್ತ ದೆಹಲಿ ಕರ್ನಾಟಕ ಸಂಘದ ವತಿಯಿಂದ 'ಆಹಾರ ಮೇಳ'ವನ್ನು ಆಯೋಜಿಸಲು ಸಿದ್ಧತೆ ನಡೆಯುತ್ತಿದೆ. ಕಳೆದ ಬಾರಿ ಆಹಾರ ಮೇಳವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿ ಬಾರಿ ಜನ ಮೆಚ್ಚುಗೆ ಪಡೆದಿದ್ದೇವೆ. ಈ ಬಾರಿಯೂ ಸಹ ಅದಕ್ಕಿಂತ ಹೆಚ್ಚಾದ ಯಶಸ್ವಿ ಆಹಾರ ಮೇಳವನ್ನು ಆಯೋಜಿಸಲು ಭರದಿಂದ ಸಿದ್ಧತೆ ನಡೆದಿದೆ. ನಮ್ಮ ಕರ್ನಾಟಕದ ದೇಸಿ ತಿಂಡಿ ತಿನಿಸುಗಳನ್ನು ನಮ್ಮ ದೆಹಲಿಯ ಕನ್ನಡಿಗರು ತಮ್ಮ ಮನೆಗಳಲ್ಲಿ ಮಾಡಿಕೊಂಡು ಬರುವ ಈ ರುಚಿ ರುಚಿಯಾದ ಊಟ–ತಿಂಡಿಗಳನ್ನು ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸವಿಯಿರಿ.

ಹೆಚ್ಚಿನ ವಿವರಗಳನ್ನು ಮುಂಬರುವ ದಿನಗಳಲ್ಲಿ ಎಸ್‌ಎಂಎಸ್., ಇಮೇಲ್ ಮತ್ತು ವಾಟ್ಸೆಪ್ ಮೂಲಕ ತಿಳಿಸಲಾಗುವುದು. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**10 ಡಿಸೆಂಬರ್ 2016 ಶನಿವಾರ**
**ಸಂಜೆ : 4.30 ಗಂಟೆಗೆ**

ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು ಸಹಯೋಗದೊಂದಿಗೆ **ವಿಚಾರಗೋಷ್ಠಿ ಮತ್ತು 'ಸತ್ವ ಪರೀಕ್ಷೆ'** ತಾಳಮದ್ದಳೆ

**11 ಡಿಸೆಂಬರ್ 2016 ಭಾನುವಾರ**
**ಮಧ್ಯಾಹ್ನ : 2.00 ಗಂಟೆಗೆ**

ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು ಸಹಯೋಗದೊಂದಿಗೆ **'ಮಹಿಷ ಮರ್ಧಿನಿ'** ತೆಂಕುತಿಟ್ಟು ಯಕ್ಷಗಾನ **ಮತ್ತು 'ಕರಿಭಂಟನ ಕಾಳಗ'** ಬಯಲಾಟ

### ಆಹಾರ ಮೇಳ

ಜನವರಿ ತಿಂಗಳಲ್ಲಿ ಸಂಘದ ಆವರಣದಲ್ಲಿ 'ಚಳಿಗಾಲದ ಸಾಂಸ್ಕೃತಿಕ ಹಬ್ಬ ಹಾಗೂ ಆಹಾರ ಮೇಳ'.



ದೆಹಲಿಯ ಸ್ಥಳೀಯರಿಂದ ಕರ್ನಾಟಕದ ವಿವಿಧ ಜಿಲ್ಲೆಗಳ ನಾನಾ ರೀತಿಯ ಆಹಾರ ಪದಾರ್ಥಗಳು ಮತ್ತು ತಿಂಡಿತಿನಿಸುಗಳ ಪ್ರದರ್ಶನವನ್ನು ಮಾಡಲು ನಿರ್ಧರಿಸಿದೆ. ಪ್ರದರ್ಶನ ಸಮಯ ಬೆಳಿಗ್ಗೆ 11.00ರಿಂದ ಸಂಜೆ 6.00ರವರೆಗೆ. ಕೌಂಟರ್ ವ್ಯವಸ್ಥೆ, ಅಲಂಕಾರ, ಟೆಂಟ್ ಹೌಸ್ ಸಾಮಾನು, ಪ್ರಚಾರ, ಬ್ಯಾನರ್‌ಗಳನ್ನು ಸಂಘವು ಒದಗಿಸುವುದು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಬೊಂಬೆ ಕುಣಿತ, ಮಹಿಳಾ ತಮಟೆವಾದನ, ಕೀಲು ಕುದುರೆ ಹಾಗೂ ನೃತ್ಯರೂಪಕ ಕಾರ್ಯಕ್ರಮಗಳು ನಡೆಯಲಿವೆ.

## ನೃತ್ಯ ಮತ್ತು ಆಟೋಟ ಸ್ಪರ್ಧೆ

ಜನವರಿ ತಿಂಗಳಲ್ಲಿ ಸ್ಥಳೀಯ ಕಲಾವಿದರಿಗೆ ಮಂಗಳೂರಿನ ಬಾಯ್ಸ್ ಝೋನ್ ತಂಡದಿಂದ ನೃತ್ಯ ತರಬೇತಿ

ಜನವರಿ ತಿಂಗಳಲ್ಲಿ ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ.

ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.
9560653021 / 9560563203, 011–26109615 / 26104818

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಡಿಸೆಂಬರ್, 2016ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಡಿಸೆಂಬರ್, 2016ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25 ಡಿಸೆಂಬರ್, 2016ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಡಿಸೆಂಬರ್, 2016ರಂದು ಸಾಯಂಕಾಲ 4 ಗಂಟೆಯಿಂದ.

### ಸೂಚನೆ

ವೈದ್ಯರನ್ನು ಭೇಟಿ ಮಾಡುವವರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ಮುಂಚಿನ ದಿನ ನೋಂದಾಯಿಸಬೇಕು.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 3
ಡಿಸೆಂಬರ್ 2016

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹೊರನಾಡಿನ ಕನ್ನಡಿಗರ ಕುರಿತು ಚಿಂತನೆ

ಡಿಸೆಂಬರ್ 2,3 ಮತ್ತು 4ರಂದು ರಾಯಚೂರಿನಲ್ಲಿ ನಡೆದ 82ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತೆಗೆದುಕೊಂಡ ಒಂದು ನಿರ್ಣಯದಲ್ಲಿ ಕರ್ನಾಟಕದೊಳಗೆ ಇರುವ ಕನ್ನಡ ಮಾಧ್ಯಮ ವ್ಯಾಸಂಗಿಗಳಿಗೆ ಸಿಗುತ್ತಿರುವ ಸಕಲ ಶೈಕ್ಷಣಿಕ ಮತ್ತು ಉದ್ಯೋಗ ಸಂಬಂಧಿ ಸೌಲಭ್ಯಗಳು ಇಡಿಯಾಗಿ ಹೊರನಾಡ ಕನ್ನಡಿಗರಿಗೂ ಸಿಗಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು. ಸಮ್ಮೇಳನದ ಅಧ್ಯಕ್ಷರಾದ ನಾಡೋಜ ಬರಗೂರು ರಾಮಚಂದ್ರಪ್ಪನವರು ಕೂಡಾ ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರ್ನಾಟಕದ ಒಳನಾಡಿನವರಿಗೆ ಸಿಗುವ ಶೈಕ್ಷಣಿಕ ಮತ್ತು ಔದ್ಯೋಗಿಕ ಸೌಲಭ್ಯಗಳು ಕನ್ನಡ ಮಾಧ್ಯಮದಲ್ಲೇ ವ್ಯಾಸಂಗ ಮಾಡಿದ ಹೊರನಾಡಿನ ಕನ್ನಡಿಗರಿಗೆ ಪೂರ್ಣಪ್ರಮಾಣದಲ್ಲಿ ಸಿಗುತ್ತಿಲ್ಲ, ಸಿಗಬೇಕು ಎಂದು ಹೇಳಿದರು. ಅಲ್ಲದೇ ರಾಜ್ಯಭಾಷೆಯಲ್ಲಿಯೇ ಶಿಕ್ಷಣವನ್ನು ನೀಡಬೇಕು ಎಂಬ ನೀತಿಯನ್ನು ಅನುಸರಿಸಿದರೆ ಬೇರೆ ರಾಜ್ಯಗಳಲ್ಲಿರುವ ಕನ್ನಡಿಗರು ತಮ್ಮ ಮಾತೃ ಭಾಷೆಯಾದ ಕನ್ನಡ ಮಾಧ್ಯಮದಲ್ಲಿ ಶಾಲೆ ತೆರೆಯುವುದರಿಂದ ವಂಚಿತರಾಗುತ್ತಾರೆ ಎಂಬ ಮಾತನ್ನು ಕೂಡಾ ಹೇಳಿದರು. ಸರ್ವೋಚ್ಚ ನ್ಯಾಯಾಲಯ ಸೂಚಿಸಿದಂತೆ ಇಂತಹ ನೀತಿಯನ್ನು ಪಾಲಿಸಿದರೆ ಹೊರನಾಡಿನ ಕನ್ನಡಿಗರು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುವಂತೆಯೇ ಇಲ್ಲ. ಆಯಾ ರಾಜ್ಯಭಾಷೆಯಲ್ಲಿಯೇ ಪೂರ್ಣಪ್ರಮಾಣದ ವ್ಯಾಸಂಗ ಮಾಡಬೇಕಾಗುತ್ತದೆ. ಕರ್ನಾಟಕಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಎನ್ನುವಷ್ಟು ಕನ್ನಡ ಕಲಿಯುವ ವಿದ್ಯಾರ್ಥಿಗಳಿರುವ ಶಾಲೆಗಳು ಮುಂಬಯಿ ಮಹಾನಗರದಲ್ಲಿ ಇಂದಿಗೂ ನಡೆಯುತ್ತಿವೆ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರಿನಲ್ಲಿ ನಡೆಸಿದ ಸಾಹಿತ್ಯ ಸಮ್ಮೇಳನವು ಕರ್ನಾಟಕದಿಂದ ಹೊರಗಿರುವ ನಮ್ಮಂತಹ ಕನ್ನಡಿಗರನ್ನು ಮುಟ್ಟುವ ಕೆಲಸವನ್ನು ಆರಂಭಿಸಿದೆ ಎನ್ನಬಹುದು. ಕನ್ನಡದ ಮಾತು ಬಂದಾಗ ಕರ್ನಾಟಕದಾಚೆ ಇರುವ ಹೊರನಾಡ ಕನ್ನಡಿಗರನ್ನು ಮರೆತು ಬಿಡುವ ಪರಿಪಾಠದಿಂದ ಹೊರಬರುವ ಪ್ರಯತ್ನಗಳು ನಡೆಯುತ್ತಿವೆ ಎಂದು ಕೂಡಾ ಅಂದುಕೊಳ್ಳಬಹುದು. ಇಂತಹ ಚಿಂತನೆಗೆ ಪೂರ್ವಭಾವಿ ಎನ್ನುವಂತೆ ಪರಿಷತ್ತು 2016ರ ಅಕ್ಟೋಬರ್ ಮಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಅಖಿಲ ಭಾರತ ಹೊರನಾಡ ಕನ್ನಡಿಗರ ರಾಷ್ಟ್ರೀಯ ಸಮಾವೇಶವನ್ನು ನವದೆಹಲಿಯಲ್ಲಿ ನಡೆಸಿ ಹೊರನಾಡಿನ ಕನ್ನಡಿಗರ ಅಸ್ತಿತ್ವಕ್ಕೆ ಮಹತ್ವವನ್ನು ನೀಡಿದೆ. ಜಿ.ಪಿ. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ 1978ರಲ್ಲಿ ನವದೆಹಲಿಯಲ್ಲಿ ನಡೆದ 50ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಂತರ ಮತ್ತೊಮ್ಮೆ ನವದೆಹಲಿಯಲ್ಲಿ ಸಮ್ಮೇಳನವನ್ನು ನಡೆಸುವ ಪ್ರಯತ್ನವನ್ನು ನವದೆಹಲಿಯ ಕನ್ನಡ ಸಾಹಿತ್ಯಾಸಕ್ತರು ಮತ್ತು ದೆಹಲಿ ಕರ್ನಾಟಕ ಸಂಘ ಮಾಡಬೇಕಾಗಿದೆ. ಕನ್ನಡದ ಅನನ್ಯತೆಯನ್ನು ದ್ರಾವಿಡೇತರ ಭಾಷಿಕರಿಗೂ ತಲುಪಿಸುವಲ್ಲಿ ಇಂತಹ ಕಾರ್ಯಕ್ರಮಗಳ ಅವಶ್ಯಕತೆ ಇದೆ.

*ಬಾಲಕೃಷ್ಣ ನಾಯ್ಕ್ ಡಿ.*

# ಕನ್ನಡ ಭಾಷೆ ಮತ್ತು ಸಂಸ್ಕೃತಿ ಉಳಿಸಲು ಕನ್ನಡಿಗರು ಜಾಗೃತರಾಗಬೇಕು

## ಸಂಘದಲ್ಲಿ ನಾಗತಿಹಳ್ಳಿ ಚಂದ್ರಶೇಖರ್



‘ಕನ್ನಡವನ್ನು ಹೆಚ್ಚು ಹೆಚ್ಚು ಬಳಸಿ, ಉಳಿಸಿ, ಬೆಳೆಸಿ ಮುಂದಿನ ಜನಾಂಗಕ್ಕೆ ನೀಡುವುದು ಇಂದಿನ ಕನ್ನಡಿಗರ ಆದ್ಯ ಕರ್ತವ್ಯವಾಗಬೇಕು’ ಎಂದು ಖ್ಯಾತ ಸಾಹಿತಿ ಮತ್ತು ಚಲನಚಿತ್ರ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ ಅವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಅಂಗವಾಗಿ ಇದೇ ನವಂಬರ್ 6ರಂದು ನಡೆದ ಕಾರ್ಯಕ್ರಮದಲ್ಲಿ ‘ಕನ್ನಡ ನಿನ್ನೆ, ಇಂದು ಮತ್ತು ನಾಳೆ’ ಎಂಬ ವಿಷಯದ ಕುರಿತಾಗಿ ಮಾತನಾಡುತ್ತಿದ್ದರು. ಇದೀಗ ತಾನೇ ಹಾಡಿದ ‘ಕನ್ನಡ ನಾಡಗೀತೆ’ ಕುವೆಂಪು ಅವರ ಅತ್ಯಂತ ಸುಂದರ ರಚನೆ. ಕರ್ನಾಟಕದ ಚರಿತ್ರೆ, ಭೂಗೋಳ, ಸಾಹಿತ್ಯ ಪರಂಪರೆ, ಪ್ರಜಾಪ್ರಭುತ್ವ ನೀತಿ ಎಲ್ಲವೂ ಅಡಗಿರುವ ಇದು ಬರೀ ಒಂದು ಗೀತೆಯಷ್ಟೇ ಅಲ್ಲ ಇದೊಂದು “ಕನ್ನಡದ ಧ್ಯಾನ” ಎಂಬುದಾಗಿ ಪ್ರಶಂಸಿಸಿದರು.

ರಾಷ್ಟ್ರಕವಿ ಕುವೆಂಪು ಅವರ ಜೊತೆ ಜ್ಞಾನಪೀಠ ಪ್ರಶಸ್ತಿಯನ್ನು ಹಂಚಿಕೊಂಡ ಸಾಹಿತಿ ಡಾ. ಉಮಾಶಂಕರ ಜೋಷಿ ಅವರನ್ನು ನಾನು ಗುಜರಾತ್‌ನಲ್ಲಿ ಭೇಟಿಯಾಗಿದ್ದೆ. ಆಗ ಅವರು ಕನ್ನಡ ಭಾಷೆಯ ಬಗ್ಗೆ ಅವರಿಗಿದ್ದ ಅಪಾರ ಪ್ರೀತಿ ಮತ್ತು ಗೌರವವನ್ನು ಹಂಚಿಕೊಳ್ಳುತ್ತಾ ಬಸವಣ್ಣನವರ ಅನುಭವ ಮಂಟಪದಲ್ಲಿ ಅರಳಿದ ಪ್ರತಿಭೆ ಅಕ್ಕಮಹಾದೇವಿಯವರ ವಚನಗಳನ್ನು ಓದಿ ಆಕೆಯ ವಿದ್ವತ್ತಿನ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತಪಡಿಸಿದರು. ಅಕ್ಕನ ವಚನಗಳು ಕನ್ನಡ–ಇಂಗ್ಲೀಷ್–ಗುಜರಾತಿ ಭಾಷೆಗೆ ಅನುವಾದಗೊಂಡಿದ್ದ ಒಂದು ಪುಸ್ತಕವನ್ನು ನನಗೆ ತೋರಿಸುತ್ತಾ ಕನ್ನಡದಲ್ಲಿ ಇಂತಹ ಶ್ರೇಷ್ಠ ಸಾಹಿತ್ಯ ರಚನೆ ಆಗುತ್ತಿದ್ದ ಕಾಲದಲ್ಲಿ ಗುಜರಾತಿ ಭಾಷೆ ಇನ್ನೂ ಅಸ್ತಿತ್ವಕ್ಕೇ ಬಂದಿರಲೇ ಇಲ್ಲ ಎಂಬುದಾಗಿ ಹೇಳಿ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಪ್ರಶಂಶಿಸಿದರು ಎಂದು ನಾಗತಿಹಳ್ಳಿಯವರು ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ ಕನ್ನಡವು ಸುಮಾರು 2500 ವರ್ಷಗಳಷ್ಟು ಇತಿಹಾಸ ಹೊಂದಿದ್ದು, ಕರ್ನಾಟಕದ ಇತರ ಭಾಷೆಗಳಾದ ತುಳು, ಕೊಡವ, ಬ್ಯಾರಿ ಮುಂತಾದ ಭಾಷೆಗಳು ಸಹ ಕರ್ನಾಟಕದಲ್ಲಿ ಬೆಳೆಯಲು ಸಹಕರಿಸಿದೆ, ತುಳು ಭಾಷೆಯಲ್ಲಿರುವ ಜಾನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಸೊಗಡು ಕನ್ನಡ ಭಾಷೆಯಷ್ಟೇ ಶ್ರೀಮಂತವಾಗಿದ್ದು ಹಲವಾರು ನಾಟಕ, ಸಿನೆಮಾ ಮತ್ತು ಉತ್ತಮ ಕಥೆ, ಕಾದಂಬರಿಗಳಿಗೆ ವಸ್ತುವಾಗಿವೆ ಎಂದು ಅವರು ಹೇಳಿದರು.

ಪಂಪ, ರನ್ನ, ಪೊನ್ನ, ಬಸವಣ್ಣ, ಅಕ್ಕಮಹಾದೇವಿ, ಪುರಂದರದಾಸ, ಕನಕದಾಸ, ರಾಘವಾಂಕ, ಸರ್ವಜ್ಞ, ಮುದ್ದಣ ಹೀಗೆ ಹಳೆ–ಹೊಸ ಕನ್ನಡ, ನವ್ಯ, ನವೋದಯ, ಬಂಡಾಯ, ದಲಿತ, ದಲಿತೋತ್ತರ ಹಾಗೂ ಸಮಕಾಲೀನ ಸಮಸ್ತ ಕನ್ನಡ ಬರಹಗಾರರ ವಿಶಿಷ್ಟ ಕೊಡುಗೆಗಳನ್ನು ಸ್ಮರಿಸಿದರು. ಇಂತಹ ನಮ್ಮ ಭಾಷೆಯನ್ನು ಉಳಿಸಿಕೊಂಡು ಹೋಗಬೇಕಾದ ಗುರುತರ ಜವಾಬ್ದಾರಿ ನಮ್ಮದು. ನಮ್ಮ ಹಳ್ಳಿಗಳ ಪ್ರಾಥಮಿಕ ಸಾಂಸ್ಕೃತಿಕ ಕೇಂದ್ರಗಳಾದ ಕನ್ನಡ ಪ್ರಾಥಮಿಕ ಶಾಲೆಗಳನ್ನು ನಾವು ಉಳಿಸಿಕೊಳ್ಳಬೇಕಾಗಿದೆ ಎಂದು ಅಭಿಪ್ರಾಯ ಪಟ್ಟರು.

ಇದೇ ಸಂದರ್ಭದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಹಲವಾರು ಸಭಿಕರು ಡಾ. ಚಂದ್ರಶೇಖರ್ ಅವರೊಡನೆ ಮುಕ್ತವಾಗಿ ಮಾತುಕತೆ ನಡೆಸಿದರು. ರಾಜ್ಯದ, ನೆಲ–ಜಲ–ಭಾಷೆ ಮತ್ತು ಗಡಿನಾಡುಗಳ ಜೊತೆಗಿನ ಸಂಬಂಧದ ಕುರಿತ ಪ್ರಶ್ನೆಗಳಿಗೆ ತುಂಬ ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ಉತ್ತರಿಸಿದರು. ಕಾವೇರಿ ಜಲ ವಿವಾದ, ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ, ಗಡಿನಾಡು ಕನ್ನಡಿಗರ ಹಿತರಕ್ಷಣೆ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜಕೀಯ ಇಚ್ಛಾಶಕ್ತಿ ಬಹಳ ಮುಖ್ಯ. ಇಂತಹ ಇಚ್ಛಾಶಕ್ತಿ ಇದ್ದಾಗ ಮಾತ್ರವೇ ಯಾವುದೇ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ ಎಂದು ಅಭಿಪ್ರಾಯಪಟ್ಟರು. ಅಲ್ಲದೆ ಕನ್ನಡ ಭಾಷೆಯ ಭವಿಷ್ಯದ ಕುರಿತಂತೆ ಮಾತನಾಡುತ್ತಾ ಕನ್ನಡ ಭಾಷೆ ಹಿಂದಿನಿಂದಲೂ ಸಂಸ್ಕೃತ ಭಾಷೆ ಜೊತೆ ಕೊಡು ಕೊಳ್ಳುವಿಕೆ ನಡೆಸುತ್ತಿದೆ. ಮುಂದೆಯೂ ಅದು ಬೇರೆ ಬೇರೆ ಭಾಷೆಗಳ ಜೊತೆ ಇದೇ ರೀತಿಯ ಪರಸ್ಪರ ವಿನಿಮಯ ಮಾಡಿಕೊಂಡು ಬಂದಿದೆ. ಕರ್ನಾಟಕ ಏಕೀಕರಣ ಆದಾಗ ಡಾ. ರಾಜಕುಮಾರ್ ಅವರು ಕೊಟ್ಟ ದೊಡ್ಡ ಕೊಡುಗೆ ಏನೆಂದರೆ ರಾಜ್ಯದ ಎಲ್ಲ ಭಾಗಗಳ ಜನರಿಗೂ ಅರ್ಥವಾಗುವಂತಹ ಒಂದು ವಿಶಿಷ್ಟ ರೀತಿಯ ಭಾಷೆಯನ್ನು ತಮ್ಮ ಸಿನೆಮಾದಲ್ಲಿ ಬಳಕೆ ಮಾಡಿದ್ದು. ಈ ಕಾರಣಕ್ಕಾಗಿ ಇಂದು ಕೂಡಾ ನಾಡಿನಾದ್ಯಂತ ಕನ್ನಡ ಸಿನೆಮಾಗಳನ್ನು ಜನ ನೋಡಿ ಆನಂದಿಸುತ್ತಾರೆ. ಹಾಗಾಗಿ ಕನ್ನಡ ಭಾಷೆಯ ಅಭಿವೃದ್ಧಿಗೆ ಸಿನೆಮಾ ಮತ್ತು ಸಾಹಿತ್ಯ ರಂಗ ಎರಡೂ ಅಸಾಧಾರಣ ಕೊಡುಗೆ ನೀಡಿವೆ. ಭಾಷೆ ಎನ್ನುವುದು ಹಣ ಸಂಪಾದನೆಯ ಸರಕಲ್ಲ. ಅದು ಭಾವನಾತ್ಮಕ ಸಂಬಂಧ ಬೆಸೆಯುವ ಬಂಧ ಎಂಬುದಾಗಿ ಅಭಿಪ್ರಾಯ ಪಟ್ಟರು. ಇಂದು ಪ್ರಾಥಮಿಕ ಹಂತದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯ ಮಾಡಬೇಕು. ವಚನಗಳಲ್ಲಿ ಬಳಕೆಯಾಗಿರುವ ಸರಳ ರೂಪದ ಪ್ರಯೋಗಗಳನ್ನು ಅಳವಡಿಸಿಕೊಂಡರೆ ನಮ್ಮ ಮುಂದಿನ ಮಕ್ಕಳಿಗೆ ಅತ್ಯಂತ ಸರಳ ಹಾಗೂ ಸುಂದರ ಕನ್ನಡವನ್ನು ಆಕರ್ಷಕವಾಗಿ ಕಲಿಸುವಂತೆ ಮಾಡಬಹುದಾಗಿದೆ ಎಂದರು.

ಡಾ. ಚಂದ್ರಶೇಖರ್ ಅವರು ತಮ್ಮ ಹಳ್ಳಿಯಲ್ಲಿ ಒಂದು ಸಾಂಸ್ಕೃತಿಕ ವೇದಿಕೆ ಉತ್ತಮ ಕನ್ನಡ ಶಾಲೆ, ಗ್ರಂಥಾಲಯ, ಕಂಪ್ಯೂಟರ್ ಶಿಕ್ಷಣದ ವ್ಯವಸ್ಥೆ ವರ್ಷಕ್ಕೊಮ್ಮೆ ಯುಗಾದಿ ಹಬ್ಬದ ಸಂದರ್ಭದಲ್ಲಿ ಕನ್ನಡ ನಾಡು ನುಡಿ ಸಂಸ್ಕೃತಿಯ ಕುರಿತಾಗಿ ಚರ್ಚೆ, ವಿಮರ್ಶೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಡಾ. ನಾಗತಿಹಳ್ಳಿ ಅವರು ಸುಮಾರು 35 ಕನ್ನಡದ ಕೃತಿಗಳನ್ನು (ಹದ್ದುಗಳು, ನನ್ನ ಪ್ರೀತಿಯ ಹುಡುಗನಿಗೆ, ಮಲೆನಾಡಿನ ಹುಡುಗಿ, ಬಯಲು ಸೀಮೆಯ ಹುಡುಗ, ಬಾ ನಲ್ಲೆ ಮಧುಚಂದ್ರಕೆ, ಅಮೇರಿಕ! ಅಮೇರಿಕ...) (ಕಥೆ, ಕಾದಂಬರಿ, ಪ್ರವಾಸ ಕಥನ, ವಿಮರ್ಶೆಗಳು, ವ್ಯಕ್ತಿಚಿತ್ರಗಳು) ಪ್ರಕಟಿಸಿದ್ದಾರೆ. ಕನ್ನಡದ ಹೆಸರಾಂತ ಸಾಹಿತಿಗಳು, ಕವಿಗಳು ಹಾಗೂ ಸೃಜನಶೀಲ ಬರಹಗಾರ ಕೃತಿಗಳು ಮತ್ತು ಕವನಗಳನ್ನು ಆಧಾರವಾಗಿಟ್ಟುಕೊಂಡು ಸುಮಾರು 15 ಸೃಜನಶೀಲ ಚಲನಚಿತ್ರಗಳಿಗೆ ಚಿತ್ರಕಥೆ, ಸಂಗೀತ ಹಾಗೂ ನಿರ್ದೇಶನ (ಉಂಡೂ ಹೋದ ಕೊಂಡೂ ಹೋದ, ಬಾ ನಲ್ಲೆ ಮಧುಚಂದ್ರಕೆ, ಕೊಟ್ರೇಶಿ ಕನಸು, ಅಮೇರಿಕ! ಅಮೇರಿಕ, ಹೂಮಳೆ....) ಮಾಡಿರುತ್ತಾರೆ. ತಮ್ಮ ಪ್ರತೀ ಚಿತ್ರಗಳಲ್ಲಿ ಒಬ್ಬರಲ್ಲ ಒಬ್ಬ ಹೊಸ ಪ್ರತಿಭೆಗಳನ್ನು ನಟ, ನಟಿಯಾಗಿ ಸಂಗೀತ ನಿರ್ದೇಶಕರಾಗಿ ಅಥವಾ ಹಿನ್ನೆಲೆ ಗಾಯಕರಾಗಿ ಆಯ್ಕೆ ಮಾಡಿ ಪ್ರೋತ್ಸಾಹಿಸಿದ್ದಾರೆ. ಜೊತೆಗೆ ಸುಮಾರು 10 ಧಾರಾವಾಹಿಗಳನ್ನು ಉದಯ ಟಿವಿ., ಝೀ ಟಿವಿ., ಸುವರ್ಣ ಟಿವಿ. ಹಾಗೂ ಟಿವಿ.9 ಗಳಲ್ಲಿ ಕನ್ನಡಿಗರಿಗೆ ಉಣಬಡಿಸಿದ್ದಾರೆ.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ ಡಾ. ನಾಗತಿಹಳ್ಳಿ ಚಂದ್ರಶೇಖರ ಅವರನ್ನು ಈ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರನ್ನಾಗಿ ಬರಮಾಡಿಕೊಂಡು ದೆಹಲಿ ಕನ್ನಡಿಗರೊಡನೆ ನೇರವಾದ ಮಾತುಕತೆಗಳನ್ನು ನಡೆಸಲು ಅವಕಾಶ ಮಾಡಿಕೊಡುವುದರ ಮುಖ್ಯ ಉದ್ದೇಶ ಕರ್ನಾಟಕದ ಒಬ್ಬ ಸೃಜನಶೀಲ ಬರಹಗಾರರು ದೆಹಲಿಯಂತಹ ದೂರದ ಹೊರನಾಡಿನಲ್ಲಿರುವಂತಹ ನಮ್ಮಂತಹ ಕನ್ನಡಿಗರಿಗೆ ಸ್ಫೂರ್ತಿ ಹಾಗೂ ಮಾದರಿಯಾಗಬೇಕೆಂಬುದೇ ಆಗಿದೆ ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶ್ರೀ ಬಸವಪ್ರಭು ಪಾಟೀಲ ಅವರು ಮಾತನಾಡುತ್ತ ಡಾ. ನಾಗತಿಹಳ್ಳಿ ಚಂದ್ರಶೇಖರ ಅವರ ಮಾತುಗಳನ್ನು ಆಲಿಸುವುದೆಂದರೆ ಕನ್ನಡದ ಒಂದು ಸೃಜನಶೀಲ ಕಾವ್ಯವನ್ನು ಆಸ್ವಾದಿಸಿದಂತೆ ಎಂದು ಅಭಿಪ್ರಾಯಪಟ್ಟರು. ತಮ್ಮ ವಕೀಲ ವೃತ್ತಿಯಲ್ಲಿ ಕನ್ನಡದ ಚಟುವಟಿಕೆಗಳಿಗೆ ಸಾಕಷ್ಟು ಸಮಯ ನೀಡಲು ಸಾಧ್ಯವಿಲ್ಲವಾದರೂ ಇಂತಹ ಒಂದು ಅರ್ಥಗರ್ಭಿತ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಂತಹ ಕರ್ನಾಟಕ ಸಂಘಕ್ಕೆ ಕೃತಜ್ಞತೆ ಅರ್ಪಿಸಿದರು.

ದೆಹಲಿ ಕರ್ನಾಟಕ ಸಂಘದ ವತಿಯಿಂದ ಶ್ರೀ ನಾಗತಿಹಳ್ಳಿ ಚಂದ್ರಶೇಖರ ಅವರಿಗೆ ಶಾಲು ಹೊದಿಸಿ, ಫಲ ಪುಷ್ಪಾದಿಗಳನ್ನು ಅರ್ಪಿಸಿ, ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು. ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಶ್ರೀ ನಾಗತಿಹಳ್ಳಿ ಚಂದ್ರಶೇಖರ ಅವರ ನಿರ್ದೇಶನದ ಇತ್ತೀಚಿಗೆ ಬಿಡುಗಡೆಯಾದ ‘ಇಷ್ಟಕಾಮ್ಯ’ ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ಅ

*ಚಂದ್ರಶೇಖರ್ ಎನ್.ಪಿ.*



# ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ

## ಹಂಸಲೇಖರಿಂದ ತರಬೇತಿ ಪಡೆದ ಸ್ಥಳೀಯ ಕಲಾವಿದರ ಸಂಗೀತ ಕಾರ್ಯಕ್ರಮ

ದೆಹಲಿ ಕರ್ನಾಟಕ ಸಂಘದ ವತಿಯಿಂದ ಪ್ರತಿವರ್ಷ ನೀಡಲಾಗುವ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ವಿಶೇಷ ಚೇತನಗಳಿಗೆ ನೃತ್ಯ ನಿರ್ದೇಶಕರಾಗಿ ದುಡಿಯುತ್ತಿರುವ ಅಂತರರಾಷ್ಟ್ರೀಯ ಖ್ಯಾತಿಯ ಕನ್ನಡಿಗ ಸಯ್ಯದ್ ಸಲ್ಲಾವುದ್ದೀನ್ ಪಾಷಾ ಹಾಗೂ ಶಿಕ್ಷಣ ತಜ್ಞ ಮತ್ತು ರಂಗತಜ್ಞ ಡಾ. ಎಸ್.ಎಲ್. ಭಂಡಾರ್‌ಕರ್ ಅವರಿಗೆ ಈ ಸಲದ ರಾಜ್ಯೋತ್ಸವದ ಸಂದರ್ಭದಲ್ಲಿ ಇದೇ ನವಂಬರ್ 13ರಂದು ಸಂಘದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ನೀಡಿ ಗೌರವಿಸಲಾಯಿತು.

ಮೈಸೂರಿನ ಕ್ಷೇತ್ರ ಪ್ರಚಾರ ನಿರ್ದೇಶನಾಲಯದ ಮುಖ್ಯಸ್ಥೆ ಡಾ. ಟಿ.ಸಿ. ಪೂರ್ಣಿಮಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ನಾದಬ್ರಹ್ಮ ಹಂಸಲೇಖ ಮತ್ತು ಸ್ಥಳೀಯ ಕಲಾವಿದರಿಂದ ಹಂಸಲೋಕ ಸಂಗೀತ ಕಾರ್ಯಕ್ರಮವು ಕೂಡಾ ನಡೆಯಿತು.

ಡಾ. ಪೂರ್ಣಿಮಾ ಅವರು ಮಾತನಾಡುತ್ತಾ ದೆಹಲಿಯಲ್ಲಿ ಇಂತಹ ಒಂದು ಅತ್ಯುತ್ತಮವಾದ ಕನ್ನಡ ಕಾರ್ಯಕ್ರಮವನ್ನು ನಡೆಸಿ, ಕನ್ನಡ ನಾಡಿನ ನುಡಿ, ಸಂಸ್ಕೃತಿಯನ್ನು ಬೆಳೆಸಿ ಉಳಿಸಿಕೊಂಡು ಹೋಗುತ್ತಿರುವ ದೆಹಲಿ ಕರ್ನಾಟಕ ಸಂಘದ ಪ್ರಯತ್ನವನ್ನು ಶ್ಲಾಘಿಸಿದರು. "ಕರ್ನಾಟಕದಲ್ಲಿ ನಾವು ಸದಾ ಕಾಲ ಹೇಳುತ್ತಿದ್ದೇವೆ–ಕನ್ನಡಕ್ಕೆ ಅಳಿವು ಬರುತ್ತಿದೆ, ಕನ್ನಡಕ್ಕೆ ವಿನಾಶ ಬರುತ್ತಿದೆ, ಕನ್ನಡವನ್ನು ಉಳಿಸಿ ಅಂತ; ಆದರೆ ನನಗನ್ನಿಸುತ್ತದೆ ಕನ್ನಡವನ್ನು ಉಳಿಸಬೇಕು ಹೇಗೆ ಅನ್ನೋದನ್ನ ನಾವು ದೆಹಲಿ ಕರ್ನಾಟಕ ಸಂಘದಿಂದ ಕಲಿಯಬೇಕು" ಎಂದು ಅವರು ಹೇಳಿದರು. "ನಿಮ್ಮ

> "ಕರ್ನಾಟಕದಲ್ಲಿ ನಾವು ಸದಾ ಕಾಲ ಹೇಳುತ್ತಿದ್ದೇವೆ– ಕನ್ನಡಕ್ಕೆ ಅಳಿವು ಬರುತ್ತಿದೆ, ಕನ್ನಡಕ್ಕೆ ವಿನಾಶ ಬರುತ್ತಿದೆ, ಕನ್ನಡವನ್ನು ಉಳಿಸಿ ಅಂತ; ಆದರೆ ನನಗನ್ನಿಸುತ್ತದೆ ಕನ್ನಡವನ್ನು ಉಳಿಸಬೇಕು ಹೇಗೆ ಅನ್ನೋದನ್ನ ನಾವು ದೆಹಲಿ ಕರ್ನಾಟಕ ಸಂಘದಿಂದ ಕಲಿಯಬೇಕು "ನಿಮ್ಮ ದಮನಿಗಳಲ್ಲಿ ತುಂಬಿಕೊಂಡಿರುವ ರಕ್ತದಲ್ಲಿರುವ ಕನ್ನಡದ ಶ್ರದ್ಧೆಯನ್ನು ಕರ್ನಾಟಕದಲ್ಲಿರುವ ನಾವು ನಮ್ಮಲ್ಲಿ ತುಂಬಿಕೊಳ್ಳಬೇಕು"– **ಡಾ. ಟಿ.ಸಿ. ಪೂರ್ಣಿಮಾ**

ದಮನಿಗಳಲ್ಲಿ ತುಂಬಿಕೊಂಡಿರುವ ರಕ್ತದಲ್ಲಿರುವ ಕನ್ನಡದ ಶ್ರದ್ಧೆಯನ್ನು ಕರ್ನಾಟಕದಲ್ಲಿರುವ ನಾವು ನಮ್ಮಲ್ಲಿ ತುಂಬಿಕೊಳ್ಳಬೇಕು" ಎಂದರು. ಪಿಟೀಲು ಚೌಡಯ್ಯನವರು ಹೇಳುತ್ತಿದ್ದ "ಮೊದಲು ಯೋಗ್ಯತೆಯನ್ನು ಸಂಪಾದನೆ ಮಾಡಿಕೊ, ಯೋಗ ತನ್ನಿಂದ ತಾನೇ ಬರುತ್ತದೆ ಎಂಬ ಮಾತಿಗೆ ಹಂಸಲೇಖ ಅವರು ಒಂದು ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ. ಆವರು ಕರ್ನಾಟಕದ ಸಿನಿಮಾ ರಂಗ 'ನಾದಬ್ರಹ್ಮ' ಅಷ್ಟೇ ಅಲ್ಲ ಸಂಗೀತ ಕ್ಷೇತ್ರದ ಸಂಗೀತ ನಾದಬ್ರಹ್ಮ" ಎಂದು ಡಾ. ಪೂರ್ಣಿಮಾ ಅವರು ಹೇಳಿದರು.

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮುಖ್ಯ ಅಥಿತಿಗಳಾಗಿದ್ದ ನಾದ ಬ್ರಹ್ಮ ಹಂಸ ಲೇಖ ಅವರು ಮಾತನಾಡಿ ಇಂದು ನಮ್ಮನ್ನೆಲ್ಲ ಇಲ್ಲಿ ಸೇರುವಂತೆ ಮಾಡಿರುವುದು ಕನ್ನಡ. ಕನ್ನಡದಲ್ಲಿಯೇ ನನ್ನ ಪ್ರೀತಿ, ಕೋಪ ಎಲ್ಲ ಭಾವನೆಗಳನ್ನು ವ್ಯಕ್ತಪಡಿಸಿಕೊಂಡು ಬದುಕು ಕಟ್ಟಿಕೊಂಡವರು ನಾನು ನನ್ನ ಧರ್ಮ ಪತ್ನಿ ಎಂದು ಹೇಳಿದ ಅವರು 'ಬೆಂಗಳೂರು' ಎನ್ನುವ ಹೆಸರು ಮೂಲತಃ " ಬೆಂದಕಾಳೂರು" ಎನ್ನುವ ಪದದಿಂದ ಬಂದಿದೆ. ಇದರರ್ಥ ಬೆಂಗಳೂರಿನ ನೀರಿಗೆ ಎಂತಹ "ಕಾಳ"ನ್ನಾದರೂ ಬೇಯಿಸುವ ಶಕ್ತಿಯಿತ್ತು ಎನ್ನುವುದು. ಆದರೆ ಇವೊತ್ತಿನ ದಿವಸ ಬೆಂಗಳೂರಿನಲ್ಲಿ ಕನ್ನಡಿಗರ "ಬೇಳೆ"ಯೇ ಬೆಯದಂತಾಗಿದೆ ಎಂಬುದನ್ನು ಅತ್ಯಂತ ಮಾರ್ಮಿಕವಾಗಿ ಹೇಳಿ ಇಂದು ಕರ್ನಾಟಕದಲ್ಲಿ ಅದರಲೂ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಕ್ಕೆ ಒದಗಿರುವ ಸ್ಥಿತಿಯನ್ನು ಕುರಿತು ತಿಳಿಹಾಸ್ಯದಿಂದಲೇ ಸಭಿಕರ ಗಮನ ಸೆಳೆದದ್ದು ಅರ್ಥಪೂರ್ಣವಾಗಿತ್ತು. ಮುಂದುವರೆದು ಕನ್ನಡ ಒಂದು ಜೀವಂತ ಭಾಷೆ. ಅದು ಏನೆಲ್ಲಾ ಸವಾಲುಗಳನ್ನು ಎದುರಿಸಿ ದಿಟ್ಟವಾಗಿ ಬೆಳೆಯುವ ಶಕ್ತಿ ಕನ್ನಡಕ್ಕಿದೆ ಎಂದು ಧೃಢ ವಿಶ್ವಾಸ ವ್ಯಕ್ತ ಪಡಿಸಿದರು

ನಾದಬ್ರಹ್ಮ ಹಂಸಲೇಖ ಮತ್ತು ಶ್ರೀಮತಿ ಲತಾ ಹಂಸಲೇಖ ಅವರನ್ನು ಈ ಸಂದರ್ಭದಲ್ಲಿ ಗೌರವಾದರಗಳಿಂದ ಶಾಲು ಹೊದಿಸಿ, ಫಲ ಪುಷ್ಪಾದಿಗಳನ್ನು ನೀಡಿ, ಮೈಸೂರು ಪೇಟ ತೊಡಿಸಿ ಸಂಘದ ವಿಶೇಷ ಸ್ಮರಣಿಕೆಯನ್ನು ನೀಡಿ ಅಭಿನಂದಿಸಲಾಯಿತು. 'ಕನ್ನಡ ಚಿತ್ರರಂಗ ಅನೇಕ ಪರ ಭಾಷಾ ಕಲಾವಿದರಿಂದ ಮತ್ತು ಸಂಗೀತಗಾರರಿಂದ ತುಂಬಿರುವ ಕಾಲವೊಂದಿತ್ತು ಆದರೆ ಕ್ರಮೇಣ ಕನ್ನಡ ಚಲನಚಿತ್ರ ಸಂಗೀತವು ತನ್ನ ನೆಲೆಯನ್ನು ತಾನೇ ಕಂಡುಕೊಂಡು ವಿಶಿಷ್ಟವಾಗಿ ಬೆಳೆಯಿತು' ಎಂದು ಹಂಸಲೇಖ ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸುಪ್ರೀಂಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ಸಂಜಯ್ ಹೆಗ್ಡೆ ಅವರು ಮಾತನಾಡುತ್ತಾ ಹೊರನಾಡಿನಲ್ಲಿದ್ದು ರಾಜ್ಯೋತ್ಸವದ ಸಂಭ್ರಮದಲ್ಲಿ ಕನ್ನಡಿಗರೊಂದಿಗೆ ಮಾತಾಡುವುದು ಸಂತಸ ತಂದಿದೆ ಎಂದರು.

ಬೆಂಗಳೂರಿನ ಸಾಂಸ್ಕೃತಿಕ ಸಂಘಟಕರಾಗಿರುವ ಶ್ರೀ ದೀಪಕ್ ಶೆಟ್ಟಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭ ಹಾರೈಸಿದರು. "ಈ ವೇದಿಕೆಯಲ್ಲಿ ಎಲ್ಲ ಹಿರಿಯರೊಂದಿಗೆ, ಸಾಧಕರೊಂದಿಗೆ ತಾರೆಗಳಂತಹ ಮೇರು ವ್ಯಕ್ತಿತ್ವದೊಂದಿಗೆ ವೇದಿಕೆ ಹಂಚಿಕೊಳ್ಳುವಂತಹ ಅತ್ಯಂತ ಕಿರಿಯವ ನಾನು ಒಂದು ಬಿಂದುವಿಗೆ ಸಮಾನ" ಎಂದು ಅವರು ಹೇಳಿದರು. "ಕರ್ನಾಟಕದ ಏಕೀಕರಣದ ವಜ್ರ ಮಹೋತ್ಸವವನ್ನು ಎಲ್ಲ ಕನ್ನಡಿಗರು ಎಲ್ಲ ಕಡೆ ಆಚರಿಸುತ್ತಾ ಇದ್ದಾರೆ. 60 ವರ್ಷಗಳು ಸಂದು ಹೋಗಿವೆ. ಅಂತಹ ಒಂದು ಸುಂದರ ಸಮಾರಂಭ ಇಂದು ರಾಷ್ಟ್ರದ ರಾಜಧಾನಿಯಾದಂತಹ ದೆಹಲಿಯಲ್ಲಿ ನಡೆಯುತ್ತಿದೆ. ನಾದಬ್ರಹ್ಮ ಹಂಸಲೇಖ ಅವರ ನೇತೃತ್ವದ ಸಂಗೀತ ಕಾರ್ಯಕ್ರಮದೊಂದಿಗೆ. ಈ ಸಾಂಸ್ಕೃತಿಕ ಉತ್ಸವದಲ್ಲಿ ನಿಮ್ಮೊಂದಿಗೆ ಇರಲು ನಿಜವಾಗಿಯೂ ಸಂತಸವಾಗುತ್ತಿದೆ" ಎಂದರು.

"ಸಿರಿಗನ್ನಡವು ರಾಷ್ಟ್ರದ ರಾಜಧಾನಿಯಲ್ಲಿ ಮಾರ್ದನಿಸುವಂತೆ ಮಾಡುತ್ತಿರುವಂತಹ ತಾವೆಲ್ಲರೂ ನಿಜಕ್ಕೂ ಅಸಾಮಾನ್ಯರು ಹಾಗೂ ಅನುಕರಣೀಯರು. ಬೆಂಗಳೂರಿನಲ್ಲಿ ಕನ್ನಡದ ಉಳಿವಿಗೆ ಹಾಗೂ ಬೆಳವಣಿಗೆಗೆ ಚಿಂತಿಸುವಂತಹ ಕಾಲಘಟ್ಟದಲ್ಲಿ, ಅಲ್ಲಿಂದ ಸಾವಿರಾರು ಮೈಲಿಗಳ ದೂರದಲ್ಲಿರುವ ತಾವೆಲ್ಲ ಕನ್ನಡ ಡಿಂಡಿಮವನ್ನು ರಾಷ್ಟ್ರಕ್ಕೆ ಸಾರಿ ಹೇಳುವಂತಹ ತಾಯಿ ಭುವನೇಶ್ವರಿಯ ಕೈಂಕರ್ಯದಲ್ಲಿ ತಾವು ತೊಡಗಿಸಿಕೊಂಡಿದ್ದೀರಿ. ಅಲ್ಲದೆ ಕನ್ನಡದ, ಕನ್ನಡಿಗರ ಸಮಸ್ಯೆಗಳನ್ನು ನಮ್ಮ ಅಗತ್ಯಗಳನ್ನು

ಕೇಂದ್ರ ಸರ್ಕಾರಕ್ಕೆ ಮುಟ್ಟಿಸುವ ಪ್ರಯತ್ನಗಳು ಸಹ ಈ ಸಂಘದ ಮೂಲಕ ಆಗುತ್ತಿದೆ, ಆ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವಂತಹ ನಿಮ್ಮನ್ನು ನಾನು ಅಭಿನಂದಿಸುತ್ತಿದ್ದೇನೆ" ಎಂದರು. ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುತ್ತಿರುವ ಸಾಹಿತ್ಯ ಕಾರ್ಯಕ್ರಮಗಳು, ಸಾಂಸ್ಕೃತಿಕ ಉತ್ಸವಗಳು ಹಾಗೂ ಕಾವೇರಿ ಹೋರಾಟದಂತಹ ಜನಪರ ನಿಲುವಿನ ಹೋರಾಟಗಳ ಕ್ರಿಯಾಶೀಲತೆ ಹಾಗೂ ಭಾಷಾಭಿಮಾನ ಇನ್ನೂ ಹೆಚ್ಚುತ್ತಿರಲಿ ಎಂದು ಹಾರೈಸಿದರು.

"ಈ ವರ್ಷ ಕರ್ನಾಟಕ ಏಕೀಕರಣದ ವಜ್ರಮಹೋತ್ಸವ. ಆದರೆ ಈ ಏಕೀಕರಣದ ಕಲ್ಪನೆ ಅನ್ನುವಂತಹದ್ದು ಶತಮಾನಗಳಿಗೂ ಹಿಂದಿನದ್ದು. 1906ರಲ್ಲಿ ಬೆನೆಗಲ್ ರಾಮರಾಯರು ಈ ಕರ್ನಾಟಕದ ಏಕೀಕರಣದ ಬಗ್ಗೆ ಮಾತನಾಡಿದ್ದರು, ಅಲ್ಲದೆ ಸ್ವಾತಂತ್ರ್ಯೋತ್ಸವದ ಚಳುವಳಿಯ ಸಂದರ್ಭದಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಸಿದ್ದಪ್ಪ ಕಂಬಳಿಯವರು ಏಕೀಕರಣದ ಬಗ್ಗೆ ಮಾತನಾಡಿದ್ದರು, ಇಂತಹ ಅನೇಕ ಶತಮಾನಗಳ ಕನಸು, ಅನೇಕ ದಶಕಗಳ ಕನಸು ನವೆಂಬರ್ 1, 1956ರಂದು ಅಂದಿನ ರಾಷ್ಟ್ರಪತಿ ಡಾ. ಬಾಬುರಾಜೇಂದ್ರ ಪ್ರಸಾದ್ ಕನ್ನಡನಾಡಿನ ಉದಯವನ್ನು ಪ್ರಕಟಿಸುವುದರ ಮೂಲಕ ಆಯಿತು. 1973ರಲ್ಲಿ 'ಕರ್ನಾಟಕ' ಎನ್ನುವಂತಹ ಹೆಸರನ್ನೂ ಸಹ ನಾವೆಲ್ಲ ಗಳಿಸಿದ್ದೇವೆ. ನಮಗೆ ರಾಜ್ಯ ಸಿಕ್ಕಿತು, ನಮ್ಮ ಭಾಷಾವಾರು ಪ್ರಾಂತ್ಯವಿಂಗಡನೆಯ ಮೂಲಕ ನಾವೆಲ್ಲ ಕನ್ನಡಿಗರು ಒಂದಾದೆವು. ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ, ಕೃಷಿಕವಾಗಿ ಹಾಗೂ ಕ್ರೀಡೆಯೂ ಸೇರಿದಂತಹ ಅನೇಕ ಕ್ಷೇತ್ರಗಳಲ್ಲಿ ರಾಷ್ಟ್ರಮಾನ್ಯವಾದಂತಹ ಸಾಧನೆಯನ್ನು ಮಾಡಿದ್ದೇವೆ. ಆದರೂ ಇತ್ತೀಚಿನ ದಿನಗಳಲ್ಲಿ ಭಾಷೆಯ ಮೇಲಿನ ಅಭಿಮಾನ ಹಾಗೂ ಹೆಮ್ಮೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆಯೇನೋ ಎನ್ನುವಂತಹ ಒಂದು ಸಂದೇಹ ಸಹ ಕಾಡುತ್ತಾ ಇದೆ. ಇಂಟರ್‌ನೆಟ್ ಯುಗದಲ್ಲಿ ಭಾಷೆಯನ್ನು ಓದುವಂತಹ ಹವ್ಯಾಸ ಕಮ್ಮಿಯಾಗುತ್ತಾ ಇದೆ, ಇದರ ಮೂಲಕ ಮುಂದಿನ ದಿನಗಳಲ್ಲಿ ಸಾಹಿತ್ಯದ ಬೆಳವಣಿಗೆ ದುಸ್ಸಾಹಸವಾಗಲಿದೆ. ಇಂತಹ ಸಂದರ್ಭದಲ್ಲಿ ಕನ್ನಡಿಗರಾದಂತಹ ನಾವೆಲ್ಲ ಚಿಂತಿಸಬೇಕಾಗಿದೆ, ನಮ್ಮಿಂದಾದ ಅಳಿಲು ಸೇವೆಯನ್ನು ಈ ನಾಡಿಗೋಸ್ಕರ, ಭಾಷೆಗೋಸ್ಕರ ಮಾಡಬೇಕಾಗಿದೆ. ಎಲ್ಲಕಿಂತ ಹೆಚ್ಚಾಗಿ ಮುಂದಿನ ಪೀಳಿಗೆಗೆ ನಮ್ಮ ಕನ್ನಡವನ್ನು, ನಮ್ಮ ಸಂಸ್ಕೃತಿಯನ್ನು ಪರಿಚಯಿಸುವಂತಹ ಆ ಪ್ರಯತ್ನವನ್ನು ನಾವೆಲ್ಲ ಮಾಡಬೇಕಾಗಿದೆ. ಕನ್ನಡ ಹಾಗೂ ಕನ್ನಡತನದ ಹಿರಿಮೆ ಗರಿಮೆಗಳು ವಿಶ್ವಮಾನ್ಯವಾಗಲಿ" ಎಂದು ಶ್ರೀ ದೀಪಕ್ ಶೆಟ್ಟಿಯವರು ಹಾರೈಸಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸ್ವಾಗತ ಭಾಷಣ ಮಾಡುತ್ತಾ ಸ್ಥಳೀಯ ಕಲಾವಿದರನ್ನು ಒಟ್ಟು ಸೇರಿಸಿ ಒಂದು ಒಳ್ಳೆಯ ಸಂಗೀತ ಕಾರ್ಯಕ್ರಮವನ್ನು ಸಂಘದ ಕಾರ್ಯಕಾರಿ ಸಮಿತಿಯು ನೀಡುತ್ತಿದೆ. ಈ ವರ್ಷ ವಿಭಿನ್ನ ರೀತಿಯಲ್ಲಿ ಆಚರಿಸುವ ಬಗ್ಗೆ ನಾವು ತೀರ್ಮಾನಿಸಿ ಡಾ. ಹಂಸಲೇಖ ಅವರನ್ನು ಕರೆಸಿ ನಾಲ್ಕೈದು ದಿವಸಗಳಿಂದ ಸತತ ಪರಿಶ್ರಮದೊಂದಿಗೆ ಈ ಕಾರ್ಯಕ್ರಮವನ್ನು ನಡೆಸಲಾಗಿದೆ ಎಂದರು.

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪಡೆದ ಸಯ್ಯದ್ ಸಲ್ಲಾವುದ್ದೀನ್ ಪಾಷಾ ಅವರು ಮಾತಾಡುತ್ತಾ "ದೆಹಲಿ ಕರ್ನಾಟಕ ಸಂಘವು ಮಾಡುತ್ತಿರುವ ಕನ್ನಡ ಸೇವೆಯನ್ನು ಗಮನಿಸುವಾಗ ಅದು ನನಗೆ ನೀಡಿದ ಪ್ರಶಸ್ತಿಯು ಕನ್ನಡಿಗನಾಗಿ ನನಗೆ ಅದು ಭಾರತ ರತ್ನಕ್ಕಿಂತಲೂ ಮೇಲು" ಎಂದರು. "ಕರ್ನಾಟಕದ ಮಣ್ಣಿನಲ್ಲಿ ಜನ್ಮ ತಗೊಂಡ ಕೂಡಲೇ ಕನ್ನಡ ಭಾಷೆ. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ನನ್ನ ರಕ್ತದ ಕಣಕಣದಲ್ಲಿ ಕನ್ನಡ ಹರಿಯುತ್ತಿದೆ. ಸತತವಾಗಿ 30ವರ್ಷದಲ್ಲಿ ನಾನು ಕನ್ನಡವನ್ನು ಎಲ್ಲಿ ಹೋದರೂ ಸಹ ಬಿಟ್ಟಿಲ್ಲ. ನಾನು ಒಬ್ಬ ಕರ್ನಾಟಕದಿಂದ ಬಂದಿದ್ದೀನಿ ನಾನು ಒಬ್ಬ ಕನ್ನಡಿಗ ಅಂತ ಹೇಳಿ ನನ್ನ ಹೃದಯದಿಂದ ಹೇಳ್ತಾ ಇದ್ದೇನೆ" ಎಂದರು.

ಮತ್ತೊಬ್ಬ ಪ್ರಶಸ್ತಿ ವಿಜೇತ ಡಾ. ಎಸ್.ಎಲ್. ಭಂಡಾರ್‌ಕರ್ ಅವರು ಮಾತಾಡಿ "ನನ್ನನ್ನು ಶಿಕ್ಷಣತಜ್ಞ ಎಂದು ಗುರುತಿಸಿ ನಾನು ಇನ್ನೂ ಅನೇಕ ಕೆಲಸಗಳನ್ನು ಮಾಡಲು ದೆಹಲಿ ಕರ್ನಾಟಕ ಸಂಘವು ಒಂದು ಪ್ರೇರಣೆಯನ್ನು ನೀಡಿದೆ" ಎಂದರು. "ನಾನು ಅನೇಕ ಪುಸ್ತಕಗಳನ್ನು, ಪ್ರಬಂಧಗಳನ್ನು ಮಂಡಣೆ ಮಾಡಿದ್ದೇನೆ. ಹಾಗೇ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡ್ತಾ ಇದ್ದೇನೆ. ನಾನು ಸುಮಾರು 10–12ಗಂಟೆ ಕೆಲಸ ಮಾಡ್ತಾ ಇದ್ದೆ. ಆದರೆ ಇವತ್ತಿನ ಒಂದು ಸನ್ಮಾನದ ಮೂಲಕ ಇವರು ನನಗೆ 18 ಗಂಟೆ ಕೆಲಸ ಮಾಡೂಂತ ಹೇಳಿದ್ದಾರೆ" ಎಂದು ಹೇಳಿ ಸಂತಸಪಟ್ಟರು. "ನಾನು ರಂಗಕರ್ಮಿ ಅಂತೂ ಹೌದು. ನಾನು ಅನೇಕ ನಾಟಕಗಳನ್ನು ನಿಮ್ಮೆದುರಿಗೆ ಮಾಡಿದ್ದೆ" ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಪ್ರಸ್ತಾವನೆ ಮಾತುಗಳನ್ನು ಆಡಿದರು. ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪಡೆದವರ ಮತ್ತು ಡಾ. ಹಂಸಲೇಖ ಅವರ ಕಿರುಪರಿಚಯವನ್ನು ಶ್ರೀ ಎನ್.ಪಿ. ಚಂದ್ರಶೇಖರ್ ಅವರು ಮಾಡಿಕೊಟ್ಟರು.

ಸಭಾ ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸುಮಾರು 75–80 ಮಂದಿ ಮಕ್ಕಳು, ಮಹಿಳೆಯರು ಮತ್ತು ಪುರುಷರು ಸೇರಿ, ನಮ್ಮ ದೇಶದ ಹಾಗೂ ರಾಜ್ಯದ ನೂರಾರು ಜನ ಸ್ವಾತಂತ್ರ್ಯ ಹೋರಾಟಗಾರರ ಬಲಿದಾನ ಹಾಗೂ ಇಂದಿನ ಭಯೋತ್ಪಾದನೆಯ ಕುರಿತಂತೆ ಒಂದು ಸಂವೇದನಾಶೀಲ ವಸ್ತುವನ್ನು ಒಳಗೊಂಡ 'ಭರತಭೂಮಿ ವರಪುತ್ರ' ಎಂಬ ಸಂಗೀತ ನಾಟಕವನ್ನು ಅಭಿನಯಿಸಿ ನೆರೆದ ಸಭಿಕರ ಎದೆಯನ್ನು ತಟ್ಟಿದರು. ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಪುರುಷೋತ್ತಮ ಬಿಳಿಮಲೆ ಅವರು ಸ್ಥಳೀಯ ಕಲಾವಿದರ ಸಂಗೀತ ನಾಟಕವನ್ನು ವೀಕ್ಷಿಸಿದ ನಂತರ ದೆಹಲಿಯಲ್ಲಿ ಇಂತಹ ಒಂದು ಅದ್ಭುತವಾದಂತಹ ನೃತ್ಯರೂಪಕವನ್ನು ಕನ್ನಡ ಅರಿಯದ ಹಲವಾರು ಹೊಸ ತಲೆಮಾರಿನ ಪುಟಾಣಿಗಳನ್ನು ಸೇರಿಸಿಕೊಂಡು ಕನ್ನಡದಲ್ಲಿ ಅವರಿಂದ ಹಾವಭಾವ ಮತ್ತು ಅಭಿವ್ಯಕ್ತಿಯನ್ನು ಮೂಡಿಸಿದ್ದು ಒಂದು ಬಹಳ ಅದ್ಭುತವಾದ ಸಾಧನೆ ಎಂದು ನುಡಿದರು.

ದೆಹಲಿ ಕರ್ನಾಟಕ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ 61 ನೇ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ತಿಂಗಳ ಪೂರ್ತಿ ಹಮ್ಮಿಕೊಂಡಿರುವ ಕಾರ್ಯಕ್ರಮದಡಿಯಲ್ಲಿ ನಾದಬ್ರಹ್ಮ ಹಂಸಲೇಖ ಅವರಿಂದ ತರಬೇತಿಗೊಂಡ ದೆಹಲಿಯ ಸುಮಾರು 300ಕ್ಕೂ ಹೆಚ್ಚು ಸ್ಥಳೀಯ ಕಲಾವಿದರು ಅವರ ನಿರ್ದೇಶನದಲ್ಲಿಯೇ ನಡೆದ ಸಂಗೀತ ಮತ್ತು ನೃತ್ಯರೂಪಕಗಳಲ್ಲಿ ಪಾಲ್ಗೊಂಡರು. ನಂತರ ಸುಮಾರು 150ಕ್ಕೂ ಹೆಚ್ಚು ಮಕ್ಕಳು ಮಹಿಳೆಯರು ಮತ್ತು ಪುರುಷರು ಹಂಸಲೇಖ ತಂಡದವರ ಸಂಗೀತ ಸಂಯೋಜನೆಯಲ್ಲಿ ಸಿದ್ಧಗೊಂಡ 'ಹಂಸಲೋಕ' ಸಂಗೀತ ಕಾರ್ಯಕ್ರಮದಲ್ಲಿ ಹಾಡಿ ನೆರೆದ ಪ್ರೇಕ್ಷಕರನ್ನು ರಂಜಿಸಿದರು.

ಕನ್ನಡ ಚಲನಚಿತ್ರ ಲೋಕಕ್ಕೆ ಅದ್ಭುತವಾದ ಸಂಗೀತ ನೀಡಿ ಒಂದು ಹೊಸ ಅಲೆಯನ್ನೇ ಸೃಷ್ಟಿಸಿದ ಡಾ. ಹಂಸಲೇಖ ಅವರು ದೆಹಲಿಯ ಕನ್ನಡಿಗರಿಗೆ ತಮ್ಮ ಮೃದು ಮತ್ತು ಹಾಸ್ಯದಿಂದ ಕೂಡಿದ ಭಾಷೆ ಮತ್ತು ಸಂಭಾಷಣೆಗಳಿಂದ ನಗು ನಗುತ್ತಲೇ ಸುಮಾರು ಒಂದು ಗಂಟೆಗಳ ಕಾಲ ಸಂವಾದ ಕಾರ್ಯಕ್ರಮ ನಡೆಸಿ ನೆರೆದ ಸಭಿಕರು ಕೇಳಿದ ಹಲವಾರು ಪ್ರಶ್ನೆಗಳಿಗೆ ಸೂಕ್ಷ್ಮ ಮತ್ತು ಸುಂದರವಾಗಿ ಸ್ಪಂದಿಸಿದರು. ನಾವು–ನೀವು ಎಲ್ಲರೂ ಸೇರಿ ಕನ್ನಡವನ್ನು ಬೆಳೆಸಿ ಉಳಿಸೋಣ ಎಂದು ಆಶಿಸಿದರು. ಅ

***ಸಖಾರಾಮ ಉಪ್ಪೂರು***





# ವಿಶಿಷ್ಟ ಕನ್ನಡಿಗ ಪ್ರಶಸ್ತಿ ವಿಜೇತ ಶ್ರೀ ಸೈಯದ್ ಸಲ್ಲಾವುದ್ದೀನ್ ಪಾಷಾ



## ಅಂತರರಾಷ್ಟ್ರೀಯ ಖ್ಯಾತಿಯ ನೃತ್ಯ ಕಲಾವಿದ ಮತ್ತು ನೃತ್ಯ ಸಂಯೋಜಕ

ಸೈಯದ್ ಸಲ್ಲಾವುದ್ದೀನ್ ಪಾಷಾ ಅವರು ಕಳೆದ 30 ವರ್ಷದಿಂದ ವಿಕಲ ಚೇತನರಿಗೆ ನೃತ್ಯ ತರಬೇತಿಯನ್ನು "ಎಬಿಲಿಟಿ ಅನ್‌ಲಿಮಿಟೆಡ್" ಸಂಸ್ಥೆಯ ಮೂಲಕ ನೀಡುತ್ತಾ ಬಂದಿದ್ದಾರೆ. ವಿಕಲಚೇತನರಿಗೆ ಗಾಲಿಕುರ್ಚಿಯ ಮೇಲೆ ಗಂಟೆಗಟ್ಟಲೆ ಕುಳಿತು ಶಾಸ್ತ್ರೀಯ ನೃತ್ಯ ಕಲೆಗಳನ್ನು ಕಲಿಸಿ, ಅವರ ಕಲೆಯನ್ನು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ವೇದಿಕೆಯ ಮೇಲೆ ಪ್ರದರ್ಶಿಸಿ ಅವರಿಗೆ ಸಮಾಜದಲ್ಲಿ ಸಮಾನತೆ, ಗೌರವ ಮತ್ತು ಸಬಲೀಕರಣಕ್ಕಾಗಿ ತಮ್ಮ ಜೀವನವನ್ನು ಸಮರ್ಪಿಸಿದ್ದಾರೆ. ಇವರು ವಿಕಲಚೇತನರಿಗಾಗಿ ಗಾಲಿ ಕುರ್ಚಿಯ ಮೇಲೆ ಆವಿಷ್ಕಾರ ಮಾಡಿ ಸಂಯೋಜಿಸಿರುವ ರಾಮಾಯಣ ಆನ್ ವೀಲ್ಸ್, ಭಗವದ್ಗೀತಾ ಆನ್ ವೀಲ್ಸ್, ಯೋಗಾ ಆನ್ ವೀಲ್ಸ್, ಭರತನಾಟ್ಯ ಆನ್ ವೀಲ್ಸ್, ಸೂಫಿ ಆನ್ ವೀಲ್ಸ್ ಹೀಗೆ ನೂರಕ್ಕೂ ಹೆಚ್ಚು ನೃತ್ಯ ರೂಪಕಗಳು ಮತ್ತು ಹತ್ತು ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ವಿಶ್ವದಾದ್ಯಂತ ನೀಡಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ಗಿನ್ನೆಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ವಿಶ್ವ ದಾಖಲೆ ಸ್ಥಾಪಿಸಿದ್ದಾರೆ.

ವಿಕಲ ಚೇತನರಿಗೆ ಕಲೆಯ ಮೂಲಕ ಸಮಾಜದಲ್ಲಿ ಘನತೆ, ಸಬಲೀಕರಣಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ. ನೃತ್ಯ ಸಂಯೋಜನೆಯ ಮೂಲಕ ವಿಶೇಷ ನೃತ್ಯ ರೂಪಕಗಳನ್ನು ಗಾಲಿಕುರ್ಚಿಯ ಮೇಲೆ ಆವಿಷ್ಕಾರ ಮಾಡಿ ವಿಕಲಚೇತನರಿಗೆ ತರಬೇತಿ ನೀಡಿ, ಅವರಿಗೆ ಕಲಾಕ್ಷೇತ್ರದಲ್ಲಿ ಹೊಸ ಆಯಾಮವನ್ನು ನೀಡಿ ಅವರಿಗೆ ನೃತ್ಯದ ಮೂಲಕ ಹೊಸ ಜೀವನವನ್ನು ನೀಡಿ ಸಮಾಜದಲ್ಲಿ ಘನತೆ, ಗೌರವವನ್ನು ನೀಡಿದ್ದಕ್ಕಾಗಿ ಮತ್ತು ಸಬಲೀಕರಣಕ್ಕಾಗಿ ದೇಶದ ಪ್ರತಿಷ್ಠಿತ "ಸಂಸ್ಕೃತಿ ಫೌಂಡೇಶನ್"ರವರಿಂದ ಕರ್ಮವೀರ ಪುರಸ್ಕಾರ ಪಡೆದಿದ್ದಾರೆ. ಪಾಷಾರವರು ವಿಶೇಷ ನೃತ್ಯ ತರಬೇತಿ ಮೂಲಕ ವಿವಿಧ ರೀತಿಯ ಅಂಗವಿಕಲ ಮಕ್ಕಳಿಗೆ ಶಾಸ್ತ್ರೀಯ ನೃತ್ಯ ಸಂಯೋಜನೆಯನ್ನು ಮೂಡಿಸಿರುವ ಅಸಾಧಾರಣ ಸೇವೆಯನ್ನು ಸ್ಮರಿಸುತ್ತಾ ಕರ್ನಾಟಕದ ಅಂದಿನ ರಾಜ್ಯಪಾಲರಾದ ಶ್ರೀಮತಿ ವಿ.ಎಸ್. ರಮಾದೇವಿಯವರು ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ 1995ರಿಂದ 1998ರವರೆಗೆ ಅವರು ಹಲವಾರು ನೃತ್ಯ ಕಾರ್ಯಾಗಾರಗಳು, ನೃತ್ಯೋತ್ಸವಗಳು ಮತ್ತು ಅಕಾಡೆಮಿಯ ಕಾರ್ಯಗಳನ್ನು ನಿರ್ವಹಿಸಿದ್ದಾರೆ.

ವಿಕಲಚೇತನರಿಗಾಗಿ ಗಾಲಿಕುರ್ಚಿ ಮೇಲೆ ನೂರಕ್ಕೂ ಹೆಚ್ಚು ವಿಶೇಷ ನೃತ್ಯ ಸಂಯೋಜನೆ ಮತ್ತು ವಿಶ್ವದಾದ್ಯಂತ ಹತ್ತು ಸಾವಿರಕ್ಕೂ ಅಧಿಕ ಪ್ರದರ್ಶನಗಳನ್ನು ನೀಡಿ ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ವಿಶ್ವದಾಖಲೆಯನ್ನು ಮಾಡಿದ್ದಾರೆ. ಯುರೋಪ್ ಖಂಡದ ಇತಿಹಾಸದಲ್ಲಿ ಪ್ರಥಮ ಬಾರಿಗೆ ವಿಕಲಚೇತನರ ಅತಿದೊಡ್ಡ ನೃತ್ಯ ರೂಪಕ 2003ರಲ್ಲಿ ನಡೆಸಿದರು. ಫಿನ್‌ಲ್ಯಾಂಡ್ ದೇಶದ ನೂರಕ್ಕೂ ಹೆಚ್ಚು ವಿವಿಧ ಪ್ರಕಾರದ ಅಂಗವಿಕಲತೆಯ ಮಕ್ಕಳಿಗೆ ರಾಮಾಯಣ ನೃತ್ಯ ಸಂಯೋಜನೆ ನೀಡಿ ಅಂತರರಾಷ್ಟ್ರೀಯ ಮಕ್ಕಳ ನಾಟಕೋತ್ಸವದಲ್ಲಿ ಭಾಗವಹಿಸಿ ಇತಿಹಾಸ ಸೃಷ್ಟಿಸಿದ್ದಾರೆ. 2002ರಲ್ಲಿ ಇಸ್ಲಾಮಿಕ್ ಮ್ಯೂಸಿಯಂ ಆಫ್ ಮಲೇಷಿಯಾದ ಉದ್ಘಾಟನಾ ಸಮಾರಂಭದಲ್ಲಿ ತಮ್ಮ ಕಥಕ್ ನೃತ್ಯ ಪ್ರದರ್ಶನ ನೀಡಿದ್ದಾರೆ. 2005, 2007 ಮತ್ತು 2014ರಲ್ಲಿ ಭಾರತದ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಶ್ರೀಮತಿ ಪ್ರತಿಭಾ ಸಿಂಗ್ ಪಾಟೀಲ್, ಪ್ರಸಕ್ತ ರಾಷ್ಟ್ರಪತಿ ಶ್ರೀಯುತ ಪ್ರಣಬ್ ಮುಖರ್ಜಿ, ಪೂರ್ವ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್, ಶ್ರೀಮತಿ ಸೋನಿಯಾ ಗಾಂಧಿ, ಮುಂತಾದವರ ಸಮ್ಮುಖದಲ್ಲಿ ತಮ್ಮ ಕಲಾ ಪ್ರದರ್ಶನ ನೀಡಿ ಪ್ರಶಸ್ತಿ ಮತ್ತು ಸನ್ಮಾನಗಳನ್ನು ಪಡೆದಿದ್ದಾರೆ. ಅ

# ವಿಶಿಷ್ಟ ಕನ್ನಡಿಗ ಪ್ರಶಸ್ತಿ ವಿಜೇತ ಶಿಕ್ಷಣ ತಜ್ಞ ಹಾಗೂ ರಂಗಕರ್ಮಿ ಡಾ. ಎಸ್. ಎಲ್.ಭಂಡಾರಕರ್

ಕರ್ನಾಟಕದ ಬೆಳಗಾವಿಯ ಡಾ. ಎಸ್.ಎಲ್. ಭಂಡಾರಕರ್ ಅವರು ದೆಹಲಿ ಸರಕಾರದ ತರಬೇತಿ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಉಪ–ನಿರ್ದೇಶಕರಾಗಿ (ಕಾರ್ಯದರ್ಶಿಗಳ ವಿಭಾಗ) ಕಾರ್ಯ ನಿರ್ವಹಿಸುತ್ತಿದ್ದಾರೆ. ದೆಹಲಿ ಸರಕಾರದ ತಾಂತ್ರಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಇರುವ ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ, ದೆಹಲಿ ಮಹಿಳಾ ತಾಂತ್ರಿಕ ವಿಶ್ವವಿದ್ಯಾಲಯ, ದೆಹಲಿ ಔಷಧಿ ವಿಜ್ಞಾನ ಮತ್ತು ಸಂಶೋಧನೆ ವಿಶ್ವವಿದ್ಯಾಲಯಗಳೊಂದಿಗೆ ದೆಹಲಿ ಸರಕಾರದ ಸುಮಾರು ಆರು ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯಗಳು ಹಾಗು 35 ಖಾಸಗಿ ತಾಂತ್ರಿಕ ಮಹಾವಿದ್ಯಾಲಯಗಳ ಕಾರ್ಯಭಾರವನ್ನು ನೋಡಿಕೊಳ್ಳುತ್ತಿದ್ದಾರೆ. ಜೊತೆಗೆ ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ, ಹೊಸದೆಹಲಿ ಹಾಗೂ "ಜಾಯಿಂಟ್ ಪಾರ್ಲಿಮೆಂಟ್ ರಿಕ್ರ್ಯುಟಮೆಂಟ್ ಸೆಲ್'ನಲ್ಲಿ ಆಯ್ಕೆ ಸಮಿತಿಯ ಸದಸ್ಯರಾಗಿ ಹಾಗು ಅನೇಕ ತಾಂತ್ರಿಕ ಶಿಕ್ಷಣ ಮಂಡಳಿಗಳ ವೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2010 ರಿಂದ 2012 ರವರೆಗೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿಯಲ್ಲಿ ಪ್ರಥಮ ಉಪ–ಕುಲಸಚಿವರಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಸಮಯದಲ್ಲಿ ವಿಶ್ವವಿದ್ಯಾಲಯ ಕಟ್ಟುವ ಕೆಲಸ ಮಾಡಿ, ಅನೇಕ ಕಾರ್ಯಾಗಾರಗಳನ್ನು ನಡೆಸಿದ್ದಾರೆ.

ಕೇಂದ್ರೀಯ ಲೋಕಸೇವಾ ಆಯೋಗದ ಮೂಲಕ 2000ರಲ್ಲಿ ಆಯ್ಕೆಯಾಗಿ, ತರಬೇತಿ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ಆಯ್ಕೆಗೊಂಡ ಅವರು ವಿದ್ಯಾಭ್ಯಾಸವನ್ನು ಮುಂದುವರೆಸಿ, ಎಂಟೆಕ್, ಎಂಬಿಎ ಹಾಗು ಪಿ.ಹೆಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಸುಮಾರು 25ಕ್ಕಿಂತ ಹೆಚ್ಚಿಗೆ ಸಂಶೋಧನಾ ಪ್ರಬಂಧಗಳನ್ನು ಅನೇಕ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮಂಡಿಸಿದ್ದಾರೆ.

ಡಾ. ಭಂಡಾರಕರ್ ಅವರ ಮೊದಲ ಕೃತಿ "ವೆಹಿಕಲ್ ಟ್ರಾನ್ಸ್‌ಪೋರ್ಟ ಮ್ಯಾನೆಜಮೆಂಟ್" ಅಂತಿಮ ವರ್ಷದ ಬಿ.ಇ/ ಬಿ.ಟೆಕ್ ಹಾಗು ಡಿಪ್ಲೊಮಾ ಅಟೊಮೋಬೈಲ್ ವಿದ್ಯಾರ್ಥಿಗಳಿಗೆ ದೇಶದ ತಾಂತ್ರಿಕ ಶಿಕ್ಷಣ ಇಲಾಖೆಯ ಮಹಾವಿದ್ಯಾಲಯಗಳು ಹಾಗು ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕವನ್ನಾಗಿ ಅಳವಡಿಸಿಕೊಳ್ಳಲಾಗಿದೆ. ಅವರ "ಆಲ್ಟರ್‌ನೇಟಿವ್ ಫ್ಯುಯಲ್ ಸಿ.ಎನ್.ಜಿ. ಫಾರ್ ದೆಹಲಿ" ಮತ್ತು "ವೆಹಿಕ್ಯೂಲರ್ ಪೊಲ್ಯೂಶನ್ ಆಂಡ್ ಆಲ್ಟರ್‌ನೇಟಿವ್ ಫ್ಯುಯಲ್" ಪುಸ್ತಕಗಳನ್ನು ಜರ್ಮನಿಯ ಲಾಂಬರ್ಟ ಅಕ್ಯಾಡಮಿಕ್ ಪಬ್ಲಿಷಿಂಗ್ ಕಂಪನಿ, ಪ್ರಕಟಿಸಿದೆ. "ನ್ಯಾಷನಲ್ ಬುಕ್ ಟ್ರಸ್ಟ್" ನವದೆಹಲಿಯಲ್ಲಿ ಕನ್ನಡ ಅನುವಾದಕರಾಗಿ ಕೆಲಸ ನಿರ್ವಹಿಸಿ, ಮೂಲತ: ಶ್ರೀ ಎಲ್.ಪಿ.ಮಹಾಜನ ಅವರ "ರಸ್ತೆ ಸಂಚಾರ ನಿಯಮಗಳು" ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಸುಮಾರು ಎರಡು ಸಾವಿರಕ್ಕಿಂತ ಹೆಚ್ಚಿನ ರೇಡೀಯೋ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಧ್ವನಿಯನ್ನು ನೀಡಿದ್ದಾರೆ. ದೆಹಲಿಯ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಇವರು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಸಾಂಸ್ಕೃತಿಕ



ಸಮಿತಿಯ ಸದಸ್ಯರಾಗಿ, ಸಂಘದ ಮುಖಪತ್ರಿಕೆ ಅಭಿಮತದ ಜಂಟಿ ಪ್ರಧಾನ ಸಂಪಾದಕರಾಗಿ ಕನ್ನಡಕ್ಕೆ ಸೇವೆ ಸಲ್ಲಿಸಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ "ಪ್ರಬಂಧನ ಮಂಡಳಿಯ ಸದಸ್ಯರಾಗಿ" ಸೇವೆ ಸಲ್ಲಿಸಿದ್ದಾರೆ. ಅನೇಕ ನಾಟಕಗಳನ್ನು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಅಲ್ಲದೆ ಅನೇಕ ಕನ್ನಡದ ನಾಟಕಗಳನ್ನು ನಿರ್ದೇಶಿಸಿ ನಟಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ನಾಟಕೋತ್ಸವಗಳಲ್ಲಿ ಅನೇಕ ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. ಅ

*ಅಭಿಮತ ವರದಿ*

# ಕನ್ನಡ ಭಾಷೆ ಇನ್ನೂ ಅನೇಕ ಶತಮಾನಗಳ ಕಾಲ ವಿರಾಜಮಾನವಾಗಿ ಬದುಕಬಲ್ಲದು : ಹಂಸಲೇಖ



ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವಂಬರ್ 13ರಂದು ನಾದಬ್ರಹ್ಮ ಡಾ. ಹಂಸಲೇಖರವರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ತುಂಬಿ ತುಳುಕುತ್ತಿದ್ದ ಸಭಾಂಗಣದಿಂದ ಹತ್ತಾರು ಮಂದಿ ಕನ್ನಡಿಗರು ತಮ್ಮ ಮನಬಿಚ್ಚಿ ಹಂಸಲೇಖಾರವರ ಸಂಗೀತ, ಸಿನೇಮಾ, ವೈಯಕ್ತಿಕ ಜೀವನ, ಕನ್ನಡ ಭಾಷೆ ಮತ್ತು ಸಂಸ್ಕೃತಿ, ಕರ್ನಾಟಕ ಹಾಗೂ ದೇಶ-ವಿದೇಶಗಳ ಹಲವಾರು ಜಾಯಮಾನಗಳ ಬಗ್ಗೆ ಮುಕ್ತವಾಗಿ ಮಾತುಕತೆ ನಡೆಸಿದರು.

ಕನ್ನಡ ಭಾಷೆಯ ಇಂದಿನ ಸ್ಥಿತಿಗಳು, ಸವಾಲುಗಳು ಮತ್ತು ಭವಿಷ್ಯದ ರೂಪು ರೇಷೆಗಳ ಬಗ್ಗೆ ಹಾಗೂ ಕನ್ನಡ ಸಿನಿಮಾ ಕ್ಷೇತ್ರ ಮತ್ತು ಪ್ರೇಕ್ಷಕರ ನಡುವಿನ ಹಿಂದಿನ ಹಾಗೂ ಇಂದಿನ ಸಂಬಂಧಗಳ ಕುರಿತಾಗಿ ಸಭಿಕರು ಕೇಳಿದ ಪ್ರಶ್ನೆಗಳಿಗೆ ಅತ್ಯಂತ ವಿಸ್ತಾರವೂ ಸ್ವೀಕರಾರ್ಹವೂ ಆದ ಉತ್ತರಗಳನ್ನು ನೀಡಿದರು.

ಕನ್ನಡ ಭಾಷೆಯ ಉಳಿವಿನ ಬಗೆಗೆ ಯಾರೂ ಆತಂಕ ಪಡಬೇಕಾದ ಅಗತ್ಯವಿಲ್ಲ. ಪ್ರಾಚೀನ ಕಾಲದಿಂದಲೂ ಕನ್ನಡ ಭಾಷೆ ಕಾಲ ಕಾಲಕ್ಕೆ ಹಳಗನ್ನಡ ಕಾಲಘಟ್ಟದಲ್ಲಿ ಸಂಸ್ಕೃತ ಭಾಷೆಯ ಜೊತೆ, ಅನಂತರದಲ್ಲಿ ಪ್ರಾಕೃತ ಭಾಷೆಯ ಜೊತೆಗೆ ಒಡನಾಡಿ, ಮುಂದೆ 12ನೇ ಶತಮಾನದಲ್ಲಿ ವಚನಕಾರರ ಕಾಲದಲ್ಲಿ ಕನ್ನಡಿಗರ ಜೀವ ನಾಡಿಯಾಗಿ ಅವರ ಹೃದಯ ಸಿಂಹಾಸನದಲ್ಲಿ ಮೆರೆದು ಮುಂದೆ, ದಾಸವರೇಣ್ಯರ, ರಾಘವಾಂಕ, ಕುಮಾರವ್ಯಾಸ ಮತ್ತಿತರ ಮಹಾನ್ ಕವಿಗಳ ಕಾಲದಲ್ಲಿ ನಿರ್ಮಿತವಾದ ಕಾವ್ಯಗಳ ಮೂಲಕ ಕನ್ನಡಿಗರ ನಾಲಗೆಯ ಮೇಲೆ ಮಹಾಭಾರತದ, ರಾಮಾಯಣದ ಕಥೆಗಳ ರೂಪದಲ್ಲಿ ನಲಿದಾಡಿತು. ಆಧುನಿಕ ಕಾಲದಲ್ಲೂ ಕೂಡ ಅನೇಕ ಸಾಹಿತ್ಯ ಚಳುವಳಿಗಳ ಜೊತೆ ಮುಖಾಮುಖಿಯಾಗಿ ಸಾಹಿತ್ಯದ ಅಸಾಧಾರಣ ಸಾಧನೆಯಿಂದ ತನ್ನ ನೆಲೆಯನ್ನು ಗಟ್ಟಿಯಾಗಿಸಿಕೊಂಡಿದೆ. ಆದುದರಿಂದ ಇಂದು ತಂತ್ರಜ್ಞಾನಯುಗದಲ್ಲೂ ಇಂಗ್ಲಿಷಿನೊಂದಿಗೆ ಸೆಣಸಾಡುವ ಎಲ್ಲ ಶಕ್ತಿಯನ್ನು ಕನ್ನಡ ಭಾಷೆ ಹೊಂದಿದೆ ಮಾತ್ರವಲ್ಲ ಇನ್ನೂ ಅನೇಕ ಶತಮಾನಗಳ ಕಾಲ ವಿರಾಜಮಾನವಾಗಿರುತ್ತದೆಂದು ಆಶಾಭಾವನೆ ವ್ಯಕ್ತಪಡಿಸಿದರು.

ಪ್ರೀತಿ-ಪ್ರೇಮ, ಕೋಪ-ಜಗಳ, ಆಟ-ಪಾಠ, ವ್ಯವಹಾರ-ವ್ಯಾಪಾರ ಇವೆಲ್ಲವುಗಳನ್ನು ತಾವು ಕನ್ನಡದಲ್ಲೇ ಮಾಡುವುದಾಗಿ ತಿಳಿಸುತ್ತಾ ಹಂಸಲೇಖರು ಸಭೆಯ ಮುಂಭಾಗದಲ್ಲಿ ಕುಳಿತಿದ್ದ ತಮ್ಮ ಧರ್ಮಪತ್ನಿ ಶ್ರೀಮತಿ ಹಂಸಲೇಖರೇ ನನ್ನೆಲ್ಲಾ ಸಾಧನೆಗೆ ಸ್ಫೂರ್ತಿ ಎಂದು ನುಡಿದರು.

ಬಾಲ್ಯದಲ್ಲಿ ಏಳನೇ ತರಗತಿಯಲ್ಲಿದ್ದಾಗ ತಾವು ಬರೆದ ಒಂದು ಪುಟ್ಟ ನಾಟಕ ತಮ್ಮ ಗುರುಗಳೋರ್ವರ ಆಶೀರ್ವಾದದಿಂದ ಶಾಲೆಯಲ್ಲಿ ಪ್ರದರ್ಶನಗೊಂಡು, ಶಾಲೆಯ ಮುಖ್ಯೋಪಾಧ್ಯಾಯರಿಂದ ಪ್ರಶಂಸೆಗೆ ಒಳಪಟ್ಟು ತಮಗೆ ಒಂದು ಹಂಸಲೇಖಿಣಿ ಉಡುಗೊರೆಯಾಗಿ ದೊರೆಯಿತು. ಅಂದಿನಿಂದ ತನ್ನ ಬರಹಗಳಿಗೆ ಹಂಸಲೇಖಿಣಿ ಎಂದು ಬರೆಯಲು ಆರಂಭಿಸಿದೆ, ಇನ್ನೊಬ್ಬ ಗುರುಗಳು ಹಂಸಲೇಖಿಣಿಯ 'ಣಿ' ತೆಗೆದು ಕೇವಲ 'ಹಂಸಲೇಖ' ಎಂದು ಬರೆಯಲು ಆರಂಭಿಸು ಎಂದು ನೀಡಿದ ಸಲಹೆ, ಆಶೀರ್ವಾದಗಳಿಂದ ನಾನಿಂದು ಹಂಸಲೇಖನಾಗಿ ದ್ದೇನೆ ಎಂದರು. ಕನ್ನಡದ ಶ್ರೇಷ್ಠ ನಟರಲ್ಲಿ ಒಬ್ಬರಾದ ರವಿಚಂದ್ರನ್ ಹಾಗೂ ತಮ್ಮ ಅನ್ಯೋನ್ಯ ಸಂಬಂಧಗಳನ್ನು ನೆನಪಿಸುತ್ತಾ, ರವಿಚಂದ್ರರು ತಾವು ಬರೆದ ಎಲ್ಲಾ ಹಾಡುಗಳನ್ನು ಅತ್ಯಂತ ಮೆಚ್ಚಿಕೊಳ್ಳುತ್ತಿದ್ದರಷ್ಟೇ ಅಲ್ಲದೆ ಮೊದಲ ಬಾರಿಗೆ ಒಪ್ಪಿಕೊಂಡು ಬಿಡುತ್ತಿದ್ದರು ಎಂದರು. ಚಿ. ಉದಯಶಂಕರರಂತಹ ಮಹಾನ್ ಗೀತೆರಚನೆಕಾರರನ್ನು ಮನದಾಳದಿಂದ ನೆನೆದ ಹಂಸಲೇಖರು ಕನ್ನಡ ಚಿತ್ರರಂಗಕ್ಕೆ ಉದಯಶಂಕರರಂತಹ ಮಹನೀಯರು ನೀಡಿದ ಕೊಡುಗೆ ಅಪಾರ ಮತ್ತು ಅತ್ಯಮೂಲ್ಯ ಎಂದು ತಿಳಿಸಿದರು.

ನಾಟಕ ರಂಗದಲ್ಲಿ ಕೆಲಸ ಮಾಡುತ್ತಿದ್ದ ತಾವು ಸಿನಿಮಾ ರಂಗದತ್ತ ಒಲಿದಾಗ ಅಲ್ಲೆಲ್ಲಾ ಭಾರಿ ಭಾರಿ ಖಾಲಿ ಖಾಲಿಯಾಗಿ ಕಾಣುತ್ತಿತ್ತು, ಸಾಕಷ್ಟು ಅವಕಾಶಗಳು ಕೈಚಾಚಿ ಕರೆಯುತ್ತಿದ್ದವು. ವರ್ಷಕ್ಕೆ 30 ರಿಂದ 50 ಸಿನಿಮಾಗಳಲ್ಲಿ ಕೆಲಸ ಮಾಡುವಂತಹ ಸಾಹಸ ಮಾಡಿದೆ. ಎಲ್ಲಾ ಕಲಾವಿದರು ಮತ್ತು ಸಹೋದ್ಯೋಗಿಗಳು ಒಗ್ಗಟ್ಟಿನಿಂದ ಕೈಜೋಡಿಸಿದರು. ನಾನು ಕೆಲಸ ಮಾಡುತ್ತಾ ಹೋದೆ, ಹೊಸ ಹೊಸ ರಾಗ, ಸಂಗೀತ, ಹಾಡುಗಳು ಮೂಡುತ್ತಲೇ ಬಂದವು. ಜನ ಮೆಚ್ಚಿಕೊಂಡರು ಕನ್ನಡ, ತಮಿಳು, ತೆಲುಗು, ಮಲಯಾಳಂ ಗಳಲ್ಲಿ ಎಲ್ಲಾ ಸುಪ್ರಸಿದ್ಧ ಹಿನ್ನೆಲೆ ಗಾಯಕರೊಡನೆ ಹಾಗೂ ಸಂಗೀತ ಸಂಯೋಜಕರೊಡನೆ ಜೊತೆಗೂಡಿ ಕೆಲಸ ಮಾಡುವ ಸೌಭಾಗ್ಯ ನನ್ನದಾಯಿತು ಎಂದು ಬಹಳ ವಿನಮ್ರವಾಗಿ ನುಡಿದರು.



ಇಂದು ಕನ್ನಡ ಚಿತ್ರರಂಗದಲ್ಲಿ ಸುಮಾರು 80-85 ಮಂದಿ ಸಂಗೀತ ನಿರ್ದೇಶಕರು ಬೆಳೆದಿದ್ದು ಇದು ಕನ್ನಡ ಸಿನಿಮಾ ರಂಗಕ್ಕೆ ಅದರಲ್ಲೂ ಮುಖ್ಯವಾಗಿ ಸಂಗೀತಲೋಕಕ್ಕೆ ತುಂಬಾ ಒಳ್ಳೆಯ ಸೂಚನೆಯಾಗಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ, ಅದರಲ್ಲೂ ಮುಖ್ಯವಾಗಿ ಬೆಂಗಳೂರಿನಲ್ಲಿ, ನಮ್ಮ ಜನ ಕನ್ನಡ ಮಾತನಾಡಲು ಯಾಕೋ ಸಂಕೋಚ/ ನಾಚಿಕೆಪಟ್ಟಂತೆ ಅನ್ನಿಸುತ್ತದೆ. ನಾವೇ ನಮ್ಮ ಮಾತೃ ಭಾಷೆಯನ್ನು ಹೆಮ್ಮೆಯಿಂದ ಮಾತನಾಡದಿದ್ದರೆ, ನಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಬಳಸದಿದ್ದರೆ ಯಾರು ಬಂದು ನಮ್ಮ ಭಾಷೆಯನ್ನು ಉಳಿಸಿಯಾರು ಎಂದು ಮುಗ್ಧವಾಗಿ ಪ್ರಶ್ನಿಸಿದರು. ಕನ್ನಡದ ಕವಿಪುಂಗವರು, ದಾಸರು, ಶರಣರು, ಜನಪದ ಗಾಯಕರು ಹಾಗೂ ಸಾಹಿತಿಗಳು ಸತತವಾಗಿ ಸಾಧನೆ ಮಾಡಿ ಬೆಳೆಸಿ ಗಳಿಸಿಟ್ಟ ಅತ್ಯಂತ ವಿಶಿಷ್ಟವಾದ ಈ ಸಂಪತ್ತನ್ನು ನಮ್ಮ ಮುಂದಿನ ತಲೆಮಾರಿಗೆ ಹಸ್ತಾಂತರ ಮಾಡಿಹೋಗುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರದ್ದಾಗಿದೆ. ಇದಕ್ಕಾಗಿ ಎಲ್ಲಾ ಸಂದರ್ಭಗಳಲ್ಲೂ ನಾವೆಲ್ಲರೂ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕು ಎಂದು ನುಡಿದರು. ಹುಟ್ಟಿರುವುದು ಕನ್ನಡನಾಡಿನಲ್ಲಿ, ಬೆಳೆಯು/ ಬದುಕುತ್ತಿರುವುದು ಕನ್ನಡನಾಡಿನಲ್ಲಿ, ಕೊನೆಯುಸಿರೆಳೆಯುವುದು ಕನ್ನಡನಾಡಿನಲ್ಲಿ ಹೀಗಿರುವಾಗ 'ಸಮಸ್ಯೆಗಳು ನೂರಾರು ಆದರೆ ಇದೆಲ್ಲದಕ್ಕೂ ಪರಿಹಾರ ಕೇವಲ ಕನ್ನಡ ಒಂದೇ', ಇದು ನನ್ನ ಬಲವಾದ ನಂಬಿಕೆ ಎಂದು ನುಡಿದರು. ಡಾ. ಹಂಸಲೇಖ ಅವರೊಂದಿಗೆ ನಡೆಸಿದ ಸಂವಾದ ಓರ್ವ ಅಪ್ಪಟ ಕನ್ನಡಾಭಿಮಾನಿಯ ಹೃದಯಾಳದಿಂದ ಮೂಡಿಬಂದ ಒಂದು ಸುಮಧುರ ಸಂಗೀತದಷ್ಟೇ ಇಂಪಾಗಿತ್ತು. ಅ

***ಸಖಾರಾಮ ಉಪ್ಪೂರು***

# ಕವಿ, ಹೋರಾಟಗಾರ್ತಿ ಎಚ್.ಎಸ್. ಅನುಪಮ ಅವರಿಗೆ
## ದೆಹಲಿ ಕರ್ನಾಟಕ ಸಂಘದ ಪ್ರಥಮ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ




ದೆಹಲಿ ಕರ್ನಾಟಕ ಸಂಘವು ಈ ಸಾಲಿನಿಂದ ನೀಡಲು ಆರಂಭಿಸಿದ ಮೊದಲ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಕವಯತ್ರಿ ಮತ್ತು ಸಾಮಾಜಿಕ ಹೋರಾಟಗಾರ್ತಿ ಡಾ. ಎಚ್.ಎಸ್. ಅನುಪಮಾ ಅವರಿಗೆ ನೀಡಲಾಯಿತು.

ಕನ್ನಡದ ಹಿರಿಯ ಕವಿ, ನಾಟಕಕಾರ ಮತ್ತು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಇದೇ ನವಂಬರ್ 20ರಂದು ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಪಿಚ್ಚಳ್ಳಿ ಶ್ರೀನಿವಾಸ್ ಅವರು ವಹಿಸಿದ್ದರು. ಕರ್ನಾಟಕ ಸರಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಮತ್ತು ಡಾ. ಮಹಿಷಿಯವರ ಸಹೋದರ ಶ್ರೀ ಪ್ರಹ್ಲಾದ ಮಹಿಷಿಯವರು ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಪ್ರೊ. ಶಿವಪ್ರಕಾಶ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತಾಡುತ್ತಾ ಯಾವ ರೀತಿ ಡಾ. ಸರೋಜಿನಿ ಮಹಿಷಿಯವರು ಒಬ್ಬ ಬರಹಗಾರ್ತಿಯಾಗಿ ಮತ್ತು ಸಂಘಟಕಿಯಾಗಿ ಇದ್ದರೋ ಅದೇ ರೀತಿ ಡಾ. ಅನುಪಮಾ ಅವರು ಹೊನ್ನಾವರವನ್ನು ತಮ್ಮ ಸಾಹಿತ್ಯದ ಮತ್ತು ಬದುಕಿನ ಕ್ಷೇತ್ರವನ್ನಾಗಿ ಮಾಡಿ ಅನೇಕ ಕಾರ್ಯಕ್ರಮಗಳನ್ನು ಅವರು ನಡೆಸುತ್ತಿದ್ದಾರೆ ಎಂದರು. ಜೊತೆಗೆ ಪ್ರಗತಿಪರ ಸಂಘಟನೆಗಳ ಜತೆಗೆ ತಮ್ಮನ್ನು ಗುರುತಿಸಿಕೊಂಡು ಸಕ್ರಿಯರಾಗಿದ್ದಾರೆ. "ಸಾಹಿತ್ಯವನ್ನು ಒಂದು ಸ್ವಲೋಲುಪತೆಯ ವಿಷಯವನ್ನಾಗಿ ಬೆಳೆಸದೇ ಅದಕ್ಕೆ ಒಂದು ಸಾಮಾಜಿಕ ಆಯಾಮವನ್ನು ಕೊಟ್ಟು ಆ ದಿಶೆಯಲ್ಲಿ ಅವರು ನಡೆಯುತ್ತಿದ್ದಾರೆ. ಅವರು ಸಾಹಿತ್ಯಕಾರ್ತಿ ಮಾತ್ರವಲ್ಲ, ಸಾಹಿತ್ಯದ ಸಂಘಟಕಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಅಂಥವರಿಗೆ ಈ ಪ್ರಶಸ್ತಿಯನ್ನು ಕೊಡುತ್ತಾ ಇರುವುದು ಬಹಳ ಸಂತೋಷ" ಎಂದು ಪ್ರೊ. ಶಿವಪ್ರಕಾಶ್ ನುಡಿದರು.

ಅವರು "ನಾವು ನಮ್ಮ ಊರುಕೇರಿಯಿಂದ ದೂರ ಬಂದರು ಕೂಡಾ ಯಾರೂ ಅಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯಗಳಿಗೆ ವಿಶೇಷವಾದ ಕೊಡುಗೆಗಳನ್ನು ಕೊಡುತ್ತಾರೋ ಅವರನ್ನು ಸ್ಮರಿಸಿಕೊಳ್ಳುವುದು ಒಂದು ಒಳ್ಳೆಯ ಪ್ರತೀತಿ. ಮೊದಲ ಬಾರಿಗೆ ಸ್ವತಃ ಸಾಹಿತಿಯಾದ ಡಾ. ಸರೋಜಿನಿ ಮಹಿಷಿಯವರ ಹೆಸರಿನಲ್ಲಿ ಒಂದು ಸಾಹಿತ್ಯ ಪ್ರಶಸ್ತಿಯನ್ನು ಪ್ರಾರಂಭ ಮಾಡಿರುವುದು ಸ್ವಾಗತಾರ್ಹ. ಡಾ. ಸರೋಜಿನಿ ಮಹಿಷಿಯವರು ಬರೆಯುವುದಕ್ಕೆ ಶುರು ಮಾಡಿದಾಗ ಕನ್ನಡಕ್ಕೆ ಮಹಿಳೆಯರು ಕೊಟ್ಟ ಕೊಡುಗೆಯ ಬಗ್ಗೆ ಅಷ್ಟು ಅರಿವು ಇರಲಿಲ್ಲ. ಅದೇ ಪರಂಪರೆಯಲ್ಲಿ ಮುಂದುವರಿಯುತ್ತಿರುವ ಡಾ. ಅನುಪಮಾ ಅವರಿಗೆ ಈ ಪ್ರಶಸ್ತಿಯು ದೊರಕಿದೆ. ಆಯ್ಕೆ ಸಮಿತಿಯಲ್ಲಿ ನಾನು ಮತ್ತು ಡಾ. ಬಿಳಿಮಲೆಯವರು ಒಮ್ಮತದಿಂದ ಈ ಪ್ರಶಸ್ತಿಯನ್ನು ಬಹಳ ಸಕ್ರಿಯವಾಗಿರುವ ಬರಹಗಾರ್ತಿ ಡಾ. ಅನುಪಮ ಅವರಿಗೆ ಕೊಡಬೇಕು ಎಂದು ನಿರ್ಣಯಿಸಿದೆವು" ಎಂದರು.

ಪ್ರೊ. ಶಿವಪ್ರಕಾಶ್ ಅವರು ತಮ್ಮ ಭಾಷಣದಲ್ಲಿ ದೆಹಲಿ ಕರ್ನಾಟಕ ಸಂಘ ಅಂದರೆ ಬರೇ ಕಟ್ಟಡ ಅಲ್ಲ. ಕಟ್ಟಡ ಕಟ್ಟಲು ಅನೇಕರು ಕೊಡುಗೆಗಳನ್ನು ನೀಡಿದ್ದಾರೆ. ಡಾ. ಸರೋಜಿನಿ ಮಹಿಷಿಯವರು ದೆಹಲಿ ಕರ್ನಾಟಕ ಸಂಘದ ಬೀಜವನ್ನು ಬಿತ್ತಿದವರು. ಮುಂದೆ ಅನೇಕರು ಅದಕ್ಕೆ ತಮ್ಮ ಸಮಯವನ್ನು ಕೊಟ್ಟಿದ್ದಾರೆ. ಆ ಕಟ್ಟಡಕ್ಕೆ ಜೀವ ಬರಬೇಕಾದರೆ ಇಲ್ಲಿ ಅರ್ಥಪೂರ್ಣವಾದ ಕಾರ್ಯಕ್ರಮಗಳು ಆಗಬೇಕು. ಡಾ. ಪುರುಷೋತ್ತಮ ಬಿಳಿಮಲೆಯವರು ಸಂಘದ ಅಧ್ಯಕ್ಷರಾಗಿದ್ದಾಗ ಅದ್ಭುತವಾದ ವಿಚಾರಗೋಷ್ಠಿಗಳನ್ನು ಮತ್ತು ಕಾರ್ಯಗಾರಗಳನ್ನು ಅನೇಕ ಬಾರಿ ಏರ್ಪಡಿಸಿ ಹೊಸ ಜೀವಕಲೆಯನ್ನು ತುಂಬಿದರು. ಅದೇ ಪರಂಪರೆಯನ್ನು ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಬಹುಕಾಲದಿಂದ ಕನ್ನಡದ ರಂಗಭೂಮಿ ಇಲ್ಲಿ ನೆನೆಗುದಿಗೆ ಬಿದ್ದಿತ್ತು. ಅದನ್ನು ಪುನರಾರಂಭ ಮಾಡಿ ಇಲ್ಲಿಯೇ ನಾಟಕಗಳ ತರಬೇತಿ ಮಾಡಿ ನಾಟಕಗಳ ಪ್ರದರ್ಶನಗಳನ್ನು ಕೊಡುತ್ತಾ ಇದ್ದಾರೆ. ದೆಹಲಿಯಲ್ಲಿ ಭಾಷೆ ಜೀವಂತವಾಗಿರಲು ಶಕ್ತವಾದ ರಂಗಭೂಮಿಯು ಬೇಕು ಎಂದರು.

ಪ್ರಶಸ್ತಿಯನ್ನು ಪಡೆದ ಅನುಪಮಾ ಅವರನ್ನು ಅಭಿನಂದಿಸುತ್ತಾ ಪ್ರೊ. ಶಿವಪ್ರಕಾಶ್ ಅವರು ಇದನ್ನು ನೀಡಿದ ದೆಹಲಿ ಕರ್ನಾಟಕ ಸಂಘವನ್ನು ಕೂಡಾ ಅಭಿನಂದಿಸಿದರು. ಅತ್ಯಂತ ಕಠಿಣವಾದ ಜಾನಪದ ಕಲೆಗಳ ಪ್ರದರ್ಶನವನ್ನು ಇದಾಗಲೇ ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಮತ್ತು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮದಲ್ಲಿ ನೀಡಿದ ಕರ್ನಾಟಕದ ಹಲವು ಭಾಗಗಳಿಂದ ಬಂದ ಜಾನಪದ ಕಲಾವಿದರ ನಡುವೆ ಕೊಡುತ್ತಿರುವುದು ಇನ್ನೂ ಅರ್ಥಪೂರ್ಣವಾಗಿದೆ ಎಂದು ಅವರು ಹೇಳಿದರು.

ಶ್ರೀ ಪ್ರಹ್ಲಾದ ಮಹಿಷಿಯವರು ಮಾತಾಡುತ್ತಾ ಪ್ರಶಸ್ತಿ ವಿಜೇತರಾದ ಡಾ. ಎಚ್.ಎಸ್. ಅನುಪಮಾ ಅವರನ್ನು ಅಭಿನಂದಿಸಿ ಅವರು ಡಾ. ಸರೋಜಿನಿ ಮಹಿಷಿಯವರಂತೆ ಎಲ್ಲಾ ಕ್ಷೇತ್ರಗಳಲ್ಲೂ ಪರಿಣಿತರಾಗಬೇಕು ಎಂದು ಹೇಳಿದರು. ಡಾ. ಮಹಿಷಿಯವರು ಅಭಿಜಾತ ಗ್ರಂಥಗಳನ್ನೆಲ್ಲಾ ಚೆನ್ನಾಗಿ ಅರೆದು ಕುಡಿದು ಬಿಟ್ಟಿದ್ದರು. ಈವತ್ತಿನ ಬರಹಗಾರರಲ್ಲಿ ಮುಖ್ಯವಾದ ಕೊರತೆಯೆಂದರೆ ಕ್ಲಾಸಿಕ್ಸ್‌ನ ಜ್ಞಾನ. ಅವರು ಪುರಾಣ ಆದಿಗ್ರಂಥಗಳನ್ನು ಅಭ್ಯಾಸ ಮಾಡಿ ನಮ್ಮ ದೇಶದ ವೈಚಾರಿಕ ಆಕೃತಿ ಏನಿದೆ ಎಂಬುದನ್ನು ತಿಳಿದುಕೊಂಡು ಲೇಖನ ಮತ್ತು ಸಾಹಿತ್ಯಗಳನ್ನು ಬರೆಯಬೇಕು. ನಮ್ಮ ದೇಶದ ಸಾಂಸ್ಕೃತಿಕ ಭಾವನೆಯನ್ನು ಅರಿತು ಇಂದಿನ ಲೇಖಕರು ಸಾಹಿತ್ಯದ ಕೃಷಿ ಮಾಡಿದರೆ ಬಹಳ ಫಲಪ್ರದವಾಗಿರುತ್ತದೆ. ಬರೇ ಮೇಲ್ಮೈಯಲ್ಲಿ ಕೃಷಿ ಮಾಡಿ ಆಳಕ್ಕೆ

### ಡಾ. ಸರೋಜಿನಿ ಮಹಿಷಿ ಪ್ರಶಸ್ತಿ



ದೆಹಲಿ ಕರ್ನಾಟಕ ಸಂಘವು ಸಂಘದ ಮಾಜಿ ಅಧ್ಯಕ್ಷೆ ಹಾಗೂ ಮಾಜಿ ಕೇಂದ್ರ ಸಚಿವೆ ದಿ. ಡಾ. ಸರೋಜಿನಿ ಮಹಿಷಿಯವರ ಹೆಸರಿನಲ್ಲಿ ಈ ವರ್ಷದಿಂದ ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದಂತೆ "ಡಾ. ಸರೋಜಿನಿ ಮಹಿಷಿ ಪ್ರಶಸ್ತಿ"ಯನ್ನು ನೀಡಲು ನಿರ್ಣಯಿಸಿದೆ. ಇದರ ಮೊದಲ (2016) ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರು ಸಲ್ಲಿಸಿದ ಸೇವೆಗೆ ನೀಡಲಾಗುತ್ತಿದ್ದು ಪ್ರಖ್ಯಾತ ಕವಿ ಪ್ರೊ. ಎಚ್.ಎಸ್.ಶಿವಪ್ರಕಾಶ್ ಹಾಗೂ ಜೆ.ಎನ್.ಯುವಿನ ಕನ್ನಡ ಪೀಠದ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆಯವರನ್ನೊಳಗೊಂಡ ಆಯ್ಕೆ ಸಮಿತಿಯು ಡಾ. ಎಚ್.ಎಸ್. ಅನುಪಮಾ ಅವರನ್ನು ಆಯ್ಕೆ ಮಾಡಿದೆ. ಈ ಪ್ರಶಸ್ತಿ ರೂ.50,000 ಸಾವಿರ ನಗದು, ಸ್ಮರಣಿಕೆ, ಪ್ರಶಸ್ತಿ ಪತ್ರಗಳನ್ನು ಒಳಗೊಂಡಿದೆ.

ಹೋಗದಿದ್ದರೆ ಅದು ಜನರನ್ನು ಮುಟ್ಟುವುದಿಲ್ಲ ಎಂದರು.

ಡಾ. ಸರೋಜಿನಿ ಮಹಿಷಿ ಅವರು ಮೂಲತಃ ವಿದ್ವಾಂಸರು. ಅವರು ರಾಜಕೀಯಕ್ಕೆ ಆಕಸ್ಮಾತ್ತಾಗಿ ಬಂದವರು. ಅವರ ಅಕಾಡೆಮಿಕ್ ಶಿಸ್ತು ಎಷ್ಟಿತ್ತೆಂದರೆ ಅನೇಕ ಜನ ವಿದ್ವಾಂಸರಿಗೇ ಅವರಂಥ ಶಿಸ್ತು ಇರಲಿಲ್ಲ. ಡಾ. ಮಹಿಷಿಯವರು ಅನುವಾದ ಮಾಡುವುದು, ಪುಸ್ತಕ ಬರೆಯುವಂತಹ ಏನಾದರೂ ಒಂದು ಕೆಲಸ ಮಾಡಬೇಕೆಂದರೆ ಬೆಳಿಗ್ಗೆ ಐದು ಗಂಟೆಗೆ ಕೆಲಸ ಶುರು ಮಾಡಿ ಎಂಟು ಗಂಟೆಗೆ ದಿನದ ವ್ಯವಹಾರ ಶುರುವಾಗುವ ಹೊತ್ತಿಗೆ ಎಲ್ಲವನ್ನೂ ಮುಗಿಸಿ ತಯಾರಾಗುತ್ತಿದ್ದರು. ಸಂಸ್ಕೃತದಲ್ಲಿ, ಕನ್ನಡದಲ್ಲಿ, ಹಿಂದಿಯಲ್ಲಿ ಮತ್ತು ಮರಾಠಿಯಲ್ಲೂ ಅವರು ಅಪಾರವಾದ ಪಾಂಡಿತ್ಯವನ್ನು ಹೊಂದಿದ್ದರು ಎಂದು ಶ್ರೀ ಪ್ರಹ್ಲಾದ ಮಹಿಷಿಯವರು ಹೇಳಿದರು.

ಭಾರತದ ಸಂಸತ್ತಿನಲ್ಲಿ ಮೊದಲ ಬಾರಿಗೆ ಸಂಸ್ಕೃತದಲ್ಲಿ ಭಾಷಣ ಮಾಡಿದವರು ಡಾ. ಸರೋಜಿನಿ ಮಹಿಷಿಯವರು ಎಂದು ಶ್ರೀ ಮಹಿಷಿಯವರು ತಿಳಿಸಿದರು. ಹಿಂದೂ ಸಕ್ಸೆಶನ್ ಆಕ್ಟ್ ಕುರಿತು ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ ಮೊದಲಾದ ಉದ್ಗ್ರಂಥಗಳನ್ನೆಲ್ಲಾ ಉದ್ಧರಿಸಿ ಕುಟುಂಬದ ಆಸ್ತಿಯಲ್ಲಿ ಮಗಳಿಗೂ ಪಾಲು ಬರಬೇಕು ಎಂಬುದನ್ನು ಸಂಸ್ಕೃತದಲ್ಲಿ ಅವರು ಮಂಡಿಸಿದರು. ವೇದಾಂತಕ್ಕಿರುವ ಎಲ್ಲಾ ಭಾಷ್ಯಗಳನ್ನು ಅವರು ಮೂಲದಲ್ಲಿಯೇ ಓದಿ ಅರ್ಥ ಮಾಡಿ ಅದರ ಬಗ್ಗೆ ಅಧಿಕಾರಯುಕ್ತವಾಗಿ ಮಾತಾಡಬಲ್ಲವರಾಗಿದ್ದರು ಎಂದರು.

ಹಿರಿಯ ಭಾಷಾತಜ್ಞ ರಂಶ್ರೀ ಮುಗಳಿಯವರು ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಅವರ ಕೈಕೆಳಗೆ ಸರೋಜಿನಿ ಮಹಿಷಿಯವರು ಬಿಎ ಮತ್ತು ಎಂಎ ಮಾಡಿದರು. ಆದ್ದರಿಂದ ಅವರಿಗೆ ಕನ್ನಡ ಭಾಷೆ ಮೇಲೆ ಅಂತಹ ಅಭಿಮಾನ ಮತ್ತು ಪಾಂಡಿತ್ಯವಿತ್ತು. ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗವನ್ನು ಹಿಂದಿಗೆ ಅನುವಾದ ಮಾಡಿದರು. ಕುವೆಂಪು ಅವರ ರಾಮಾಯಣ ದರ್ಶನಂ ಕೃತಿಯನ್ನು ಕನ್ನಡದಿಂದ ಹಿಂದಿಗೆ ಅನುವಾದ ಮಾಡಿದರು. ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿಯೂ ದೊರೆಯಿತು ಎಂದರು. ಸರೋಜಿನಿ ಮಹಿಷಿಯವರದ್ದು ಹಿಂದಿಯಲ್ಲೂ ಬಹಳ ಪಾಂಡಿತ್ಯ. 2013ರಲ್ಲಿ ಅವರಿಗೆ ಹಿಂದಿಯಲ್ಲಿ ಅತ್ಯಂತ ಸೇವೆ ಮಾಡಿದ ಹಿಂದಿಯೇತರ ಮಹಿಳೆ ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನು ಕೇಂದ್ರದ ಹಿಂದಿ ಅಕಾಡೆಮಿ ಪುರುಷೋತ್ತಮ ದಾಸ್ ಟಂಡನ್ ಅಕಾಡೆಮಿಯವರು ಕೊಟ್ಟಿದ್ದಾರೆ. ಅವರು ಆಚಾರ್ಯ ಅತ್ರೆಯವರ ಶಾಕುಂತಲಾ ಎಂಬ ಮಹಾನ್ ಗ್ರಂಥವನ್ನು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ ಎಂದು ಶ್ರೀ ಮಹಿಷಿಯವರು ವಿವರಿಸಿದರು. ಸರೋಜಿನಿ ಮಹಿಷಿಯವರು ಜೀವನದಲ್ಲಿ ಕನ್ನಡ ಭಾಷೆ, ಕರ್ನಾಟಕ ಮತ್ತು ಮಹಿಳೆ ಎಂಬ ಮೂರು ವಿಷಯಗಳಿಗೆ ಬಹಳ ಜಿದ್ದಿನಿಂದ ಕೆಲಸ ಮಾಡುತ್ತಿದ್ದರು ಎಂದರು.

"ಡಾ. ಎಚ್.ಎಸ್. ಅನುಪಮಾ ಅವರು ಕಾವ್ಯದ ಗುಣವನ್ನು ಬಿಡದೇ ಅದನ್ನು ಸಮಾಜಕ್ಕೆ ನಿರಂತರವಾಗಿ ಜೋಡಿಸಲು ಕೆಲಸ ಮಾಡುತ್ತಿರುವ ಕನ್ನಡದ ಬಹಳ ಮುಖ್ಯವಾದ ಹೋರಾಟಗಾರ್ತಿ ಮತ್ತು ಕವಿ. ಅವರು ಉತ್ತರ ಕನ್ನಡ ಜಿಲ್ಲೆಯ ಕವಲಕ್ಕಿಯಲ್ಲಿ ಓರ್ವ ಮೆಟರ್ನಿಟಿ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿಗೆ ಹೆರಿಗೋಸ್ಕರ ಬರುವ ಮಹಿಳೆಯರ ಕಷ್ಟ ಸುಖಗಳನ್ನು ಸಣ್ಣ ಪತ್ರಿಕೆಗಳು ಬರೆಯುವುದನ್ನು ಕಂಡಾಗ ನಾವು ಕರಗಿ ಹೋಗುತ್ತೇವೆ" ಎಂದು ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರು ಹೇಳಿದರು. ಪ್ರಶಸ್ತಿ ವಿಜೇತೆ ಡಾ. ಅನುಪಮಾ ಅವರನ್ನು ಡಾ. ಬಿಳಿಮಲೆ ಸಭೆಗೆ ಪರಿಚಯಿಸುತ್ತಿದ್ದರು.

ಸಾಹಿತ್ಯ, ಸಂಘಟನೆ, ಮತ್ತು ಹೋರಾಟ ಎಲ್ಲವನ್ನೂ ಸೇರಿಸಿಕೊಂಡು ಬದುಕುತ್ತಿರುವ ಕಾಲಕ್ಕೆ ಒಂದು ಘನತೆಯನ್ನು ಗೌರವವನ್ನು ತಂದುಕೊಡುತ್ತಿರುವ ಅಪರೂಪದ ಮಹಿಳೆ ಡಾ. ಅನುಪಮಾ ಅವರಿಗೆ ಈ ಸಂಘವನ್ನು ಕಟ್ಟಿದ, ಸಂಘದ ಹುಟ್ಟಿಗೆ ಕಾರಣವಾದ ಡಾ. ಸರೋಜಿನಿ ಮಹಿಷಿಯವರಂಥ ಅರ್ಹ ವ್ಯಕ್ತಿತ್ವದ ಪ್ರಶಸ್ತಿ ಅರ್ಹ ವ್ಯಕ್ತಿಗೇ ಸಂದಾಯವಾಗುತ್ತಿದೆ ಎಂದರು.

ಡಾ. ಸರೋಜಿನಿ ಮಹಿಷಿಯವರ ಹೆಸರಿನ ಪ್ರಶಸ್ತಿಯನ್ನು ದೆಹಲಿ ಕರ್ನಾಟಕ ಸಂಘವು ಡಾ. ಅನುಪಮಾ ಅವರಿಗೆ ಕೊಡುತ್ತಿರುವುದಕ್ಕೆ ತುಂಬಾ ಸಂತೋಷ ಆಗಿದೆ ಎಂದ ಡಾ. ಬಿಳಿಮಲೆಯವರು ಯಾರಿಗೆ ಪ್ರಶಸ್ತಿ ಕೊಡುತ್ತೇವೋ ಅಂತಹವರ ಬಗ್ಗೆ ನಾವು ಇಡೀ ದಿನ ಚರ್ಚೆ ಮಾಡಿ, ಅವರ ಕೊಡುಗೆ, ಅವರ ಕೃತಿ ಅಥವಾ ಕಾರ್ಯಕ್ಷೇತ್ರದ ಕುರಿತು ಆಸಕ್ತರು ಚರ್ಚೆ ಮಾಡಿ ಅಭಿನಂದನೆ ಮಾಡಿದರೆ ಪ್ರಶಸ್ತಿ ವಿಜೇತರು ಏನು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ ಎಂದು ಸಲಹೆ ನೀಡಿದರು. ಸಂಘವು ಮುಂದಿನ ದಿನಗಳಲ್ಲಿ ಯಾರಿಗೆ ಪ್ರಶಸ್ತಿ ಕೊಡುತ್ತದೋ ಅವರ ಅನುಭವಗಳನ್ನು ಹಂಚಿಕೊಂಡಾಗ ಮತ್ತು ಅವರ ಬಗ್ಗೆ ನಮಗೆ ತಿಳಿದಾಗ ಕರ್ನಾಟಕದ ಜತೆ ಸಂಬಂಧ ಮರುಸೃಷ್ಟಿಯಾಗಿ ಕನ್ನಡದಲ್ಲಿ ಕೆಲಸ ಮಾಡಲು ಶಕ್ತಿ ಹೆಚ್ಚಾಗುತ್ತದೆ ಎಂದರು.

ಸ್ವಾತಂತ್ರ್ಯ ಸಿಕ್ಕಿದಂದಿನಿಂದ ರಾಷ್ಟ್ರದ ರಾಜಧಾನಿಯಾದ ದೆಹಲಿಗೆ ಕರ್ನಾಟಕದಿಂದ ಅನೇಕ ರಾಜಕಾರಣಿಗಳು ಬಂದು ಹೋಗುತ್ತಿದ್ದಾರೆ. ಆದರೆ ದೆಹಲಿಗೆ ಬಂದಾಗ ದೆಹಲಿಯ ಕನ್ನಡಿಗರನ್ನು ಸಂಘಟಿಸಿ ಅವರಿಗೆ ಒಂದು ಸಾಂಸ್ಕೃತಿಕವಾದ ಅಸ್ತಿತ್ವವನ್ನು ಕೊಡಬೇಕು ಎಂದು ಯೋಚನೆ ಮಾಡಿದವರು ಡಾ. ಸರೋಜಿನಿ ಮಹಿಷಿ ಮಾತ್ರ. ಇಂದು ಸಂಘದ ಸಮುಚ್ಚಯ ನಿಂತಿರುವ ಜಾಗವನ್ನು 1972ರಲ್ಲಿಯೇ ದೊರಕಿಸಿ ಕೊಟ್ಟವರು ಅವರು ಎಂದು ಡಾ. ಬಿಳಿಮಲೆ ವಿವರಿಸಿದರು.

ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ಅನುಪಮಾ ಅವರು ಮಾತಾಡುತ್ತಾ "ಇವತ್ತು ಅಕ್ಷರವನ್ನು ಮತ್ತು ಅಕ್ಷರವಂತರನ್ನು ಜಾತಿ, ಧರ್ಮ, ಮಾರುಕಟ್ಟೆ, ಸಿದ್ಧಾಂತ ಹೀಗೆ ನಾನಾ ವಿಷಯಗಳು ಆಳುತ್ತಾ ಇರುವಾಗ ಎಲ್ಲದರಿಂದ ಒಂದು ಸಮಾನ ದೂರದಲ್ಲಿ ನಿಂತು ನಿಷ್ಪಕ್ಷವಾಗಿ ಮತ್ತು ವೈಚಾರಿಕವಾಗಿ, ನ್ಯಾಯಬದ್ಧವಾಗಿ ಯೋಚನೆ ಮಾಡುತ್ತಾ ಇರುವುದು ಅಷ್ಟು ಸುಲಭವಲ್ಲ. ಇಂತಹ ಕಷ್ಟಕಾಲದಲ್ಲಿ ನಮ್ಮ ಹೆಗಲ ಮೇಲೆ ನಮ್ಮ ತಲೆ ಇರುವ ಹಾಗೆ ಕೆಲಸ ಮಾಡುವುದು ಎಲ್ಲಾ ಕವಿಗಳಿಗೂ, ಬರಹಗಾರರಿಗೂ ಒಂದು ದೊಡ್ಡ ಸವಾಲು. ಅದಕ್ಕಾಗಿಯೇ ಏನಾದರೂ ಮನ್ನಣೆ ಬಂದಾಗ ಭಯವಾಗುತ್ತದೆ" ಎಂದರು. "ನಾನು ಕಲಿತಿರೋ ನಾಲ್ಕು ಅಕ್ಷರಕ್ಕೆ, ಅಕ್ಷರ ಕೊಟ್ಟಿರುವ ಒಂದು ಭಾಷೆಗೆ, ಆ ಭಾಷೆಯನ್ನು ಬಿಳಿಹಾಳೆ ಮೇಲೆ ಮೂಡಿಸಲಿಕ್ಕೆ ಸಾಧ್ಯ ಆಗಿದೆ. ಅದು ಕೊಟ್ಟಿರುವ ಅಧಿಕಾರಕ್ಕೆ ನಾನು ನಿಜವಾಗಿಯೂ ಏನಾದರೂ ಮಾಡುತ್ತಾ ಇದ್ದೇನೆಯೇ, ಅದಕ್ಕೆ ನ್ಯಾಯ ಒದಗಿಸುತ್ತಿದ್ದೇನೆಯೇ ಎನ್ನುವ ಭಯ ಒಳಗಡೆ ಇದೆ" ಎಂದರು.

"ಭಾಷೆಗೆ ಯಾರೂ ಸಾರ್ವಭೌಮರೂ ಅಲ್ಲ, ಯಾರೂ ಗುಲಾಮರೂ ಅಲ್ಲ. ಜನರಿಂದ ರೂಪಿತವಾಗಿರುವ ಭಾಷೆ ಅತ್ಯಂತ ಡೆಮಾಕ್ರಾಟಿಕ್ ಆಗಿರುತ್ತದೆ. ಆ ಭಾಷೆಯ ಗಡಿಗಳನ್ನು ವಿಸ್ತರಿಸುವ ಕೆಲಸವನ್ನು ದೆಹಲಿ ಕರ್ನಾಟಕ ಸಂಘ ಬಹಳ ಚೆನ್ನಾಗಿ ಮಾಡಿದೆ. ಕರ್ನಾಟಕದಲ್ಲಿರುವ ಕನ್ನಡಿಗರು ನಮ್ಮ ಸೋದರ ಭಾಷೆಗಳಾದ ತುಳು, ಕೊಂಕಣಿ, ಕೊರಗರ ಭಾಷೆ, ದೊಂಬರ ಭಾಷೆಗಳನ್ನು ಪ್ರೀತಿಯಿಂದ ನೋಡಿಕೊಂಡಾಗ ನಾವು ನಿಜವಾದ ಒಳ್ಳೆಯ ಕನ್ನಡಿಗರಾಗಲು ಸಾಧ್ಯ. ಯಾವುದೇ ಒಂದು ಭಾಷೆಗೆ ಒಂದು ಗಡಿಯಿಲ್ಲ. ಕನ್ನಡಕ್ಕೆ ಕೇವಲ ಕರ್ನಾಟಕವಲ್ಲ, ದೆಹಲಿ, ಚೆನ್ನೈ, ಮುಂಬಯಿ, ಲಾಸ್ ಏಂಜಲೀಸ್ ಕೂಡಾ ಇದೆ. ಅದೇ ರೀತಿ ಕರ್ನಾಟಕದಲ್ಲಿಯೂ ಬೇರೆ ಬೇರೆ ಭಾಷೆಗಳಿವೆ" ಎಂದು ಡಾ. ಅನುಪಮಾ ವಿವರಿಸಿದರು.

"ಡಾ. ಸರೋಜಿನಿ



**ಎಚ್.ಎಸ್. ಅನುಪಮಾ**

**ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಕವಲಕ್ಕಿ ಗ್ರಾಮದಲ್ಲಿ 23 ವರ್ಷಗಳಿಂದ ವೈದ್ಯೆಯಾಗಿ ಬಡ ಮತ್ತು ಹಿಂದುಳಿದ ವರ್ಗದ ಜನರ ಸೇವೆಯನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ಡಾ. ಎಚ್.ಎಸ್. ಅನುಪಮಾ ಅವರು ಸಾಹಿತ್ಯ, ಅನುವಾದ ಮತ್ತು ಸಂಘಟಣೆಗಳಲ್ಲಿ ಕೆಲಸ ಮಾಡುತ್ತಾ ಕ್ರಿಯಾಶೀಲರಾಗಿದ್ದಾರೆ. ಅವರು (1970), ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಹೆಬ್ಬಾಗಿಲಿನವರು. 'ಮಂಥನ' ಸಾಹಿತ್ಯಿಕ, ಸಾಂಸ್ಕೃತಿಕ ವೇದಿಕೆಯ ಸಹ ಸಂಚಾಲಕರು.**

**ದಲಿತ ಮತ್ತು ಮಹಿಳಾ ಸಂಘಟನೆಗಳ ಸಹಭಾಗಿಯಾಗಿರುವ ಇವರು ಮಂಗಳೂರಿನಲ್ಲಿ 2013 ಮಾರ್ಚ್ 8ರಂದು ಹುಟ್ಟಿಕೊಂಡ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಕಾರ್ಯಕರ್ತೆ. ಮಹಿಳಾ ಹಕ್ಕೊತ್ತಾಯ ಜಾಥಾ, ಕರ್ನಾಟಕ ಜನಸಾಹಿತ್ಯ ಸಮಾವೇಶ, ಜನನುಡಿ, ಮೇ ಸಾಹಿತ್ಯ ಮೇಳ ಮತ್ತಿತರ ಸಮಾವೇಶಗಳ ಸಂಘಟನಾ ಸಹಭಾಗಿ. ಲಡಾಯಿ ಪ್ರಕಾಶನದ ಸಹವರ್ತಿ. 'ಕವಿ ಪ್ರಕಾಶನ'ವನ್ನು ನಡೆಸುತ್ತ ಇದುವರೆಗೆ ಏಳು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರು 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದ ಸದಸ್ಯರು.** ಅ

**ಅಭಿಮತ ವರದಿ**

ಮಹಿಷಿಯಂತಹ ಒಬ್ಬ ಕ್ರಿಯಾಶೀಲ ಕನ್ನಡ ಮನಸಿನ ಹೆಸರಲ್ಲಿ ಕೊಡುತ್ತಿರುವ ಗೌರವ ನನಗೆ ಸಿಕ್ಕಿರುವುದು ನನ್ನ ಮುಂದಿನ ದಾರಿ ಯಾವುದು ಅನ್ನುವುದನ್ನು ಇನ್ನಷ್ಟು ಸ್ಪಷ್ಟ ಪಡಿಸಿದೆ. ಒಬ್ಬ ಸಂಘಟಕಿಯಾಗಿ, ಅನುವಾದಕಿಯಾಗಿ, ರಾಜಕೀಯದಲ್ಲಿದ್ದರೂ ಸೃಜನಶೀಲರಾಗಿ ಇದ್ದಂತಹ ಒಬ್ಬ ವ್ಯಕ್ತಿಯ ಹೆಸರಲ್ಲಿ ಒಂದು ಗೌರವವನ್ನು ಸ್ವೀಕರಿಸುವುದು ನನಗೊಂದು ಗೌರವವೇ ಎಂದು ಭಾವಿಸಿದ್ದೇನೆ. ಅಧಿಕಾರಸ್ಥರು ತುಂಬಾ ಓದಿದರೆ ತುಂಬಾ ವಿನಯವಂತರಾಗಿರುತ್ತಾರೆ ಅಥವಾ ತುಂಬಾ ಭ್ರಷ್ಟರಾಗಿರುತ್ತಾರೆ. ಎರಡೂ ಆಗುವ ಸಾಧ್ಯತೆಗಳಿವೆ. ಆದರೆ ಡಾ. ಮಹಿಷಿಯವರು ಭ್ರಷ್ಟರಾಗುವ ದಾರಿಯಿಂದ ತಪ್ಪಿಸಿಕೊಂಡು ತನ್ನನ್ನು ತಾನು ಈ ಸಮಾಜಕ್ಕೆ ಒಡ್ಡಿಕೊಂಡರು" ಎಂದರು. ಮಂಕುತಿಮ್ಮನ ಕಗ್ಗವನ್ನು ಅರಗಿಸಿಕೊಂಡು ಅವರೇ ಸೃಜಿಸಿದಂತೆ ಅನುವಾದ ಮಾಡಿರುವವರು ಭ್ರಷ್ಟರಾಗಲು ಸಾಧ್ಯವಿಲ್ಲ. ಅಂತಹದನ್ನು ಅರಗಿಸಿಕೊಂಡಿರುವ ಡಾ. ಮಹಿಷಿಯವರ ಹೆಸರಲ್ಲಿ ಸಿಗುತ್ತಿರುವ ಪ್ರಶಸ್ತಿಯಿಂದ ನನಗೆ ಸಂತೋಷವಾಗಿದೆ ಎಂದು ಡಾ. ಅನುಪಮಾ ಹೇಳಿದರು.

"ನನ್ನ ಕೆಲಸಕ್ಕೆ ಅಂತ ಗುರುತಿಸಿ ಕೊಟ್ಟಿರುವ ಈ ಪ್ರಶಸ್ತಿಯನ್ನು ನಾನು ಖಂಡಿತವಾಗಿಯೂ ನನ್ನ ಮುಂದಿನ ದಾರಿಯನ್ನು ಸ್ಪಷ್ಟ ಪಡಿಸಲು ಬಳಸಿಕೊಳ್ಳುತ್ತೇನೆ. ಐವತ್ತು ಸಾವಿರ ರೂಪಾಯಿಗಳ ಈ ಮೊತ್ತವನ್ನು ನಾನು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಒಬ್ಬ ಕಾರ್ಯಕರ್ತೆಯಾಗಿ ಒಕ್ಕೂಟದ ಕೆಲಸ ಕಾರ್ಯಗಳಿಗೆ ಕೊಡುತ್ತೇನೆ""ಎಂದು ಡಾ. ಅನುಪಮಾ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಪಿಚ್ಚಳ್ಳಿ ಶ್ರೀನಿವಾಸ್ ಅವರು ಮಾತಾಡಿ ಡಾ. ಅನುಪಮಾ ಅವರ ಹೃದಯ ಅವರ ಕಾವ್ಯದಲ್ಲಿದೆ ಎಂದರು. ಡಾ. ಅನುಪಮ ಅವರ ಊರಲ್ಲಿ ಎಷ್ಟೋ ಜನರು ಮುಖ್ಯವಾಗಿ ಹೆಣ್ಣುಮಕ್ಕಳು ಅವರ ಮೇಲೆ ತಮ್ಮ ಜೀವವನ್ನೇ ಇಟ್ಟಿದ್ದಾರೆ. ಅಂತಹ ಸೇವೆ ಅವರದ್ದು ಎಂದು ಕೊಂಡಾಡಿದರು. ಸುಮಾರು ಐನೂರು ಕೋಟಿ ರೂಪಾಯಿಗಳಷ್ಟು ಬಜೆಟ್ ಇಟ್ಟಿರುವ ಕರ್ನಾಟಕ ಸರಕಾರವು ಕನ್ನಡ ಮತ್ತು ಸಂಸ್ಕೃತಿ ಪರಂಪರೆಗೆ ಇಡೀ ದೇಶದಲ್ಲಿ ಯಾವುದೇ ರಾಜ್ಯವು ಕೊಡದೇ ಇರುವಂತಹ ಕೊಡುಗೆಯನ್ನು ಕೊಡುತ್ತಿದೆ ಎಂದರು. ಜಾನಪದ ಅಕಾಡೆಮಿಯು ಮೂವತ್ತು ಜಿಲ್ಲೆಗಳಿಂದ 60 ಮಹಿಳಾ ತಂಡ ಸೇರಿದಂತೆ 105 ತಂಡಗಳಿಗೆ ತರಬೇತಿಯನ್ನು ನೀಡಿದೆ. ಪ್ರತಿ ಪ್ರದರ್ಶನದಲ್ಲೂ ಮಹಿಳಾ ತಂಡ ಇರಬೇಕೆನ್ನುವ ಆಲೋಚನೆಯನ್ನು ಕಾರ್ಯಗತಗೊಳಿಸಿದೆ. ನವದೆಹಲಿಗೆ ಬಂದ ನೂರು ಕಲಾವಿದರು ಸಾಂಸ್ಕೃತಿಕವಾಗಿ ಬಹಳಷ್ಟು ಅರ್ಥಪೂರ್ಣ ಸಂಸ್ಥೆಗಳಾದ ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಮತ್ತು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಸುಮಾರು ಒಂದೂವರೆ ಸಾವಿರ ಜನರ ಮುಖ್ಯವಾಗಿ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಎಲ್ಲರನ್ನೂ ಹಿಡಿದಿಡುವಂತಹ ಯಶಸ್ವೀ ಪ್ರದರ್ಶನವನ್ನು ನೀಡಿದೆ ಎಂದರು. ಅಂತಹ ಶಕ್ತಿ ಕೇವಲ ಕರ್ನಾಟಕದ ಮಾತ್ರವಲ್ಲ ಎಲ್ಲಾ ಜಾನಪದಕ್ಕು ಇದೆ ಎಂದು ಶ್ರೀನಿವಾಸ್ ಅವರು ಹೇಳಿದರು.



ಇದೇ ಸಂದರ್ಭದಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಯಾದ ಬಹುಭಾಷಾ ತಜ್ಞ, ಸಾಹಿತಿ ಹೊರನಾಡ ಕನ್ನಡಿಗರಾಗಿರುವ ಚೆನ್ನೈನ ಡಾ. ವಿ. ಗೋಪಾಲಕೃಷ್ಣ ಅವರು ಮಾತಾಡುತ್ತಾ ಕರ್ನಾಟಕದಲ್ಲಿ ಡಾ. ಸರೋಜಿನಿ ಮಹಿಷಿಯವರು ನೀಡಿದ ವರದಿಯು ಸಂಪೂರ್ಣವಾಗಿ ಅನುಷ್ಠಾನಗೊಳ್ಳದೇ ಇರುವುದು ದುಃಖದ ಮಾತೆಂದರು. ಅವರು ಕನ್ನಡ ಮಾತಾಡುವವರು ಕನ್ನಡವನ್ನೇ ಮಾತಾಡಿದರೆ ಭಾಷೆ ಉಳಿಯುತ್ತದೆ ಎಂದರು. ಜನಸಾಮಾನ್ಯರು ಮೊದಲು ಕನ್ನಡವನ್ನು ಉಳಿಸಬೇಕು ಆಗ ಸಾಹಿತಿಗಳು ಸಾಹಿತ್ಯವನ್ನು ರಚಿಸಿ ಕನ್ನಡವನ್ನು ಬೆಳೆಸುತ್ತಾರೆ ಎಂದು ಹೇಳಿದರು.




ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ನ ಅಧ್ಯಕ್ಷರಾದ ದೆಹಲಿಯಲ್ಲಿ ಸುಮಾರು ಮೂರವರೆ ದಶಕಗಳಿಂದ ನೆಲೆಸಿರುವ ಕನ್ನಡಿಗ ಶ್ರೀ ಟಿ. ದಿಲೀಪ್ ಕುಮಾರ್ ಅವರು ಸಮಾರಂಭದ ಇನ್ನೋರ್ವ ಮುಖ್ಯ ಅತಿಥಿಯಾಗಿದ್ದರು. ಅವರು ತಮ್ಮ ಭಾಷಣದಲ್ಲಿ ಜನಪದ ಸಾಹಿತ್ಯವು ಒಂದು ಹೆಮ್ಮರವಾದರೆ ಅದರ ಬೇರುಗಳು ಜನರ ಅಂತರಾಳದಲ್ಲಿದೆ. ಕಲೆಯು ಒಂದೇ ಆದರೂ ಧ್ವನಿಗಳು ಹಲವಾರು ಇವೆ ಎಂದರು. ಮುಂದಿನ ಪೀಳಿಗೆಗೆ ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಅವರು ತಿಳಿಸಿದರು.

ಆರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ತಮ್ಮ ಸ್ವಾಗತ ಭಾಷಣದಲ್ಲಿ ಡಾ. ಸರೋಜಿನಿ ಮಹಿಷಿಯವರ ಕೊಡುಗೆಗಳನ್ನು ಸ್ಮರಿಸಿದರು. ಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ ಡಾ. ಮಹಿಷಿಯವರು ನವದೆಹಲಿಯಲ್ಲಿ ಕರ್ನಾಟಕ ಸಂಘ ಮತ್ತು ಕನ್ನಡ ಶಿಕ್ಷಣ ಸಂಸ್ಥೆಗಳಿಗಾಗಿ ಸರಕಾರದಿಂದ ಜಾಗವನ್ನು ಮಂಜೂರು ಮಾಡಿಸುವಲ್ಲಿ ಮಹತ್ತರವಾದ ಪಾತ್ರವಹಿಸಿ ಯಶಸ್ವಿಯಾದರು. ಅಂತಹ ಡಾ. ಸರೋಜಿನಿ ಮಹಿಷಿಯವರ ಸಾಧನೆಯ ನೆನಪು ಸದಾ ನಮ್ಮಲ್ಲಿರಬೇಕು ಎಂಬ ಉದ್ದೇಶದಿಂದ ದೆಹಲಿ ಕರ್ನಾಟಕ ಸಂಘವು ಈ ಪ್ರಶಸ್ತಿಯನ್ನು ನೀಡಲು ಆರಂಭಿಸಿದೆ ಎಂದರು.

ತಮ್ಮ ಪತಿಗೆ ಮೂತ್ರಪಿಂಡ ನೀಡಿದ ಶ್ರೀಮತಿ ಮೀನಾಕ್ಷಿ ಮಹಾಲಿಂಗಪ್ಪ ಅವರಿಗೆ ಇದೇ ಸಂದರ್ಭದಲ್ಲಿ ಸಂಘದ ವತಿಯಿಂದ ಗೌರವ ಅರ್ಪಣೆ ಮಾಡಲಾಯಿತು. ಶ್ರೀಮತಿ ಮೀನಾಕ್ಷಿಯವರು ಎಲ್ಲರಿಗೂ ವಂದನೆ ಸಲ್ಲಿಸಿದರು. ಶ್ರೀಮತಿ ಶೋಭನಾ ಬಿಳಿಮಲೆಯವರಿಗೂ ಗೌರವ ಅರ್ಪಣೆಯನ್ನು ಅವರ ಅನುಪಸ್ಥಿತಿಯಲ್ಲಿ ಸಲ್ಲಿಸಲಾಯಿತು.

ಸಂಘದ ಸದಸ್ಯರಿಂದ ನಾಡಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ವಂದಿಸಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಖಾರಾಮ್ ಉಪ್ಪೂರು ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಸಭಾ ಕಾರ್ಯಕ್ರಮದ ನಂತರ ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ ಸುಮಾರು 100 ಕಲಾವಿದರಿಂದ ವಿವಿಧ ಜಿಲ್ಲೆಗಳ ಜನಪದ ಕಲಾ ಪ್ರದರ್ಶನವು ನಡೆಯಿತು. ಅ

***ಬಾಲಕೃಷ್ಣ ನಾಯ್ಕ್ ಡಿ.***

## ಅನುಪಮಾ ಅವರ ಸಾಹಿತ್ಯ ಸಾಧನೆ

1. ಕಾಡುಹಕ್ಕಿಯ ಹಾಡು-ಕವನ ಸಂಕಲನ (2008)
2. ಹೂವರಳಿದ್ದಕ್ಕೆ ಯಾಕೆ ಸಾಕ್ಷಿ?-ಕಥಾ ಸಂಕಲನ (2009)
3. ಅಸಮಾನ ಭಾರತ-ಜಾತಿ ಜನಗಣತಿ ಕುರಿತ ಬರಹಗಳ ಸಂಪಾದನೆ. (2010)
4. ಬಾನಿನಲ್ಲಿ ಮಹಿಳೆ: ಸುನಿತಾ ವಿಲಿಯಮ್ಸ್-ಬಾಹ್ಯಾಕಾಶ ವಿಜ್ಞಾನ ಹಾಗೂ ಸುನಿತಾ ವಿಲಿಯಮ್ಸ್ ಜೀವನ ಚರಿತ್ರೆ (2011)
5. ಜೀವಕೋಶ: ವೈದ್ಯಲೋಕದ ಕಥನ (2011)
6. ನೈಲ್ ನದಿಯಗುಂಟ ಶರಾವತಿಯನರಸುತ್ತ-ಈಜಿಪ್ಟ್ ಪ್ರವಾಸ ಕಥನ (2012)
7. ಭೀಮಯಾನ-ಅಂಬೇಡ್ಕರ್ ಬರಹಗಳ ಅನುವಾದ, ಸಂಪಾದನೆ. (2012)
8. ಮಹಿಳೆ: ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ (ಲೇಖನ ಸಂಗ್ರಹ) (2013)
9. ಮಹಿಳಾ ಆರೋಗ್ಯ – ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ. (2013)
10. ಉರಿಯ ಪದವು: ಮರಾಠಿ ಕವಿ ನಾಮದೇವ್ ಢಸಾಳ್ ಕವನಗಳ ಅನುವಾದ (2013)
11. ಅಂಬೇಡ್ಕರ್ ಮತ್ತು ಕಾರ್ಟೂನ್ ವಿವಾದ – ಸಂಪಾದಿತ. (2013)
12. ಮರಗುದುರೆ: ತೆಲುಗು ಕವಿ ನಗ್ನಮುನಿ ಮಾತು-ಕವಿತೆ ಅನುವಾದ (2013)
13. ಅಂಬೇಡ್ಕರ್‌ವಾದಿಗಳ ಬಿಕ್ಕಟ್ಟು ಮತ್ತು ಭವಿಷ್ಯದ ಸವಾಲುಗಳು: ಡಾ. ಆನಂದ್ ತೇಲ್ತುಂಬ್ಡೆ, ಸಂಪಾದನೆ ಮತ್ತು ಅನುವಾದ (2013)
14. ದಲಿತರು: ಭೂತ-ಭವಿಷ್ಯ, ಡಾ. ಆನಂದ್ ತೇಲ್ತುಂಬ್ಡೆ ಬರಹಗಳು, ಅನುವಾದ ಮತ್ತು ಸಂಪಾದನೆ. (2013)
15. ಅಭಿವ್ಯಕ್ತಿ ಸ್ವಾತಂತ್ರ್ಯ: ವಿವಿಧ ಆಯಾಮಗಳು. ಸಂಪಾದಿತ. (2013)
16. ಹೆಣ್ಣು: ಸಂಕರ ಕಾಲದ ಆತ್ಮಪ್ರಜ್ಞೆ (ಲೇಖನ ಸಂಗ್ರಹ) (2014)
17. ಅಂಡಮಾನ್: ಕಂಡ ಹಾಗೆ (ಪ್ರವಾಸ ಕಥನ) (2014)
18. ಮೋಟಾರ್ ಸೈಕಲ್ ಡೈರೀಸ್: ಚೆಗೆವಾರ (ಅನುವಾದ) (2014)
19. ಛತ್ರಪತಿ ಶಾಹೂ: ಜನರ ನೋವಿಗೆ ಮಿಡಿದ ಪ್ರಾಣಮಿತ್ರ (ಜೀವನ ಚರಿತ್ರೆ) (2014)
20. ಮುಳ್ಳಮೇಲಿನ ಸೆರಗು (ಅತ್ಯಾಚಾರ ಮತ್ತು ಕಾನೂನು) (2015)
21. ಮಣಿ ಸರ-ಗಡಿ ದಾಟಿದ ಕವಿತೆಗಳು (ಸಂಪಾದಿತ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ) (2015)
22. ಕಸಿ ಮಾವು-ಅನುವಾದಿತ ಕತೆಗಳು (ಸಂಪಾದಿತ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ) (2015)
23. ನೋಯುವ ಹಲ್ಲಿಗೆ ಹೊರಳುವ ನಾಲಿಗೆ: ಅಂಕಣ ಬರಹ (2015)
24. ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ-ಜೀವನ ಚರಿತ್ರೆ (2015)
25. ಪ್ರತಿ ಬಿಂಬ – ಪತ್ರಿಕಾ ಬರಹಗಳ ಸಂಕಲನ-2014 (ಸಂಪಾದಿತ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ) (2015)
26. ನಡೆಯೋಣ, ಕೇಳುತ್ತಾ.. (ಸಂಪಾದಿತ, ಪರ್ಯಾಯ ಚಿಂತನೆಗಳ ಅನುವಾದಿತ ಲೇಖನ ಸಂಗ್ರಹ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ) (2015)
27. ಸಹಗಮನ (ಕವನ ಸಂಲನ) (2015)
28. ಭಗತ್ ಸಿಂಗ್ ಜೈಲ್ ಡೈರಿ-(ಅನು) ಮೂಲ ಇಂಗ್ಲಿಷ್: ಚಮನ್ ಲಾಲ್ (2015)
29. ಕಾವ್ಯ ಬೋಧಿ-ಮಹಿಳಾ ಕಾವ್ಯ 2014 (ಸಂ) (2015)
30. ತಾಳೆ ಗರಿ (ಬಾಮಾ ಅವರ ತಮಿಳು ಆತ್ಮಕತೆ ಕರುಕ್ಕು ಕನ್ನಡಾನುವಾದ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ)-2016
31. ಉರಿವ ಕುಡಿಯ ನಟ್ಟ ನಡುವೆ-ಜಲಾಲುದ್ದೀನ್ ರೂಮಿ ಕವಿತೆಗಳ ಅನುವಾದ-(2016)

ಅಭಿಮತ ವರದಿ



## ಸಂಘದಲ್ಲಿ ರಾಜ್ಯೋತ್ಸವ

ದೆಹಲಿ ಕರ್ನಾಟಕ ಸಂಘದಲ್ಲಿ 61ನೇ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮಗಳು ಇದೇ ನವೆಂಬರ್ ಒಂದರಂದು ಸಂಘದ ಆವರಣದಲ್ಲಿ ಕನ್ನಡಾಂಬೆ ಭುವನೇಶ್ವರಿಯ ಪೂಜೆ, ರಾಷ್ಟ್ರ ಧ್ವಜಾರೋಹಣ, ನಾಡಗೀತೆ ಹಾಗೂ ರಾಷ್ಟ್ರಗೀತೆಗಳನ್ನು ಹಾಡುವುದರ ಜೊತೆಗೆ ಕನ್ನಡ ನಾಡು ಮತ್ತು ನುಡಿಯ ಅಭಿವೃದ್ಧಿಗಾಗಿ ಜಯಘೋಷಗಳ ಉದ್ಗಾರಗಳೊಂದಿಗೆ ಆರಂಭವಾಯಿತು. ರಾಜ್ಯೋತ್ಸವ ದಿನದಂದು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಕನ್ನಡಿಗರಿಗೆ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ಹಾರೈಸಿದರು. ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ಸಂಘದ ಸದಸ್ಯರು ಮತ್ತು ದೆಹಲಿಯ ಗಣ್ಯ ಕನ್ನಡಿಗರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ರಾಜ್ಯೋತ್ಸವದ ಅಂಗವಾಗಿ ದೆಹಲಿ ಕರ್ನಾಟಕ ಸಂಘ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ನವೆಂಬರ್ ತಿಂಗಳ ಪೂರ್ತಿ ಹಮ್ಮಿಕೊಂಡಿರುವ ರಾಜ್ಯೋತ್ಸವ ಕಾರ್ಯಕ್ರಮಗಳ ವಿವರಗಳನ್ನು ನೆರೆದವರೊಡನೆ ಹಂಚಿಕೊಂಡರು. ಅ

*ಅಭಿಮತ ವರದಿ*

## ಅಭಿನಂದನೆ

### ಬಿಬಿಸಿ ಆಯ್ಕೆ ಮಾಡಿರುವ ಜಗತ್ತಿನ ನೂರು ಸ್ಫೂರ್ತಿದಾಯಕ ಮಹಿಳೆಯರ ಸಾಲಿನಲ್ಲಿ

# ಸಾಲು ಮರದ ತಿಮ್ಮಕ್ಕ



ಎಂಭತ್ತು ವರ್ಷಗಳ ತನ್ನ ಸುಧೀರ್ಘ ಜೀವನ ಪಯಣದಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಮರಗಳನ್ನು ನೆಟ್ಟು ಬೆಳೆಸಿ, ತನ್ನ ಕೆಲಸದಲ್ಲಿನ ನಿಷ್ಠೆ, ಶ್ರದ್ಧೆಗಳಿಂದಾಗಿರುವ 'ಸಾಲು ಮರದ ತಿಮ್ಮಕ್ಕ' ಬಿಬಿಸಿ ಆಯ್ಕೆ ಮಾಡಿರುವ ಜಗತ್ತಿನ ನೂರು ಸ್ಫೂರ್ತಿದಾಯಕ ಮಹಿಳೆಯರಲ್ಲಿ ಒಬ್ಬರಾಗಿದ್ದಾರೆ.

'ಮಕ್ಕಳಿದ್ದರೆ ಮುಪ್ಪಿನಲ್ಲಿ ಹೆತ್ತವರಿಗೆ ಆಸರೆ ಆಗ್ತಾರೆ' ಅನ್ನೋ ನಂಬಿಕೆ ದೂರವಾಗುತ್ತಿರುವ ಈ ದಿನಗಳಲ್ಲಿ 'ಮಕ್ಕಳಿಲ್ಲ' ಅನ್ನೋ ಕಾರಣಕ್ಕೆ ಸಮಾಜದ ಲೇವಡಿಗೆ ತುತ್ತಾಗಿದ್ದ ಸಾಲು ಮರದ ತಿಮ್ಮಕ್ಕ ನವರು –ಹೆತ್ತವರಿಗೆ ಮಾತ್ರ ಆಸರೆ ಆಗಬಹುದಾದ ಮಕ್ಕಳಿಗಿಂತಲೂ, ಇಡೀ ಸಮಾಜಕ್ಕೆ ಪ್ರಕೃತಿಗೆ ಆಸರೆಯಾಗುವ 'ಮರಗಳನ್ನು' ನೆಟ್ಟು ಇಡೀ ಮನುಕುಲಕ್ಕೆ ಮಾದರಿಯಾಗಿದ್ದಾರೆ.

ಜಗತ್ತಿನಾದ್ಯಂತ 'ಜಾಗತಿಕ ತಾಪಮಾನ' ಮತ್ತು 'ಹಸಿರುಮನೆ ಪರಿಣಾಮ'ಗಳ ವ್ಯಾಪಕ ಚಟುವಟಿಕೆಗಳು, ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ 'ಹಸಿರು ಸಂರಕ್ಷಣೆಯ ಮೊನೆಯಾಳು' (ಗ್ರೀನ್ ಕ್ರುಸೇಡರ್) ಸಾಲು ಮರದ ತಿಮ್ಮಕ್ಕ ನವರಿಗೆ ಬಿಬಿಸಿ ನೀಡಿರುವ ಈ ಗೌರವ ನಿಜಕ್ಕೂ ಅರ್ಥಪೂರ್ಣವಾಗಿದೆ. ಇದರಿಂದಾಗಿ ಮರ ನೆಡುವ ಮೂಲಕ ಹಸಿರು ಸಂರಕ್ಷಣೆಯೇ ತನ್ನ ಬದುಕಿನ ಉಸಿರು ಎಂಬುದನ್ನು ಅತ್ಯಂತ ನಿಷ್ಠೆ ಮತ್ತು ಪರಮ ಶ್ರದ್ಧೆಗಳಿಂದ ಸಾಧಿಸಿರುವ ಸಾಲು ಮರದ ತಿಮ್ಮಕ್ಕ ನವರು ಜಗತ್ತಿನ ಇತರರಿಗೂ ಸ್ಫೂರ್ತಿಯಾಗಿದ್ದಾರೆ. ಅ

*ಅಭಿಮತ ವರದಿ*

# “ಮಾರುಕಟ್ಟೆ ವ್ಯವಸ್ಥೆಯು ರಾಜಕೀಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಬದಲಿಸುತ್ತವೆ” ಡಾ. ಎಚ್.ಎಸ್. ಅನುಪಮಾ

ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ವಿಜೇತೆ **ಡಾ. ಎಚ್.ಎಸ್. ಅನುಪಮಾ** ಅವರು ಸಾಹಿತ್ಯ ಮಾತ್ರವಲ್ಲ ಸಾಮಾಜಿಕವಾಗಿ ಮಹಿಳಾ ಚಳುವಳಿ ಮತ್ತು ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಸಿಕೊಂಡವರು. ವಿವಿಧ ಭಾಷೆಗಳಿಂದ ಚಿಂತನಾರ್ಹ ಬರೆಹಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರನ್ನು ಅಭಿಮತಕ್ಕಾಗಿ ಪ್ರಧಾನ ಸಂಪಾದಕರಾದ **ಬಾಲಕೃಷ್ಣ ನಾಯ್ಕ ಡಿ** ಅವರು ವಿಶೇಷವಾಗಿ ಸಂದರ್ಶಿಸಿದರು. ಸಂದರ್ಶನದ ಆಯ್ದಭಾಗವನ್ನು ಅಭಿಮತದ ಓದುಗರಿಗೆ ನೀಡುತ್ತಿದ್ದೇವೆ.

**ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಅನುವಾದ ಎಷ್ಟು ಉಪಯುಕ್ತ?**

ಬೇರೊಂದು ಭಾಷೆಯಲ್ಲಿ ನಾವು ಏನನ್ನು ಓದಿರುತ್ತೇವೆಯೋ ಅದನ್ನು ಆ ಭಾಷೆ ಗೊತ್ತಿಲ್ಲದ ನನ್ನ ಭಾಷೆಯವರೂ ತಿಳಿಯಬೇಕು ಎಂಬ ಹಂಬಲದಲ್ಲಿ ನಾನು ಅನುವಾದ ಮಾಡುತ್ತೇನೆ. ಅನುವಾದ ಎನ್ನುವುದು ಸೃಜನಶೀಲ ಬರವಣಿಗೆಯ ಕ್ರಿಯೆಯೇ ಆಗಿದೆ. ಒಂದು ಕವಿತೆಯನ್ನು ಅನುವಾದ ಮಾಡುವಾಗ ನಾವು ಕವಿಯಾಗಿ ಇಲ್ಲದಿದ್ದರೆ ಆ ಕವಿತೆಯನ್ನು ಅನುವಾದ ಮಾಡಲು ಆಗುವುದಿಲ್ಲ. ಅದೇ ರೀತಿ ಕಥೆ ಅಥವಾ ವೈಚಾರಿಕ ಬರಹಗಳನ್ನು ಅನುವಾದ ಮಾಡುವಾಗಲೂ ನಾವು ಸೃಜಶೀಲರಾಗಿಯೇ ಇರಬೇಕಾಗುತ್ತದೆ. ಅನುವಾದ ಎಂದರೆ ಅಲ್ಲಿರುವುದನ್ನು ಅಕ್ಷರಶಃ ಇಲ್ಲಿಡುವ ಪ್ರಕ್ರಿಯೆಯಲ್ಲ.

ನಾನು ತೆಲುಗು ಕವಿ ನಗ್ನಮುನಿ ಕವಿತೆಗಳನ್ನು ಅನುವಾದ ಮಾಡಿದೆ. ಅದೇ ರೀತಿ ತಮಿಳಿನ ಬಾಮಾ ಅವರು ಬರೆದ ತಮಿಳಿನ ಮೊದಲ ದಲಿತ ಆತ್ಮಕತೆಯನ್ನು ಅನುವಾದ ಮಾಡಿದೆ. ನಾವು ಕನ್ನಡದಲ್ಲಿ ಸಾಕಷ್ಟು ದಲಿತ ಆತ್ಮಕಥೆಗಳನ್ನು ನೋಡಿದ್ದೇವೆ. ಮರಾಠಿ ಆತ್ಮಕಥೆಗಳನ್ನೂ ಅನುವಾದದ ಮೂಲಕ ನೋಡಿದ್ದೇವೆ. ತಮಿಳರು ಏನು ಹೇಳುತ್ತಾರೆ ಎಂದು ನಮಗೆ ಗೊತ್ತಿರಲಿಲ್ಲ. ಅದನ್ನು ಅನುವಾದದ ಮೂಲಕ ನಾವಿಂದ ನೋಡಬಹುದಾಗಿದೆ. ಉಳಿದ ಪ್ರಪಂಚದ ಜತೆಗೆ ನಾನು ಎಲ್ಲಿದ್ದೇನೆ ಎಂಬುದನ್ನು ಗುರುತಿಸಿಕೊಳ್ಳಲು ಮತ್ತು ಅದರ ಜತೆಗೆ ಒಂದು ತಾದಾತ್ಮ್ಯವನ್ನು ಸಾಧಿಸಿಕೊಳ್ಳಲು ಅನುವಾದಗಳು ಸಹಾಯವಾಗುತ್ತವೆ.

**ಮಹಿಳಾ ಚಳುವಳಿಗಳು ಯಾವ ಮಟ್ಟದಲ್ಲಿವೆ? ತಳಮಟ್ಟದ ಮಹಿಳೆಯರ ವರೆಗೆ ಚಳುವಳಿಗಳು ತಲುಪುತ್ತವೆಯೇ?**

ಮಹಿಳೆಯರು ಚಳುವಳಿ ಎಂಬ ಹಣೆಪಟ್ಟಿ ಇಟ್ಟುಕೊಳ್ಳದೇ ಸಾಕಷ್ಟು ರೀತಿಗಳಲ್ಲಿ ಪ್ರತಿರೋಧ ತೋರಿಸಿಕೊಂಡು ಬಂದಿದ್ದಾರೆ. ಆರಂಭದಲ್ಲಿ ಶಿಕ್ಷಿತ ಮತ್ತು ಮೇಲ್ವರ್ಗದ ಮಹಿಳೆಯರು ತಾವು ಓದಿ, ಬರೆಯಲು ಕಲಿತು ತಮಗನಿಸಿದ್ದನ್ನು ಹೇಳೋದಕ್ಕೆ ಪ್ರಯತ್ನಿಸಿದರು. ಆದರೆ ಅದು ಅಷ್ಟಕ್ಕೇ ಸಿಮಿತವಾಗಲಿಲ್ಲ. ನಮ್ಮ ದೇಶದಲ್ಲಿ ಮಹಿಳಾ ಚಳುವಳಿಯ ಎರಡನೇ ಅಲೆ ಮುಂಬಯಿಯ ಆದಿವಾಸಿ ಅಪ್ರಾಪ್ತ ಬಾಲಕಿ ಮಥುರಾ ಅತ್ಯಾಚಾರ ಪ್ರಕರಣದಿಂದ ಆರಂಭವಾಯಿತು ಅನ್ನಬಹುದು. ರಾಜಸ್ಥಾನದ ಅನಕ್ಷರಸ್ಥೆ ಭಾನ್ವರಿ ದೇವಿಯ ಪರವಾಗಿ ಇಡೀ ಮಹಿಳಾ ಚಳುವಳಿ ನಿಂತಿತು. ಅದೇ ರೀತಿ ಷಾಬಾನು. ಅವಳೇನು ಮೇಲ್ವರ್ಗದವಳಲ್ಲ. ಆರಂಭದಲ್ಲಿ ಅಕಾಡೆಮಿಕ್ ವಲಯದ ಮತ್ತು ಮೇಲ್ವರ್ಗದ ಮಹಿಳೆಯರು ಆರಂಭಿಸಿದರೂ ತಳಸಮುದಾಯದ ಹೆಣ್ಮಕ್ಕಳೂ ಕ್ರಮೇಣವಾಗಿ ಪಾಲ್ಗೊಂಡಿದ್ದಾರೆ. ಕರ್ನಾಟಕದಲ್ಲಿಯೂ ಕಳೆದ ಶತಮಾನದ ಎಪ್ಪತ್ತು ಎಂಬತ್ತರ ದಶಕದಲ್ಲಿ ದಲಿತ, ಬಂಡಾಯ, ಸಮಾಜವಾದಿ ಮತ್ತು ರೈತ ಚಳುವಳಿಯ ಜತೆಗೆ ದೊಡ್ಡ ಪ್ರಮಾಣದಲ್ಲಿ ತಳಸಮುದಾಯದ ಮತ್ತು ಶ್ರಮಿಕವರ್ಗದ ಹೆಣ್ಮಕ್ಕಳು ಮುಂದೆ ಬಂದಿದ್ದಾರೆ. ಈಗಲೂ ಪೌರ ಕಾರ್ಮಿಕರ ಸಂಘಟನೆಗಳು, ಲೈಂಗಿಕ ಅಲ್ಪ ಸಂಖ್ಯಾತರ ಸಂಘಟನೆಗಳು, ಗಾರ್ಮೆಂಟ್ ಕೆಲಸಗಾರರ ಸಂಘಟನೆಗಳೆಲವೂ ಮೇಲ್ವರ್ಗದ ಜನರ ಸಂಘಟನೆಗಳಲ್ಲ. ಮಹಿಳಾ ಹೋರಾಟ ಎನ್ನುವುದು ಹಲವು ಸ್ಥರಗಳಲ್ಲಿ ನಡೆಯುತ್ತಿದೆ. ಕಾನೂನಾತ್ಮಕ ಹೋರಾಟವಿದೆ, ಜನಪ್ರತಿನಿಧಿಗಳು, ಬರಹಗಾರರು ಮೊದಲಾದವರೆಲ್ಲರೂ ಮಹಿಳಾ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸಾಮಾನ್ಯ ನಂಬಿಕೆಯೆಂದರೆ ಗಟ್ಟಿಯಾಗಿ ಮಾತಾಡುವವರು ಮತ್ತು ಬರೆಯುವವರು ಮಾತ್ರವೇ ಹೋರಾಟಗಾರರು ಎಂದಿದೆ ಆದರೆ ಅವರ ಹಿಂದೆ ಅವರ ಬೆಂಬಲಕ್ಕೆ ಒಂದು ದೊಡ್ಡ ಪಡೆಯೇ ಬೀದಿಯಲ್ಲಿದೆ. ಅದನ್ನು ನಾವು ಗುರುತಿಸಬೇಕಷ್ಟೆ.

**ನೀವು ಕಾರ್ಯಕರ್ತೆಯಾಗಿರುವ ಒಕ್ಕೂಟವು ಯಾವ ರೀತಿ ಕೆಲಸ ಮಾಡುತ್ತಿದೆ?**

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಮಂಗಳೂರಿನಲ್ಲಿ ಪಬ್ ದಾಳಿ ಆದಾಗ, ಅಲ್ಲಿ ಬೇರೆ ಬೇರೆ ಧರ್ಮದ ಹೆಣ್ಣು ಮತ್ತು ಗಂಡು ಮಕ್ಕಳು ಒಬ್ಬರಿಗೊಬ್ಬರು ಮಾತಾಡುವುದೇ ಒಂದು ಅಪರಾಧ ಎಂಬ ಭಾವನೆ ಉಂಟಾದಾಗ ಹುಟ್ಟಿಕೊಂಡಿತು. ನಮ್ಮಲ್ಲಿ ಹಲವಾರು ಸಂಘಟನೆಗಳಿವೆ. ಅವುಗಳು ಹಲವು ವಿಷಯಗಳ ಮತ್ತು ಸಿದ್ಧಾಂತಗಳ ಆಧಾರದಲ್ಲಿ ಹಂಚಿ ಹೋಗಿವೆ. ಇಂತಹ ಮಣಿಗಳನ್ನೆಲ್ಲಾ ಪೋಣಿಸಿ ಮಾಲೆಮಾಡುವ ಅಗತ್ಯ ಕಂಡು ಬಂತು. ಹಾಗಾಗಿ ಮಣಿ ಪೋಣಿಸುವ ದಾರವಾಗಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಹುಟ್ಟಿಕೊಂಡಿತು. ಇದೊಂದು ಸಂಸ್ಥೆಯಲ್ಲ. ಇದೊಂದು ಯಾವುದೇ ಪದಾಧಿಕಾರಿಗಳಿಲ್ಲದ ತೆರೆದ ಗುಂಪು. ಧರ್ಮಾಧಾರಿತ ರಾಜಕಾರಣವನ್ನು ಮಾಡದೇ ನಮ್ಮ ಜತೆ ಸಹಮತ ಇಟ್ಟುಕೊಂಡು ಮಾನವ ಪರವಾಗಿ ಯೋಚಿಸುವಂತಹ ಸುಮಾರು 257 ಸಂಘಟನೆಗಳು ನಮ್ಮ ಜತೆ ಇವೆ. ನಮ್ಮದು ಅವುಗಳೆಲ್ಲದರ ಒಕ್ಕೂಟ. ಮಹಿಳಾ ಚಳುವಳಿಯಲ್ಲಿ ಇರುವವರ ಜತೆಗೆ ಲೈಂಗಿಕ ಅಲ್ಪಸಂಖ್ಯಾತರು ನಮ್ಮ ಜತೆಗಿದ್ದಾರೆ. ಮುಂದಿನ ನಮ್ಮ ಕಾರ್ಯಕ್ರಮ ಕೊಪ್ಪಳದಲ್ಲಿದೆ. ಅಲ್ಲಿ ಬಾಲ್ಯ ವಿವಾಹ, ತಾಯಿ ಮರಣ, ಶಿಶು ಮರಣ ಮತ್ತು ಸ್ತ್ರೀ ಭ್ರೂಣ ಹತ್ಯೆ ಜಾಸ್ತಿ ಇರುವುದರಿಂದ ಈ ಎಲ್ಲಾ ವಿಷಯಗಳನ್ನು ಇಟ್ಟುಕೊಂಡು ನಮ್ಮ ಗುಂಪು ಇದಾಗಲೇ ಅಲ್ಲಿಯ ಸ್ಥಳೀಯ ಸಂಸ್ಥೆಗಳೊಂದಿಗೆ ಈಗಾಗಲೇ ಸಭೆ, ಮಾತುಕತೆಗಳನ್ನು ನಡೆಸುತ್ತಿದೆ.

**ಪ್ರಸಕ್ತ ಸಮಾಜದಲ್ಲಿ ಸಮಾಜಮುಖಿ ಚಳುವಳಿಗಳ ಪಾತ್ರಗಳೇನು ಮತ್ತು ಅವು ಹಿಂದಿನ ಹೋರಾಟಗಳಿಗಿಂತ ಹೇಗೆ ಭಿನ್ನವಾಗಿವೆ?**

ಒಂದು ವಿಷಯವನ್ನು ಇಟ್ಟುಕೊಂಡು ಒಂದು ಚಳುವಳಿ ಹುಟ್ಟುತ್ತದೆ. ಆ ವಿಷಯವನ್ನು ಹೆಚ್ಚು ಕಾಲ ಜೀವಂತವಾಗಿಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಒಂದು ಚಳುವಳಿಯು 20 ವರ್ಷಕ್ಕಿಂತ ಹೆಚ್ಚು ಇರುವುದಕ್ಕೆ ಸಾಧ್ಯವಿಲ್ಲ. ರಾಮಜನ್ಮಭೂಮಿ ವಿಷಯವನ್ನೇ ನೋಡಿ. ಅದರಿಂದ ಇವತ್ತು ಓಟು ಕೇಳೋದಕ್ಕೆ ಆಗುವುದಿಲ್ಲ. ವಿಷಯಗಳು ಬದಲಾಗುತ್ತವೆ. ಎಪ್ಪತ್ತು ಎಂಭತ್ತರ ದಶಕದ ರೈತ ಸಂಘ, ದಲಿತ, ಬಂಡಾಯ ಸಂಘಟನೆಗಳು ಬರಬರುತ್ತಾ ವಿಷಯಾಧಾರಿತವಾಗಿ ಬೆಳೆಯುತ್ತಾ ಹೋಗುವುದರ ಬದಲು ನಾಯಕ ಕೇಂದ್ರಿತವಾಗಿ ಬೆಳೆಯಲು ಆರಂಭವಾಗಿ ಅದು ಬಣ್ಣವನ್ನು ಕಳೆದು ಆಯಸ್ಸನ್ನೂ ಕಳೆಯಿತು. ಅಲ್ಲದೇ ಹೊಸ ತಲೆಮಾರಿನ ಹುಡುಗರನ್ನು ತಲುಪಲು ಹೊಸ ವಿಧಾನಗಳನ್ನು ಮುಟ್ಟಲು ಅವರಿಂದ ಸಾಧ್ಯವಾಗದೇ ಹೋಗಿರುವುದು ಕೂಡಾ ಬಿರುಕು ಉಂಟಾಗಲು ಕಾರಣವಾಗಿರಬಹುದು. ಚಳುವಳಿಗಾರರು ಒಂದಾ ರಸ್ತೆ ಮೇಲಿದ್ದರು ಅಥವಾ ಚರ್ಚೆಗಳಲ್ಲಿ ಅಕಾಡೆಮಿಕ್ ಆಗಿ ಮಾತಾಡುವವರ ಮಟ್ಟದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಉಳಿದು ಹೋದರು. ಇವರ ಮಧ್ಯದ ಬಿರುಕನ್ನು ಮುಚ್ಚುವಂತಹ ಕೊಂಡಿ ಕಳಚಿಕೊಂಡಿತ್ತು. ಈಗಲೂ ಆ ಕೊಂಡಿ ಸಿಕ್ಕಿದೆ ಎಂದು ಧೈರ್ಯವಾಗಿ ಹೇಳಲು ಆಗುವುದಿಲ್ಲ. ಆದರೂ ಸಾಮಾಜಿಕ ಜಾಲತಾಣಗಳ ಮೂಲಕ ಕೂಡಲೇ ಹಿಡಿದುಕೊಳ್ಳಬಹುದು. ಹಿಂದೆ ಭಾಷಣ ಮಾಡಿ ಅಥವಾ ಬರವಣಿಗೆಯ ಮೂಲಕ ಅಷ್ಟೊಂದು ಜನರನ್ನು ತಲುಪಲು ಆಗುತ್ತಿರಲಿಲ್ಲ. ಸೋಶಿಯಲ್ ಮೀಡಿಯಾದ ವೇದಿಕೆಯಲ್ಲಿ ಅವರು ಸಿಗುತ್ತಾರೆ ಮತ್ತು ಅವರನ್ನು ತಲುಪಬಹುದು. ಆದರೂ ಅದಕ್ಕೆ ಹರವು ಮತ್ತು ವಿಸ್ತಾರದ ಮಿತಿಗಳಿವೆ. ಆದರೂ ಒಬ್ಬರನ್ನೊಬ್ಬರು ತಲುಪುವ ಮಾಧ್ಯಮವಾಗಿ ಸೋಶಿಯಲ್ ಮೀಡಿಯಾ ಇದೆ.

**ಹೊಸ ತಲೆಮಾರಿನವರಲ್ಲಿ ಸಿದ್ಧಾಂತಗಳ ಗೊಂದಲವನ್ನೇದರೂ ಕಾಣುವಿರಾ?**

ಗೊಂದಲ ಅಷ್ಟೇ ಅಲ್ಲ ಕಮಿಟ್‌ಮೆಂಟ್ ಕಡಿಮೆಯಿದೆ. ಮಾರುಕಟ್ಟೆ ಸಂಸ್ಕೃತಿಯ ಭರಾಟೆ ಮಧ್ಯೆ ಯುವಕರಿಗೆ ಹಲವಾರು ಆಮಿಷಗಳಿವೆ. ತಕ್ಷಣ ದುಡ್ಡು, ತಕ್ಷಣವೇ ಪ್ರಸಿದ್ಧಿ ಮೊದಲಾದ ಆಮಿಷಗಳು ಕಣ್ಣೆದುರು ಕಾಲ್ಮುರಿದುಕೊಂಡಿವೆ. ಅದರೆಲ್ಲದರಿಂದ ದೂರ ನಿಂತು ರಾಡಿಕಲ್ ಆಗಿ ಸಮಚಿತ್ತದಿಂದ ಎಲ್ಲವನ್ನು ನೋಡಿ ವಿಶ್ಲೇಷಣೆ ಮಾಡಲು ಅಂತರಾಳದ ಸಿದ್ಧತೆಬೇಕು. ಆ ಸಿದ್ಧತೆಗೆ ಮೌನ, ಧ್ಯಾನ ಮತ್ತು

ಸಮಯ ಬೇಕು. ಆದರು ಅದು ಇವತ್ತು ಎಷ್ಟು ಜನರಿಗೆ ಸಿಗುತ್ತದೆ. ನಮ್ಮ ಒಳಗಿನ್ ಮತ್ತು ಹೊರಗಿನ ಬದುಕಿನ ವೇಗದಲ್ಲಿ ಮಗ್ನತೆಗೆ ಅವಕಾಶವಿಲ್ಲದಾಗಿದೆ. ಯಾವುದನ್ನೂ ಆಳಕ್ಕಿಳಿದು ನೋಡುವ ತಾಳ್ಮೆ ಅಥವಾ ಸಮಯ ಇವತ್ತಿನ ಕೊರತೆಯಾಗಿದೆ. ಹಾಗಾಗಿ ಎಲ್ಲೂ ಕಮಿಟ್‌ಮೆಂಟ್ ಇಲ್ಲ. ಆನರು ಬಹಳ ಬೇಗನೆ ಬದಲಾಗುತ್ತಾರೆ. ಜತೆಗೆ ನಮಗೆ ಆದರ್ಶದ ಮಾದರಿಗಳಿಲ್ಲ. ನಮ್ಮ ಆದರ್ಶವಾಗಿರಬೇಕಾಗಿದ್ದ ಜನನಾಯಕರು, ಚಳುವಳಿ ನಾಯಕರು ಮತ್ತು ಧಾರ್ಮಿಕ ನಾಯಕರು ಆಮಿಷಗಳ ದಾರಿ ಹಿಡಿದುಕೊಂಡು ಹೋಗುತ್ತಿರುವಾಗ ಅವರೆದುರು ಯಾವುದೇ ಮಾಡೆಲ್‌ಗಳಿಲ್ಲ. ಬದುಕಿನ ಪ್ರಾಮುಖ್ಯತೆಗನುಗುಣವಾಗಿ ಭ್ರಷ್ಟ ಆದರ್ಶಗಳನ್ನೇ ಪಾಲಿಸುತ್ತಾ ಯಾವ ದಾರಿಯನ್ನಾದರೂ ಹಿಡಿದು ರಾಜಿಯಾಗುತ್ತಾರೆ.

**ನೀವು ಡಾ. ಬಿ.ಆರ್. ಅಂಬೇಡ್ಕರ್ ವಿಚಾರಧಾರೆಗಳನ್ನು ಅನುವಾದಿಸಿದವರು. ಇಂದಿನ ತಲೆಮಾರಿನವರು ಅಂಬೇಡ್ಕರ್ ಅವರನ್ನು ಯಾವ ರೀತಿ ಅರ್ಥ ಮಾಡಿಕೊಂಡಿದ್ದಾರೆ?**

ಅಂಬೇಡ್ಕರ್ ಅವರನ್ನು ಹೊಸ ತಲೆಮಾರು ಅಷ್ಟೇ ಅಲ್ಲ, ನಾವು ಕೂಡಾ ಅರ್ಥ ಮಾಡಿಕೊಳ್ಳುವುದಕ್ಕಾಗಿ ವಿಸ್ತೃತವಾದ ಅಧ್ಯಯನ ಬೇಕು. ಅದಕ್ಕೊಂದು ಮನಃಸ್ಥಿತಿಯೂ ಬೇಕು. ಅಂಬೇಡ್ಕರ್ ಅಂದರೆ ದಲಿತರಿಗೆ ಮೀಸಲಾತಿಯನ್ನು ನೀಡಿದ ವ್ಯಕ್ತಿ ಅಂತ ಒಂದು ಮನಸ್ಥಿತಿ ಇದೆ. ಅದೇ ರೀತಿ ಇನ್ನೊಂದು ಗುಂಪಿನವರು ಅಂಬೇಡ್ಕರ್ ಅಂದರೆ ಇಪ್ಪತ್ತನೇ ಶತಮಾನದಲ್ಲಿ ನಮ್ಮ ದೇಶವು ನೀಡಿದ ಅತ್ಯಂತ ವಿದ್ವಾವಂತ ಮತ್ತು ಹೊಸ ಕಲ್ಪನೆಗಳನ್ನು ನೀಡಿದ ಚಿಂತಕರು ಎನ್ನುತ್ತಾರೆ. ಆದರೆ ನಮಗೆ ಇವತ್ತು ಏನು ಬೇಕು ಎಂದರೆ ಅಂಬೇಡ್ಕರ್‌ನ್ನು ಓದಿ ಅಪ್ಲೈಡ್ ಅಂಬೇಡ್ಕರಿಸಂ ಅಥವಾ ಅನ್ವಯಿಕ ಅಂಬೇಡ್ಕರ್‌ವಾದ ಬೇಕು. ಅಂಬೇಡ್ಕರ್ ಏನು ಹೇಳಿದರೋ ಹಾಗೇ ನಡೆಯಬೇಕು ಎನ್ನುವುದು ಮತ್ತೊಂದು ಮೂಲಭೂತವಾದವಾಗುತ್ತದೆ. ಒಂದು ರಾಜಕೀಯ ಪಕ್ಷ ಅಂಬೇಡ್ಕರ್ ಅವರ ಹೆಸರು ಹೇಳಿಕೊಂಡು ಮಾಡುತ್ತಿರುವುದು ಮೂಲಭೂತವಾದವಾಗಿ ಅಂಬೇಡ್ಕರ್ ಅವರ ನಿಜವಾದ ಅನುಯಾಯಿಗಳನ್ನು ದಿಕ್ಕು ತಪ್ಪಿಸುವ ಕ್ರಿಯೆಯಾಗುತ್ತದೆ. ಅಂಬೇಡ್ಕರ್ ಜಾತಿಯ ಗುರುತಿನಿಂದ ಹೊರಬಂದು ಬ್ರಾಹ್ಮಣ, ಕ್ರೈಸ್ತ, ಮುಸ್ಲಿಂ ಎಲ್ಲರಿಗೂ ಅವರು ಸಿಗಬೇಕು. ಎಲ್ಲರೂ ಅವರನ್ನು ಓದಬೇಕು. ನಾವು ಒಂದು ಬಾಧಿತ ಮನಸ್ಥಿತಿಯಿಂದ ಹೊರಬಂದು ಅಂಬೇಡ್ಕರ್ ಅವರನ್ನು ಓದಿದರೆ ಹೊಸ ಅಂಬೇಡ್ಕರ್ ಗೋಚರವಾಗುತ್ತಾರೆ. ಇವತ್ತಿನ ಅವಶ್ಯಕತೆ ಏನೂ ಅಂದರೆ ಅನ್ವಯಿಕ ಅಂಬೇಡ್ಕರ್ ಎಂದು ನಾನು ತಿಳಿದುಕೊಂಡಿದ್ದೇನೆ.

**ಸಾಮಾಜಿಕ ತಲ್ಲಣಗಳು ರಾಜಕೀಯವಾಗಿ ಹೇಗೆ ಕೆಲಸ ಮಾಡುತ್ತವೆ?**

ಎಲ್ಲವನ್ನು ಮಾರುಕಟ್ಟೆ ಸಂಸ್ಕೃತಿ ಮಾಡಿರುವುದೇ ಸಾಮಾಜಿಕ ಮತ್ತು ರಾಜಕೀಯ ತಲ್ಲಣಗಳಿಗೆ ಕಾರಣವಾಗಿದೆ. ಕೆಲವರಷ್ಟೇ ಕೈಯಲ್ಲಿರುವ ಮಾರುಕಟ್ಟೆ ನಮ್ಮ ಮೌಲ್ಯಗಳನ್ನು ತಿರುವಿ ಹಾಕಿವೆ. ಕಾಲಾನುಕ್ರಮದಲ್ಲಿ ನಮ್ಮ ಮೌಲ್ಯಗಳು ಬದಲಾಗಿವೆ. ತುಂಬಾ ಸರಳವಾಗಿರುವುದು ಒಂದು ಕಾಲದಲ್ಲಿ ಮೌಲ್ಯವಾಗಿತ್ತು. ಆದರೆ ಇವತ್ತು ಆ ಮೌಲ್ಯ ಜನರ ಕಣ್ಣಲ್ಲಿ ಹಾಸ್ಯಾಸ್ಪದವಾಗಿ ಕಾಣುತ್ತದೆ. ಮಾರುಕಟ್ಟೆ ವ್ಯವಸ್ಥೆಯಿಂದಾಗಿ ಬದಲಾಗುವ ಮೌಲ್ಯಗಳು ರಾಜಕೀಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಬದಲಿಸುತ್ತವೆ. ಬದಲಾಗಿರುವ ಸಾಮಾಜಿಕ ಮೌಲ್ಯಗಳು ಮನುಷ್ಯನಿಗೆ ಅಭದ್ರತೆಯ ಹೆದರಿಕೆಯನ್ನು ಹುಟ್ಟಿಸುತ್ತವೆ. ಬಂದಿರುವ ಸಂಬಳದಲ್ಲಿ ಹೇಗೆ ಬದುಕುವುದು ಎನ್ನುವುದು ಮಾರ್ಗವಾಗಿ ಕಾಣದೇ, ಇಷ್ಟೇ ಸಂಬಳ ಬರುತ್ತದೆ ಎಂಬುದು ಕೊರತೆಯಾಗಿ ಕಾಣುತ್ತದೆ. ಹೇಗಾದರೂ ಮಾಡಿ ಹೆಚ್ಚು ಸಂಪಾದಿಸುವುದು ಇವತ್ತಿನ ಮೌಲ್ಯವಾಗಿದೆ. ಸಾಮಾಜಿಕ ಮೌಲ್ಯಗಳು ಬದಲಾದಾಗ ಸಹಜವಾಗಿ ರಾಜಕೀಯ ಮೌಲ್ಯಗಳು ಬದಲಾಗುತ್ತವೆ. ಯಾರು ನಿಮಗೆ ಅಡ್ಡದಾರಿಯನ್ನು ತೋರಿಸುತ್ತಾರೋ ಅವರು ನಿಮ್ಮ ನಾಯಕರಾಗಿ ಬಿಡುತ್ತಾರೆ. ಅದಕ್ಕಾಗಿಯೇ ಇವತ್ತು ಐನೂರು ಕೋಟಿ ರೂಪಾಯಿ ಖರ್ಚು ಮಾಡಿ ಮಗಳ ಮದುವೆ ಮಾಡಿದರೆ ಜನರು ಅದನ್ನು ಸಂಭ್ರಮಿಸುತ್ತಾರೆ. ಖರ್ಚು ಮಾಡುವವನ ಜಿಲ್ಲೆಯಲ್ಲಿ ತಿನ್ನಲಿಕ್ಕಿಲ್ಲದೇ ಅಪೌಷ್ಠಿಕತೆಯಿಂದ ಜನ ಸಾಯುತ್ತಿದ್ದರೂ, ಅಷ್ಟೊಂದು ಬಾಣಂತಿಯರ ಮರಣವಾಗುತ್ತಿದ್ದರೂ ಮಗಳ ಧಾರೆ ಸೀರೆಗೆ ಹದಿನೇಳು ಕೋಟಿ ರೂಪಾಯಿ ಖರ್ಚು ಮಾಡುವವನನ್ನು ಮಾನ ಮರ್ಯಾದೆ ಇಲ್ಲದವನೆಂದು ಏಕವಚನದಲ್ಲಿ ಬಯ್ಯುವಂತಾಗಬೇಕು. ಜನರ ಮನಸ್ಸಲ್ಲಿ ಒಂದು ಹೇಸಿಗೆ ಹುಟ್ಟುವಂತಿರಬೇಕು. ಆದರೆ ಹಾಗಾಗುತ್ತಿಲ್ಲ. ಅದರ ಬಗ್ಗೆ ಜನರು ಮಾತಾಡಲು ಹೆದರುತ್ತಾರೆ. ಹೀಗೆ ಬದಲಾಗುತ್ತಿರುವ ಮೌಲ್ಯಗಳು ರಾಜಕೀಯವಾಗಿ ತುಂಬಾ ಭ್ರಷ್ಟವಾಗಿರುವ ಮಾದರಿಗಳನ್ನು ಬೆಳೆಸುತ್ತವೆ. ಅದು ಎಲ್ಲದಕ್ಕಿಂತ ದೊಡ್ಡ ಬದಲಾವಣೆಯಾಗಿದೆ. ಇದು ನಮ್ಮ ದೇಶದಲ್ಲಷ್ಟೇ ಅಲ್ಲ, ಜಗತ್ತಿನಾದ್ಯಂತ ಈ ತರ ಆಗುತ್ತಿದೆ. ಅಮೇರಿಕಾದವರು ನಾವು ತಿಳಿದಿರುವಷ್ಟು ಬುದ್ಧಿವಂತರಲ್ಲ ಎಂಬುದನ್ನು ಮೊನ್ನೆ ತಮ್ಮ ಚುನಾವಣೆಯಲ್ಲಿ ತೋರಿಸಿಕೊಟ್ಟರು. ಕೇವಲ ಹದಿನೆಂಟು ತಿಂಗಳ ಹಿಂದೆ ರಾಜಕೀಯಕ್ಕೆ ಬಂದ ಒಬ್ಬ ರಿಯಲ್ ಎಸ್ಟೇಟ್ ಮಾಲೀಕ ಅಮೇರಿಕಾದ ಅಧ್ಯಕ್ಷನಾಗುತ್ತಾನೆ ಎಂದಾದರೆ ಅವರು ನಮಗಿಂತ ಭಿನ್ನರಲ್ಲ ಎಂದು ತಿಳಿಸುತ್ತದೆ. ಹೀಗಿರುವಾಗ ನನಗನ್ನಿಸುವುದು ಜನಚಳುವಳಿಯೇ ಪರ್ಯಾಯ ಎನ್ನುವುದು. ಆದರೆ ಅದು ಪೀಠಸ್ಥನಾಗದೇ, ಅಧಿಕಾರಸ್ಥನಾಗದೇ ಉಳಿದುಕೊಳ್ಳಬೇಕು. ನಮ್ಮಲ್ಲಿ ಬೇರೆ ಬೇರೆ ಸಿದ್ಧಾಂತಗಳಲ್ಲಿ ಹಂಚಿಹೋಗಿರುವ ಇಂತಹ ಪ್ರಭಾವಿಶಕ್ತಿಗಳು ಒಂದು ಸೇರಿ ಜನಪರ್ಯಾಯ ಶಕ್ತಿಯಾಗಿ ರೂಪುಗೊಳ್ಳಬೇಕು ಎಂದು ನನಗನಿಸುತ್ತದೆ. ಅ



# ಜೆ.ಎನ್.ಯು. ಕನ್ನಡ ಭಾಷಾ ಪೀಠದಲ್ಲಿ ತಾರಿಣಿ ಶುಭದಾಯಿನಿ ಅವರಿಂದ ಮಹಿಳಾ ಆತ್ಮಕತೆಗಳ ಕುರಿತು ವಿಶೇಷ ಉಪನ್ಯಾಸ



ಕರ್ನಾಟಕ ಸಾಹಿತ್ಯ ಅಕಾಡೆಮಿಯು ನವದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಭಾಷಾ ಪೀಠದಲ್ಲಿ ಬರಹಗಾರ್ತಿ ತಾರಿಣಿ ಶುಭದಾಯಿನಿ ಅವರಿಂದ ಕನ್ನಡದ ಮಹಿಳಾ ಆತ್ಮಕತೆಗಳ ಕುರಿತು ವಿಶೇಷ ಉಪನ್ಯಾಸವೊಂದನ್ನು ಏರ್ಪಡಿಸಿತ್ತು. ನವಂಬರ 17, 2016 ರಂದು ವಿಶ್ವವಿದ್ಯಾಲಯದ ಭಾರತೀಯ ಭಾಷೆಗಳ ಕೇಂದ್ರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ, ಹಿಂದಿ, ಉರ್ದು, ತಮಿಳು, ಪಂಜಾಬಿ ಭಾಷೆಗಳಲ್ಲಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಕೂಡಾ ಭಾಗವಹಿಸಿದ್ದರು.

ಕನ್ನಡ ಮಹಿಳಾ ಆತ್ಮಕತೆಗಳ ಕುರಿತು ತುಂಬ ಕ್ರಮಬದ್ಧವಾದ ಮತ್ತು ಪ್ರಬುದ್ಧವಾದ ಉಪನ್ಯಾಸ ನೀಡಿದ ತಾರಿಣಿ ಅವರು, ತಮ್ಮ ಉಪನ್ಯಾಸದ ಆರಂಭದಲ್ಲಿ ಮಹಿಳಾ ಆತ್ಮ ಚರಿತ್ರೆಗಳ ಮುಖ್ಯಗುಣಗಳನ್ನು ವಿವರಿಸಿ ಮುಂದೆ ಕನ್ನಡದಲ್ಲಿ ಆರಂಭಿಕ ಹಂತದಲ್ಲಿ ಪ್ರಕಟವಾದ ಆತ್ಮ ಚರಿತ್ರೆಗಳನ್ನು ವಿವರಿಸಿದರು. ತಿರುಮಲಾಂಬ, ಜಾನಕಮ್ಮ, ಕಲ್ಯಾಣಮ್ಮ, ಸಾವಿತ್ರಮ್ಮ ಮೊದಲಾದವರ ಬಗ್ಗೆ ಮಾಹಿತಿ ನೀಡಿದ ತರುವಾಯ ಅವರು ಕನ್ನಡದಲ್ಲಿ ಪ್ರಕಟವಾದ ನಟಿಯರ ಆತ್ಮ ಚರಿತ್ರೆಗಳು, ಲೇಖಕಿಯರ ಆತ್ಮಚರಿತ್ರೆಗಳು, ಗೃಹಿಣಿಯರ ಆತ್ಮ ಚರಿತ್ರೆಗಳು, ಮತ್ತು ಇತರ ಉದ್ಯೋಗಸ್ಥ ಮಹಿಳೆಯರ ಆತ್ಮ ಚರಿತ್ರೆಗಳನ್ನು ಪರಿಚಯಿಸಿ, ಅವುಗಳ ಗುಣ ಲಕ್ಷಣಗಳನ್ನು ವಿವರಿಸಿದರು. ಮುಖ್ಯವಾಗಿ ಗಂಡ, ಮಗ ಮತ್ತು ತಂದೆಯ ಮೂಲಕವೇ ಪ್ರಕಟವಾಗುವ ಮಹಿಳೆಯ ಆತ್ಮ ಕಥನಗಳ ಗುಣಗಳನ್ನು ಮಾರ್ಮಿಕವಾಗಿ ಪರಿಶೀಲಿಸಿದ ಅವರು ಮುಂದೆ ವಾಸಂತಿ ಪಡುಕೋಣೆ, ಶಾರದಾ ಗೋಕಾಕ, ರಾಜೇಶ್ವರಿ ತೇಜಸ್ವಿ, ಇಂದಿರಾ ಲಂಕೇಶ್, ಸಾರಾ ಅಬೂಬಕರ್, ಅನುಪಮಾ ನಿರಂಜನ, ಪ್ರತಿಭಾ ನಂದ ಕುಮಾರ್, ದು.ಸರಸ್ವತಿ, ಶೈಲಜಾ ನಾಗರಕಟ್ಟ, ಸಿರಿಯಜ್ಜಿ, ಬುರ್ರಕತಾ ವೀರಮ್ಮ, ಗಂಗೂ ಬಾಯಿ ಹಾನಗಲ್, ಜಾಜಿ ತಿಮ್ಮಯ್ಯ, ಯಶವಂತಿ ಸುವರ್ಣ, ಉಮಾಶ್ರೀ, ಪ್ರೇಮ ಕಾರಂತ್, ಬಿ ಎಂ ರೋಹಿಣಿ ಮೊದಲಾದವರ ಆತ್ಮ ಕತೆಗಳ ವೈಶಿಷ್ಟ್ಯಗಳನ್ನು ಸೋದಾಹರಣವಾಗಿ ವಿವರಿಸಿದರು. ಈ ಉಪನ್ಯಾಸಕ್ಕೆ ಪೂರಕವಾಗಿ ಶ್ರೀಮತಿ ತಾರಿಣಿ ಅವರು ಕನ್ನಡಕ್ಕೆ ಅನುವಾದವಾಗಿ ಬಂದ ಮಹಿಳಾ ಆತ್ಮಕತೆಗಳ (ಗೋದಾವರಿ ಪುರುಲೇಕರ್, ವಿಮಲಾ ರಣಧಿವೆ, ಸುನಿತಾ ದೇಶಪಾಂಡೆ, ನಳಿನಿ ಜಮೀಲಾ, ಬೇಬಿ ಹಲ್ದಾರ್ ಮೊದಲಾದವರು) ಬಗೆಯೂ ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿಂದಿಯ ಪ್ರಸಿದ್ಧ ವಿಮರ್ಶಕಿ ಪ್ರೊ. ಗರಿಮಾ ಶ್ರೀವಾಸ್ತವ ಅವರು, ತಾರಿಣಿಯವರ ಉಪನ್ಯಾಸಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಈ ಆತ್ಮಕತೆಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಚೌಕಟ್ಟಿನಲ್ಲಿರಿಸುವ ಮೌಲ್ಯಮಾಪನಮಾಡುವ ಅಗತ್ಯವಿದೆ ಎಂದು ಹೇಳಿದರಲ್ಲದೆ, ಹಿಂದಿಗೆ ಹೋಲಿಸಿದರೆ, ಕನ್ನಡದ ಮಹಿಳಾ ಆತ್ಮಕತೆಗಳು ಹೆಚ್ಚು ಮೌಲಿಕವಾಗಿರುವಂತಿದೆ ಎಂದು ಹೇಳಿದರು.


ಕಾರ್ಯಕ್ರಮದ ಆರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿದ ಭಾಷಾ ಕೇಂದ್ರದ ಅಧ್ಯಕ್ಷ ಹಾಗೂ ಪ್ರಮುಖ ಉರ್ದು ಲೇಖಕರಾದ ಪ್ರೊ. ಅನ್ವರ್ ಪಾಶಾ ಅವರು ಕನ್ನಡ ಭಾಷಾ ಪೀಠವು ಕಾರ್ಯ ನಿರ್ವಹಿಸಲು ಆರಂಭಿಸಿದ ಆನಂತರ ಹೇಗೆ ಕನ್ನಡದ ಬಗೆಗಣ ಅರಿವು ವಿಸ್ತರಿಸುತ್ತಿದೆ ಎಂಬುದನ್ನು ಹೇಳಿ, ಮಹಿಳಾ ಆತ್ಮ ಕತೆಗಳ ಕುರಿತಾದ ಪ್ರಸ್ತುತ ಉಪನ್ಯಾಸವು ಪುರುಷರ ಮಿತಿಗಳನ್ನೂ ಮಹಿಳೆಯರ ಶಕ್ತಿಗಳನ್ನೂ ಜೊತೆ ಜೊತೆಯಾಗಿ ಪ್ರಸ್ತುತ ಪಡಿಸಬಲ್ಲುದು ' ಎಂಬುದನ್ನು ಉರ್ದು ಮಹಿಳಾ ಆತ್ಮಕತೆಗಳ ಉದಾಹರಣೆಯೊಂದಿಗೆ ವಿವರಿಸಿ ಎಲ್ಲರನ್ನೂ ಸ್ವಾಗತಿಸಿದರು.

ಉಪನ್ಯಾಸಕಿ ಶ್ರೀಮತಿ ತಾರಿಣಿ ಶುಭದಾಯಿನಿ ಅವರನ್ನು ಸಭೆಗೆ ಪರಿಚಯಿಸಿದ, ಕನ್ನಡ ಭಾಷಾ ಪೀಠದ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಅವರು 'ಕನ್ನಡ ಪೀಠದಲ್ಲಿ ಮುಂದಿನ ವರ್ಷದಿಂದ ಎಂ.ಫಿಲ್ ಮತ್ತು ಪಿಎಚ್.ಡಿ ಅಧ್ಯಯನ ಆರಂಭವಾಗಲಿದ್ದು ಅದಕ್ಕೆ ಪೂರಕವಾಗಿ ಸುಮಾರು 10000 ಪುಸ್ತಕಗಳಿರುವ ಗ್ರಂಥಾಲಯವನ್ನು ಈಗಾಗಲೇ ಸಜ್ಜುಗೊಳಿಸಲಾಗಿದೆ, ಜೆ ಎನ್ ಯು ವಿನ ವಿವಿಧ ವಿಭಾಗಗಳಲ್ಲಿ ಓದುತ್ತಿರುವ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಕೆಲಸವನ್ನು ಅನೌಪಚಾರಿಕವಾಗಿ ಆರಂಭಿಸಲಾಗಿದೆ, ಕನ್ನಡದ ಮುಖ್ಯ ಲೇಖಕರನ್ನು ಅಖಿಲಭಾರತ ಮಟ್ಟದ ಇತರ ಲೇಖಕರೊಂದಿಗೆ ಇರಿಸಿ ತೌಲನಿಕವಾಗಿ ಚರ್ಚಿಸುವ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿದೆ, ಕನ್ನಡದ ಮಹತ್ವದ ಕೃತಿ ಕವಿರಾಜ ಮಾರ್ಗವನ್ನು ಇಂಗ್ಲಿಷಿನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರಲ್ಲದೆ ಕರ್ನಾಟಕ ಸಂಸ್ಕೃತಿಯ ವಿವಿಧ ಮುಖಗಳನ್ನು ಜೆ ಎನ್ ಯು ವಿಗೆ ಪರಿಚಯಿಸುವ ಯೋಜನೆಯ ಭಾಗವಾಗಿ ಈ ವಿಶೇಷ ಉಪನ್ಯಾಸ ನಡೆಯುತ್ತಿದೆ' ಎಂದರಲ್ಲದೆ ಈ ಕಾರ್ಯಕ್ರಮ ನಡೆಸಲು ಉದಾರ ಅನುದಾನ ನೀಡಿದ ಕರ್ನಾಟಕ ಸಾಹಿತ್ಯ ಅಕಡೆಮಿಗೆ ತಮ್ಮ ಕೃತಜ್ಞತೆಗಳನ್ನು ತಿಳಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಹಿಂದಿ ವಿಭಾಗದ ಸಂಶೋಧನಾ ವಿದ್ಯಾರ್ಥಿ ಪ್ರದೀಪ್ ಕುಮಾರ್ ಅವರು ವಂದಿಸಿದರು. ಕುಮಾರಿ ಅಂಜಲಿ ಕಾರ್ಯಕ್ರಮ ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ಹಾಜರಿದ್ದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀನಿವಾಸ ಪಿಚ್ಚಳ್ಳಿ ಅವರು ಜನಪದ ಹಾಡೊಂದನ್ನು ಹಾಡಿ ಪ್ರೇಕ್ಷಕರ ಮನಗೆದ್ದರು. ಅ

**ಅಭಿಮತ ವರದಿ**

## ಶ್ರದ್ಧಾಂಜಲಿ



ಕನ್ನಡಿಗರಾದ ನವದೆಹಲಿಯ ಹಿರಿಯ ಪತ್ರಕರ್ತ, ರಾಜ್ಯಸಭಾ ಟಿವಿಯ ನಿರೂಪಕರಾಗಿದ್ದ ಶ್ರೀ ಗಿರೀಶ್ ನಿಕಮ್ ಅವರು ಹೃದಯಾಘಾತದಿಂದ ದೆಹಲಿಯಲ್ಲಿ ನವಂಬರ್ 7ರಂದು ನಿಧನರಾದರು. ತಮ್ಮ ವೃತ್ತಿ ಜೀವನವನ್ನು ಮೈಸೂರಿನ 'ಸ್ಟಾರ್ ಆಫ್ ಮೈಸೂರು' ಪತ್ರಿಕೆಯಿಂದ ಆರಂಭಿಸಿದ ಅವರು ಬೆಂಗಳೂರು ಮತ್ತು ನವದೆಹಲಿಯಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಹಳ ವರ್ಷ ಕೆಲಸ ಮಾಡಿದ್ದರು. ಡೆಕ್ಕನ್ ಕ್ರಾನಿಕಲ್, ನ್ಯೂಸ್ ಟುಡೇಗಳಲ್ಲೂ ಕೆಲಸ ಮಾಡಿದ್ದಾರೆ. ಅ





# ಜೆ.ಎನ್.ಯು. ಕನ್ನಡ ಭಾಷಾ ಪೀಠದಲ್ಲಿ ಜನಪದ ಕಲಾವಿದರ ಸ್ಥಿತಿ ಗತಿ ಕುರಿತು ವಿಚಾರ ಸಂಕಿರಣ ಮತ್ತು ಕಲಾ ಪ್ರದರ್ಶನ

ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಧಾರವಾಡದ ಪ್ರೊ. ತೇಜಸ್ವಿ ಕಟ್ಟೀಮನಿ ಟ್ರಸ್ಟ್ ಮತ್ತು ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದಿಂದ ಇದೇ ನವಂಬರ 18ರಂದು ವಿಶ್ವವಿದ್ಯಾಲಯದಲ್ಲಿ ಸಮಕಾಲೀನ ಭಾರತದಲ್ಲಿ ದಲಿತ, ಆದಿವಾಸಿ ಮತ್ತು ಜನಪದ ಕಲಾವಿದರ ಸ್ಥಿತಿ ಗತಿ ಕುರಿತು ಒಂದು ದಿನದ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಜೊತೆಗೆ ಅದೇ ದಿನ ಸಾಯಂಕಾಲ ಕರ್ನಾಟಕದ 125 ಕಲಾವಿದರಿಂದ ಕಲಾಪ್ರದರ್ಶನವನ್ನೂ ಏರ್ಪಡಿಸಿತ್ತು.

ದಿನಪೂರ್ತಿ ನಡೆದ ವಿಚಾರ ಸಂಕಿರಣವು ಜನಪದ ಕಲೆಗಳನ್ನು ಉದಾರವಾದೀ ನೆಲೆಯಿಂದ ನೋಡುವ ಸಾಮಾನ್ಯ ಪರಿಕ್ರಮಗಳನ್ನು ಬಿಟ್ಟು, ಆ ಕಲೆಗಳನ್ನು ತಲೆಮಾರಿನಂದ ತಲೆಮಾರಿಗೆ ದಾಟಿಸಿಕೊಂಡು ಬರುತ್ತಿರುವ ಕಲಾವಿದರ ಜೀವನದ ಕುರಿತು ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಯಿತು.

ಈ ಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪ್ರಖ್ಯಾತ ಉರ್ದು ಲೇಖಕ ಪ್ರೊ. ಅನ್ವರ್ ಪಾಶಾ ಆಲಂ ಅವರು ಮಾತಾಡಿ, 'ಜಾಗತೀಕರಣದಿಂದ ತೀವ್ರವಾದ ಬದಲಾವಣೆಗೆ ಒಳಗಾಗುತ್ತಿರುವ ಪ್ರಸಕ್ತ ಭಾರತದಲ್ಲಿ ಜನಪದ ಕಲಾವಿದರನ್ನು ಹೊಸ ಮಾನದಂಡಗಳಿಂದ ನೋಡುವ ಅಗತ್ಯವಿದೆ, ಈ ಅಗತ್ಯವನ್ನು ಕನ್ನಡ ಭಾಷಾ ಪೀಠವು ಮಾಡುತ್ತಿರುವುದು ಅಭಿನಂದನೀಯ ವಿಚಾರವಾಗಿದೆ' ಎಂದರು.

ಈ ಸಂದರ್ಭದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ, ಅಮರಕಂಟಕದ ಇಂದಿರಾ ಗಾಂಧಿ ಬುಡಕಟ್ಟು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವರೂ ಕನ್ನಡದ ಪ್ರಸಿದ್ಧ ಕತೆಗಾರರೂ ಆಗಿರುವ ಡಾ. ಬಸವರಾಜ ಡೋಣೂರು ಅವರು ಮಾತಾಡಿ ತೇಜಸ್ವಿ ಕಟ್ಟೀಮನಿ ಟ್ರಸ್ಟ್‌ನ ಉದ್ದೇಶಗಳನ್ನು ವಿವರಿಸಿ, ಮಧ್ಯಪ್ರದೇಶದ ಗೋಂಡ್ ಬುಡಕಟ್ಟು ಇದಿರಿಸುತ್ತಿರುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು. ಕನ್ನಡ ಭಾಷಾ ಪೀಠದ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ್ ಅವರು ಜನಪದ ಹಾಡೊಂದನ್ನು ಹಾಡಿ ಅರ್ಥಪೂರ್ಣವಾಗಿ ಸಂಕಿರಣವನ್ನು ಉದ್ಘಾಟಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಶಿಖರೋಪನ್ಯಾಸ ನೀಡಿದ ಜರ್ಮನ್ ಭಾಷಾ ಪ್ರಾಧ್ಯಾಪಕಿ ಪ್ರೊ. ಸಾಧನಾ ನೈಥಾನಿ ಅವರು ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ರಾಜಸ್ಥಾನಗಳ ಜನಪದ ಕಲಾವಿದರು ಇದಿರುಸುತ್ತಿರುವ ಆಧುನಿಕ ಸಮಸ್ಯೆಗಳ ಕುರಿತು ವಿವರವಾದ ವಿಶ್ಲೇಷಣೆ ನಡೆಸಿದರು.

ಮುಂದೆ ಸಂಕಿರಣದಲ್ಲಿ ಪ್ರಬಂಧ ಮಂಡಿಸಿದ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ನಂದಿನಿ ಸಾಹೂ ಅವರು ಒಡಿಶಾದ ಕಲಾವಿದರ ಕುರಿತೂ, ದಲಿತ ಕಾರ್ಯಕರ್ತ ಹಾಗೂ ಜೆ ಎನ್ ಯು ಪ್ರಾಧ್ಯಾಪಕ ಡಾ. ಗಂಗಾ ಸಹಾಯ್ ಮೀನಾ ಅವರು ರಾಜಸ್ತಾನದ ಕಲಾವಿದರ ಕುರಿತೂ, ಇಂದಿರಾಗಾಂಧಿ ರಾಷ್ಟ್ರೀಯ ಸಂಪನ್ಮೂಲ ಕೇಂದ್ರದ ಜನಪದ ಸಂಪದದ ನಿರ್ದೇಶಕಿ ಪ್ರೊ. ಮೋಲಿ ಕೌಶಲ್ ಅವರು ಪಂಜಾಬಿನ ದಡಿ ಕಲಾವಿದರ ಕುರಿತೂ, ದೆಹಲಿಯ ಗವರ್ನರ್ ನಜೀಬ್ ಜಂಗ್ ಅವರ ಸಾಂಸ್ಕೃತಿಕ ಸಲಹಾಗಾರ್ತಿ ಪ್ರೊ. ಸಿಮಿ ಮಲ್ಹೋತ್ರ ಅವರು ಚಮಾರ್ ಕಲಾವಿದರೂ ಬಗೆಗಯೂ, ತುಮಕೂರಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ನಟರಾಜ್ ಬೂದಾಳ್ ಅವರು ಕನ್ನಡದ ಜನಪದ ಕಲಾವಿದರ ಬಗೆಗೆಯೂ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿದರು. ಸುಮಾರು 100 ಜನ ವಿದ್ವಾಂಸರೂ ಕಲಾವಿದರೂ ಭಾಗವಹಿಸಿದ್ದ ಈ ಸಂಕಿರಣದಲ್ಲಿ ಕಲಾವಿದರ ಕುರಿತಾದ ವಿವಿಧ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಯಿತು.

ಸಂಕಿರಣದ ಆನಂತರ ವಿಶ್ವವಿದ್ಯಾಲಯದ ಮುಖ್ಯ ರಸ್ತೆಗಳಲ್ಲಿ ಕರ್ನಾಟಕದ ಜನಪದ ಕಲಾವಿದರು ಆಕರ್ಷಕ ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಜೆ ಎನ್ ಯು ವಿನ ವಿವಿಧ ವಿಭಾಗಗಳ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ, ಅಧ್ಯಾಪಕರೂ ಸೇರಿದ್ದರು.

ಸಾಯಂಕಾಲ ವಿಶ್ವವಿದ್ಯಾಲಯದ ಬಹಿರಂಗ ಸಭಾಂಗಣದಲ್ಲಿ ಕರ್ನಾಟಕದ ಜನಪದ ಕಲಾವಿದರ ಆಕರ್ಷಕ ಪ್ರದರ್ಶನ ನಡೆಯಿತು. ಈ ಕಲಾಪ್ರದರ್ಶನವನ್ನು ಉದ್ಘಾಟಿಸಿದ ಅಮರಕಂಟಕದ ಇಂದಿರಾಗಾಂಧಿ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತೇಜಸ್ವಿ ಕಟ್ಟೀಮನಿಯವರು ಕರ್ನಾಟಕದ ಕಲೆಗಳ ವೈಶಿಷ್ಟ್ಯಗಳನ್ನು ಹಿಂದಿಯಲ್ಲಿ ಸೊಗಸಾಗಿ ವಿವರಿಸಿದರು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸುಪ್ರಿಂ ಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ನಾಗಮೋಹನ್ ದಾಸ್ ಅವರು ಮಾತಾಡಿ, ಜನಪದ ಕಲೆಗಳು ಹೇಗೆ ಜನಪರವೂ ಆಗಿರುತವೆ ಎಂದು ವಿವರಿಸಿ, ಜನಪರ ಹೋರಾಟದಲ್ಲಿ ಸದಾ ಮುಂದಿರುವ ಜೆ ಎನ್ ಯು ವನ್ನು ಅಭಿನಂದಿಸಿದರಲ್ಲದೆ, ದೊಡ್ಡ ಸಂಖ್ಯೆಯಲ್ಲಿ ಸೇರಿದ ವಿದ್ಯಾರ್ಥಿ ಮತ್ತು ಅಧ್ಯಾಪಕ ಸಮೂಹಕ್ಕೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು. ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಪಿಚ್ಚಳ್ಳಿ ಅವರು ತತ್ವಪದವೊಂದನ್ನು ಹಾಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾದರು.

ಕಲಾಪ್ರದರ್ಶನದಲ್ಲಿ ಕರ್ನಾಟಕದ ಪ್ರಸಿದ್ಧ ಕಲೆಗಳಾದ ಡೊಳ್ಳು, ತಮಟೆ, ಕಂಸಾಳೆ, ರಿವಾಯತ್, ದುರುಗಿ–ಮುರುಗಿ, ಹೆಜ್ಜೆ, ಪೂಜೆ ಮೊದಲಾದ ಕುಣಿತಗಳನ್ನು ಪ್ರದರ್ಶಿಸಲಾಯಿತು. ಜೆಎನ್‌ಯುವಿನ ಸಾವಿರಾರು ವಿದ್ಯಾರ್ಥಿಗಳು ಈ ಕಲೆಗಳ ಕುಣಿತದ ಶೈಲಿ, ಸಂಗೀತ, ಲಯ ಮೊದಲಾದುವುಗಳನ್ನು ಕಂಡು ಸಂಭ್ರಮಿಸಿದರು. ಪ್ರದರ್ಶನದ ಕೊನೆಯಲ್ಲಿ ವಿದ್ಯಾರ್ಥಿನಿಯೋರ್ವರು ವೇದಿಕೆಯ ಮೇಲೇರಿ ಕಲಾವಿದರನ್ನು ಅಭಿನಂದಿಸಿ ಮಾತಾಡಿದ್ದು ಪ್ರದರ್ಶನದ ಯಶಸ್ಸಿಗೆ ಹಿಡಿದ ಕನ್ನಡಿಯಾಗಿತ್ತು.

***ಅಭಿಮತ ವರದಿ***

## ಕರ್ನಾಟಕದ ತಮಟೆಗೆ ಹುಚ್ಚೆದ್ದು ಕುಣಿದ ಎನ್ ಎಸ್ ಡಿ

ಕರ್ನಾಟಕ ಜಾನಪದ ಅಕಾಡೆಮಿಯು ದೆಹಲಿಗೆ ಕರೆತಂದ 125 ಕಲಾವಿದರು ದೆಹಲಿಯ ಪ್ರಖ್ಯಾತ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಪ್ರಸಿದ್ಧ ಕಲೆಗಳಾದ ಡೊಳ್ಳು, ತಮಟೆ, ಕಂಸಾಳೆ, ರಿವಾಯತ್, ದುರುಗಿ–ಮುರುಗಿ, ಹೆಜ್ಜೆ, ಪೂಜೆ ಮೊದಲಾದ ಕುಣಿತಗಳನ್ನು ಪ್ರದರ್ಶಿಸಿದರು. ಇದನ್ನು ನೋಡಲು ಎನ್ ಎಸ್ ಡಿಯ ನೂರಾರು ವಿದ್ಯಾರ್ಥಿಗಳು ಮಾತ್ರವಲ್ಲದೆ, ಈ ಸಂದರ್ಭದಲ್ಲಿ ಅಲ್ಲಿ ಸೇರಿದ್ದ ಅನೇಕ ಶಾಲೆಗಳ ವಿದ್ಯಾರ್ಥಿಗಳೂ ಬಂದಿದ್ದರು. ಎನ್ ಎಸ್ ಡಿ ಯ ಕನ್ನಡದ ಮಕ್ಕಳು ಕರ್ನಾಟಕಕ್ಕೆ ಜಯವಾಗಲಿ ಎಂದು ಕೂಗುತ್ತಿದ್ದಂತೆ, ಕರ್ನಾಟಕದ ಜನಪದ ಕಲೆಗಳ ಕುಣಿತದ ಶೈಲಿ, ಸಂಗೀತ, ಲಯ ಮೊದಲಾದುವುಗಳನ್ನು ಕಂಡು ಸಂಭ್ರಮಿಸಿದ ಇತರ ವಿದ್ಯಾರ್ಥಿಗಳೂ ಕೊನೆಯಲ್ಲಿ ತಮಟೆ ಸದ್ದಿಗೆ ಹುಚ್ಚೆದ್ದು ಕುಣಿದರು. ನಾಟಕ ಶಾಲೆಯ ನಿರ್ದೇಶಕರಾದ ಶ್ರೀ ವಾಮನ ಕೆಂಡ್ರೆ ಅವರು ಕಲಾವಿದರನ್ನು ಅಭಿನಂದಿಸಿದರು. ಡಾ. ಪುರುಷೋತ್ತಮ ಬಿಳಿಮಲೆ ಅವರು ಪ್ರತಿಯೊಂದು ಕಲೆಯ ಬಗೆಗ ಸಂಕ್ಷಿಪ್ತ ವಿವರಣೆ ನೀಡಿದರು. ಅಕಾಡೆಮಿ ಅಧ್ಯಕ್ಷ ಶ್ರೀ ಪಿಚ್ಚಳ್ಳಿ ಶ್ರೀನಿವಾಸ್ ಕೃತಜ್ಞತೆ ಸಲ್ಲಿಸಿದರು.



# ತುಳು ಪಾಡ್ದನಗಳ ಹೊಸ ಅಧ್ಯಯನ ವಿಧಾನಗಳ ಕುರಿತು ವಿಚಾರ ಸಂಕಿರಣ

ತುಳು ಭಾಷೆಯಲ್ಲಿರುವ ಅಪಾರವಾದ ಅಪ್ರಕಟಿತ ಹಸ್ತಪ್ರತಿಗಳನ್ನು ಸಂರಕ್ಷಿಸಿ ಅದು ಸಂಶೋಧಕರಿಗೆ ಲಭ್ಯವಾಗುವಂತೆ ಮಾಡಲು ಒಂದು ಸಂಗ್ರಹಾಲಯವನ್ನು ನವದೆಹಲಿಯಲ್ಲಿ ಮಾಡಬಹುದು ಎಂದು ವಿದ್ವಾಂಸ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಉಪಕುಲಪತಿ ಡಾ. ಬಿ.ಎ. ವಿವೇಕ ರೈ ಅವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘವು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು ಹಾಗೂ ದೆಹಲಿ ತುಳು ಸಿರಿಯ ಸಹಯೋಗದೊಂದಿಗೆ ಸಂಘದ ಸಭಾಂಗಣದಲ್ಲಿ ಇದೇ ನವಂಬರ್ 27ರಂದು ನಡೆದ ತುಳು ಪಾಡ್ದನಗಳ ಹೊಸ ಅಧ್ಯಯನ ವಿಧಾನಗಳು ಎಂಬ ಒಂದು ದಿನದ ವಿಚಾರ ಸಂಕಿರಣದ ಸಮಾರೋಪ ಭಾಷಣ ಮಾಡುತ್ತಿದ್ದರು. ತುಳು ಭಾಷೆಯಲ್ಲಿ ಬಹಳಷ್ಟು ಅಪ್ರಕಟಿತ ಹಸ್ತಪ್ರತಿಗಳು ಇವೆ. ಆದರೆ ಅದು ಒಂದೆಡೆಯಲ್ಲಿ ಲಭ್ಯವಾಗುತ್ತಿಲ್ಲ ಎಂದು ಅವರು ತಿಳಿಸಿದರು. ತುಳು ಭಾಷೆಯ ಸಾಹಿತ್ಯವನ್ನು ಭಾರತದ ಇತರ ಭಾಷೆಗಳಿಗೆ ಅನುವಾದ ಮಾಡಿ ಅದು ಇಲ್ಲಿಯ ಜನರಿಗೆ ತಲುಪುವಂತಹ ಕೆಲಸವೂ ಆಗಬೇಕು ಎಂದು ಅವರು ಹೇಳಿದರು. ರಂಗಭೂಮಿ ಮತ್ತು ಸಿನಿಮಾರಂಗಗಳಲ್ಲಿರುವ ತುಳು ಭಾಷೆಯ ನಿರ್ದೇಶಕರು ಮತ್ತು ತಂತ್ರಜ್ಞರು ಪಾಡ್ದನ ಮತ್ತು ಭೂತಾರಾಧನೆಗಳನ್ನು ರಂಗಭೂಮಿ ಮತ್ತು ಸಿನಿಮಾದ ಪರಿಭಾಷೆಗಳನ್ನು ಉಪಯೋಗಿಸಿ ಇತರ ಭಾಷೆಗಳಿಗೆ ವಿಸ್ತರಿಸಬೇಕು ಎಂದು ಡಾ. ವಿವೇಕ ರೈ ಅವರು ವಿವರಿಸಿದರು.

ಕೇಂದ್ರ ಸರಕಾರದ ಕೃಷಿ ಸಚಿವಾಲಯದಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಗಿರುವ ಡಾ. ಪ್ರಸನ್ನ ವಿ. ಸಾಲ್ಯಾನ್ ಅವರು ವಿಚಾರ ಸಂಕಿರಣದ ಉದ್ಘಾಟನಾ ಭಾಷಣ ಮಾಡುತ್ತಾ ಯಾವುದೇ ಸಂಸ್ಕೃತಿಯ ಸೊಗಸು ಇರುವುದು ಅದರ ಜಾನಪದದಲ್ಲಿ ಎಂದರು. ಭಾರತದಲ್ಲಿ ವೈವಿಧ್ಯಮಯವಾದ ಜಾನಪದದ ಹಿನ್ನಲೆಯಿದೆ ಎಂದರು. ತುಳುನಾಡಿನ ಪಾಡ್ದನಗಳು ತುಳು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ನಮ್ಮ ಹಿರಿಯರ ಸಾಧನೆಯಿದೆ. ಪಾಡ್ದನಗಳನ್ನು ವಿಶ್ವವಿದ್ಯಾಲಯಗಳಲ್ಲಿ ಲಿಖಿತರೂಪದಲ್ಲಿ ಕಾಣಬಹುದು. ಅದರಲ್ಲಿ ನಮ್ಮ ಹಲವಾರು ವಿದ್ವಾಂಸರು ದುಡಿದಿದ್ದಾರೆ. ತುಳುನಾಡಿನ ಸಂಸ್ಕೃತಿಯಲ್ಲಿ ಪಾಡ್ದನಗಳು ಮಹಾನ್ ಗ್ರಂಥಗಳಾಗಿವೆ. ಪಾಡ್ದನಗಳು ಹೇಗೆ ಹುಟ್ಟಿಕೊಂಡವು, ಅದರಲ್ಲಿರುವ ಸಾಮಾಜಿಕ ಸಂದೇಶಗಳೇನು, ಅಲ್ಲಿರುವ ಬಂಡಾಯ ಯಾವ ತರದ್ದು ಇವನ್ನೆಲ್ಲಾ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ತುಳುನಾಡಿನ ಜನಜೀವನ ಸಮಾಜದಲ್ಲಿ ಅಸಮಾನತೆ, ಯಾವ ತರದ ಸಾಮರಸ್ಯ ಇವನ್ನೆಲ್ಲಾ ಅರಿತುಕೊಂಡರೆ ವಿಚಾರಸಂಕಿರಣ ಯಶಸ್ವಿಯಾದಂತೆ ಎಂದರು. ತುಳು ಭಾಷೆಯನ್ನು ನಾವು ಉಳಿಸುವ, ಬೆಳೆಸುವ ಮತ್ತು ಇನ್ನೂ ಶ್ರೀಮಂತಗೊಳಿಸುವ ಕುರಿತು ಚರ್ಚೆಯನ್ನು ವಿಚಾರಗೋಷ್ಠಿಯ ಮೂಲಕ ಮಾಡಬೇಕು ಎಂದು ಅವರು ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಎಂ. ಜಾನಕಿ ಬ್ರಹ್ಮಾವರ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ತುಳುಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇಧಕ್ಕೆ ಸೇರಿಸುವ ಕೆಲಸ ಮತ್ತು ಪಾಡ್ದನಗಳ ದಾಖಲೀಕರಣ ಮುಂತಾದ ಕೆಲಸಗಳು ಆಗಬೇಕಾಗಿವೆ ಎಂದು ಅವರು ತಿಳಿಸಿದರು.

ವಿದ್ವಾಂಸ ಮತ್ತು ದೆಹಲಿ ತುಳುಸಿರಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತಾಡುತ್ತಾ ಸಂವಿಧಾನದ ಎಂಟನೆ ಪರಿಚ್ಛೇಧಕ್ಕೆ ಸೇರಲು ಸುಮಾರು 72 ಭಾಷೆಗಳು ಸರದಿಯಲ್ಲಿರುವುದರಿಂದ, ಕೇಂದ್ರ ಸರಕಾರವು ಎಂಟನೇ ಪರಿಚ್ಛೇಧಕ್ಕೆ ಸೇರುವ ಭಾಷೆಗಳಿಗೆ ದೊರೆಯುವ ಹಲವಾರು ಸವಲತ್ತುಗಳನ್ನು ಈಗಾಗಲೇ ತೆಗೆದು ಹಾಕಿದೆ ಎಂದರು. ಹಾಗಾಗಿ ತುಳುವನ್ನು ಎಂಟನೇ ಪರಿಚ್ಛೇಧಕ್ಕೆ ಸೇರಿಸುವುದರಿಂದ ಅಂತಹ ಮಹತ್ತರವಾದ ಪ್ರಯೋಜನವೇನೂ ಇಲ್ಲ ಎಂದರು. ತುಳುಭಾಷೆಯಲ್ಲಿ ಉತ್ತಮ ಸಾಹಿತ್ಯವನ್ನು ರಚಿಸುತ್ತಾ, ಶೈಕ್ಷಣಿಕವಾಗಿ ತುಳುಭಾಷೆಯನ್ನು ಬೆಳೆಸಬೇಕು ಎಂದು ಅವರು ನುಡಿದರು. ಕೇಂದ್ರ ಸರಕಾರವು ಅನುಷ್ಠಾನಗೊಳಿಸಲಿರುವ ಹೊಸ ಶಿಕ್ಷಣ ನೀತಿಯ ಕರಡು ಪ್ರತಿಯನ್ನು ಗಮನಿಸಿದಾಗ ಅದರಲ್ಲಿ ಸಣ್ಣ ಭಾಷೆಗಳ ಸಬಲೀಕರಣಕ್ಕೆ ಯಾವುದೇ ಯೋಜನೆಗಳಿಲ್ಲ ಎಂದರು. ಅಲ್ಲದೇ ಮಾರ್ಗದರ್ಶಕ ಸೂತ್ರಗಳನ್ನು ಅನುಸರಿಸುವಂತೆ ಕೇಳಲು ಸಣ್ಣ ಭಾಷೆಗಳಿಗೆ ಅಂತಹ ಶಕ್ತಿಯೂ ಇಲ್ಲ ಎಂದು ಅವರು ವಿಷಾದಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿಯವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ದೆಹಲಿಯಲ್ಲಿ ಅಕಾಡೆಮಿಕ್ ಆದ ಕಾರ್ಯಕ್ರಮವೊಂದನ್ನು ಮಾಡಬೇಕು ಎಂಬ ಉದ್ದೇಶವನ್ನು ಬಹಳ ದಿನಗಳಿಂದಲೂ ಹೊಂದಿದ್ದು, ಆ ನೆಲೆಯಲ್ಲಿ ಈ ವಿಚಾರ ಸಂಕಿರಣವು ನಡೆಯುತ್ತಿದೆ ಎಂದರು. ತುಳುವನ್ನು ಸಂವಿಧಾನದ ಎಂಟನೇ ಪರಿಚ್ಛೇಧದಲ್ಲಿ ಸೇರಿಸಲು ದೆಹಲಿ ಕರ್ನಾಟಕ ಸಂಘವು ತುಳು ಸಾಹಿತ್ಯ ಅಕಾಡೆಮಿ ಮತ್ತು ದೆಹಲಿ ತುಳುಸಿರಿಯ ಜತೆಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ಪ್ರಧಾನಿಯವರನ್ನು ಮತ್ತು ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಿ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿದೆ. ಮುಂದಿನ ವಾರ ಡಾ. ಹೆಗ್ಗಡೆಯವರು ದೆಹಲಿಗೆ ಬಂದು ಕರ್ನಾಟಕದ ಎಲ್ಲ ಕೇಂದ್ರ ಸಚಿವರನ್ನು ಮತ್ತು ಸಂಸತ್ ಸದಸ್ಯರನ್ನು ಭೇಟಿಯಾಗಿ ಅವರು ಸಂಸತ್ತಿನಲ್ಲಿ ಧ್ವನಿ ಎತ್ತಬೇಕು ಎಂದು ಒತ್ತಾಯಿಸಲಾಗುವುದು ಎಂದು ಅವರು ತಿಳಿಸಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ. ಚಂದ್ರಹಾಸ ರೈ ಅವರು ಮಾತಾಡುತಾ ಅಕಾಡೆಮಿಯು ಸಾಹಿತ್ಯದ ಬೆಳವಣಿಗೆ, ಜಾನಪದ ಕಲೆಯ ರಕ್ಷಣೆ, ಕಲಾವಿದರಿಗೆ ಪೋಷಣೆ, ಸಂಶೋಧಕರಿಗೆ ಫೆಲೋಶಿಪ್, ತರಬೇತಿ ಕಮ್ಮಟಗಳು, ಪುಸ್ತಕ ಪ್ರಕಟಣೆ, ಪ್ರಶಸ್ತಿ, ಉತ್ಸವ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದರು. ಮಂಗಳೂರು ವಿಶ್ವವಿದ್ಯಾಲಯದಲ್ಲಿ ತುಳುಭಾಷೆಯ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ಮಾಧ್ಯಮಿಕ ಶಿಕ್ಷಣದಲ್ಲಿ ತುಳುಭಾಷೆಯನ್ನು ತೃತೀಯ ಭಾಷೆಯನ್ನಾಗಿ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ 20 ಶಾಲೆಗಳಲ್ಲಿ ಕಲಿಯುತ್ತಿದ್ದಾರೆ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿಯಾಗಿದ್ದ ತುಳು ರಂಗಕರ್ಮಿ ಶ್ರೀ ಕಿಶೋರ್ ಡಿ. ಶೆಟ್ಟಿ ಅವರು ಮಾತಾಡುತ್ತಾ ತುಳು ರಂಗಭೂಮಿಯಲ್ಲಿ ಸುಮಾರು 35 ತಂಡಗಳು ವರ್ಷವಿಡೀ ನಾಟಕಗಳನ್ನು ಆಡುತ್ತಾ ತುಳುಭಾಷೆಯ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದೆ ಎಂದರು.

ತೀವ್ರವಾದ ಜಾಗತೀಕರಣ ಪ್ರಕ್ರಿಯೆಗೆ ಒಳಗಾಗಿರುವ ಕರಾವಳಿ ಕರ್ನಾಟಕದಲ್ಲಿ ಶತಮಾನದಿಂದ ಉಳಿದು ಬಂದಿರುವ ಪಾಡ್ದನಗಳು ಇದೀಗ ನಿರ್ವಹಿಸುತ್ತಿರುವ ಕಾರ್ಯ, ಅದರ ಸ್ವರೂಪದಲ್ಲಾಗುತ್ತಿರುವ ಬದಲಾವಣೆಗಳು, ಪಾಡ್ದನಗಳು ಸಮಕಾಲೀನ ಸಮಾಜದೊಂದಿಗೆ ಹೊಂದಿರುವ ಸಂಬಂಧ, ಅದರ ಧಾರ್ಮಿಕತೆ, ಪಾಡ್ದನಗಳನ್ನು

ಈಗ ಹೇಗೆ ಶೈಕ್ಷಣಿಕವಾಗಿ ಅಧ್ಯಯನ ಮಾಡಬಹುದು ಎಂಬಿತ್ಯಾದಿ ಮಹತ್ವದ ವಿಷಯಗಳ ಕುರಿತು ವಿಚಾರ ಸಂಕಿರಣದಲ್ಲಿ ಚರ್ಚಿಸಲಾಯಿತು.

ಮೊದಲ ಗೋಷ್ಠಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರು ಪಾಡ್ದನಗಳ ಅಧ್ಯಯನ ಮಾಡಿದ ಹಿನ್ನಲೆಯಲ್ಲಿ ಪಾಡ್ದನಗಳ ಸ್ಥೂಲ ಪರಿಚಯವನ್ನು ತಮ್ಮ ಪ್ರಬಂಧ ಮಂಡನೆಯಲ್ಲಿ ಮಾಡಿದರು. ಪಾಡ್ದನಗಳ ಅಧ್ಯಯನಕ್ಕೆ ಅನಂತ ಸಾಧ್ಯತೆಗಳಿವೆ ಮತ್ತು ಅಧ್ಯಯನ ಮಾಡುವ ವಿಧಾನಗಳೂ ಹಲವು ಇವೆ ಎಂದು ಅವರು ತಿಳಿಸಿದರು. ಪಾಡ್ದನಗಳನ್ನು ಮೊಗೆದಷ್ಟು ಉಕ್ಕಿ ಬರುವ ಸಂಗತಿಗಳಿವೆ. ಹಳೆಯ ಪಠ್ಯಗಳಲ್ಲಿಯೇ ಹೊಸ ಸಂಗತಿಗಳು ಕಂಡು ಬರುತ್ತವೆ. ಪಾಡ್ದನಗಳ ಅಧ್ಯಯನ ಮಾಡುವಾಗ ಅದರ ರಚನೆ ಮಾತ್ರವಲ್ಲ ಅದರ ಪ್ರಭಾವದ ಕುರಿತೂ ಸಂಶೋಧನೆ ನಡೆಯಬೇಕು ಎಂದು ಅವರು ವಿವರಿಸಿದರು.

ಮಂಗಳೂರು ವಿಶ್ವವಿದ್ಯಾಲಯ ಯಕ್ಷಗಾನ ಅಧ್ಯಯನ ಕೇಂದ್ರದ ಮುಖ್ಯಸ್ಥರಾದ ಡಾ. ರಾಜಶ್ರೀ ರೈ ಅವರು ಸಮಕಾಲೀನ ತುಳು ಸಮಾಜ ಮತ್ತು ಪಾಡ್ದನಗಳ ಆಂತರಿಕ ಸಂಬಂಧಗಳ ಸ್ವರೂಪ ನಿಷ್ಕರ್ಷೆ ಕುರಿತು ಮಾತಾಡಿದರು. ಪಾಡ್ದನಗಳು ನಿರೂಪಿಸುವ ಸಾಂಸ್ಕೃತಿಕ ವೀರರ ಕಲ್ಪನೆಗಳನ್ನು ನೋಡಿದರೆ ಆರಾಧನೆಗೊಳ್ಳುವ ದೈವಗಳಿಗೂ ಆರಾಧಿಸುವ ಜನರಿಗೂ ಆತ್ಮೀಯವಾದ ನಂಟಿರುವುದನ್ನು ಕಾಣಬಹುದು. ಅವರು ಮಾಡುವ ಹೋರಾಟ, ಅನ್ಯಾಯದ ವಿರುದ್ಧ ಮಾಡುವ ಪ್ರತಿಭಟನೆ ಇಂದಿಗೂ ಪ್ರಸ್ತುತವಾಗಿವೆ ಎಂದು ಅವರು ಹೇಳಿದರು.

ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಪ್ರಾಧ್ಯಾಪಕ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯರಾದ ಡಾ. ದಿವಾಕರ ಕೊಕ್ಕಡ ಅವರು ತುಳುನಾಡಿನ ಸಮಕಾಲೀನ ಧಾರ್ಮಿಕತೆ ಮತ್ತು ಪಾಡ್ದನಗಳ ಕುರಿತು ಮಾತಾಡಿದರು. ಭೂತಾರಾಧನೆ, ನಾಗಾರಾಧನೆಗಳಲ್ಲಿ ಬಹಳ ಬದಲಾವಣೆಗಳಾಗಿವೆ. ಭಯಭಕ್ತಿ ಕ್ಷೀಣಿಸಿ ವೈಭವದ ಉತ್ಸವಗಳಾಗುತ್ತಿವೆ ಎಂದರು. ಸಮಾಜದ ವ್ಯವಸ್ಥೆಯ ತುತ್ತತುದಿಯಲ್ಲಿರುವ ವೈದಿಕರು, ಕೊನೆಯಲ್ಲಿರುವ ದೈವ ಪಾತ್ರಿಗಳು ಮತ್ತು ಮಧ್ಯದಲ್ಲಿರುವ ಆರಾಧಕರು–ಈ ಮೂವರೂ ತುಳುನಾಡಿನ ಧಾರ್ಮಿಕ ಪರಿವೇಶದ ಸ್ಥಿತ್ಯಂತರಕ್ಕೆ ಸಮಾನ ಕಾರಣರಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ ಎಂದು ಅವರು ವಿವರಿಸಿದರು. ತುಳುವರಿಗೆ ಬೇಸಾಯವು ಒಂದು ಕಸುಬಾಗದೇ ಆರಾಧನೆಯಾಗಿತ್ತು. ಭೂತಾರಾಧನೆಯು ಪ್ರಕೃತಿಯ ಆರಾಧನೆಯೇ ಸಂಕೇತಗಳೇ ಆಗಿವೆ. ದೈವದ ಗುಡಿಗಳು ಜೀರ್ಣೋದ್ಧಾರಗೊಂಡು ದೇವಸ್ಥಾನಗಳಾಗಿವೆ. ತುಳುನಾಡಿನ ಧಾರ್ಮಿಕತೆಯ ಸತ್ವವನ್ನು ತಿಳಿಯಲು ಪಾಡ್ದನಗಳನ್ನು ಅಧ್ಯಯನ ಮಾಡುವ ಅವಶ್ಯಕತೆ ಇದೆ ಎಂದು ಅವರು ಹೇಳಿದರು. ಮೊದಲನೇ ಗೋಷ್ಠಿಯನ್ನು ಅಕಾಡೆಮಿ ಸದಸ್ಯೆ ಶ್ರೀಮತಿ ರೂಪಕಲಾ ಆಳ್ವ ಅವರು ನಿರ್ವಹಿಸಿದರು.

ಎರಡನೇ ಗೋಷ್ಠಿಯಲ್ಲಿ ಶ್ರೀಮತಿ ಎಂ. ಜಾನಕಿ ಬ್ರಹ್ಮಾವರ ಅವರು ಭೂತಾರಾಧನೆ ಮತ್ತು ಪಾಡ್ದನಗಳ ನಡುವಣ ಆಧುನಿಕ ಸಂಬಂಧಗಳ ಕುರಿತು ಮಾತಾಡಿದರು. ಭೂತಾರಾಧನೆಯಲ್ಲಿ ಗಾಢ ಸಂಬಂಧ ಹೊಂದಿರುವ ಮೌಖಿಕ ಕಾವ್ಯಗಳಾದ ಪಾಡ್ದನಗಳಲ್ಲಿ ಇತಿಹಾಸದ ಕಠೋರ ಮುಖಗಳನ್ನು, ಜಾತ್ಯಾಧಾರಿತ ಸಮಾಜದ ಜೀವ ವಿರೋಧಿ ಅಂಶಗಳನ್ನು, ವರ್ಗ ಸಂಘರ್ಷದ ಸೂಕ್ಷ್ಮ ನೋಟಗಳನ್ನು, ಸಮಾನತೆಯ ತತ್ವ ಆದರ್ಶಗಳನ್ನು, ಪ್ರಜಾಪ್ರಭುತ್ವದ ಆಶಯಗಳನ್ನು, ಕಾಯಕ ಗೌರವ ಮತ್ತು ಪ್ರಖರ ಸ್ತ್ರೀವಾದಗಳನ್ನು ಕಾಣಬಹುದು ವೆಂದು ಅವರು ಹೇಳಿದರು.

ಮಂಗಳೂರು ಸೈಂಟ್ ಅಲೋಸಿಯಸ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಗಣೇಶ್ ಅಮೀನ್ ಸಂಕಮಾರ್ ಅವರು ಯಕ್ಷಗಾನ, ನಾಟಕ, ಸಿನೇಮಾ ಇತ್ಯಾದಿಗಳಲ್ಲಿ ಪಾಡ್ದನಗಳ ಆಧುನಿಕ ವಿಸ್ತರಣೆಗಳು ಕುರಿತು ಮಾತಾಡಿದರು. ಧಾರ್ಮಿಕ ಚೌಕಟ್ಟಿನಿಂದ ಒಂದು ಭಾಷೆಯನ್ನು ಹೊರತಂದು ಅದನ್ನು ಮನರಂಜನೆಯ ಮಾಧ್ಯಮವಾಗಿ ಬಳಸುವಾಗ ತುಳುವಿನ ನಂಬಿಕೆಯ ಲೋಕಕ್ಕೆ ಮತ್ತು ಭಾಷೆಯ ಗಟ್ಟಿತನಕ್ಕೆ ಪೆಟ್ಟಾಗದಂತೆ ಅದನ್ನು ಬಳಸಬೇಕು ಎಂದು ಅವರು ಹೇಳಿದರು. ಪಾಡ್ದನಗಳನ್ನು ಆಧರಿಸಿ ಸಾಹಿತ್ಯದ ರಚನೆ 1960ರಿಂದಲೇ ಆರಂಭವಾಗಿತ್ತು. ಕೋಟಿ ಚೆನ್ನಯ ಪಾಡ್ದನವನ್ನು ಆಧರಿಸಿ, ಯಕ್ಷಗಾನ, ನಾಟಕ ಮತ್ತು ಸಿನಿಮಾಗಳು ಬಹಳಷ್ಟು ಬಂದಿವೆ ಎಂದರು. ತುಳುವರ ಆರಾಧನಾ ಪರಿಭಾಷೆಯಾಗಿರುವ ಪಾಡ್ದನಗಳಲ್ಲಿರುವ ಸಾರ್ವಕಾಲಿಕವಾದ ಮೌಲ್ಯಗಳಿಂದಾಗಿ ಅವುಗಳನ್ನು ಆಧುನಿಕ ಮಾಧ್ಯಮಗಳಲ್ಲಿ ಬರಹಗಾರರು ಬಳಸಿಕೊಂಡಷ್ಟು ಅದು ಮತ್ತೊಂದು ಹೊಸ ರೂಪವನ್ನು ಪಡೆದು ಹೊಸ ವಿಷಯಗಳನ್ನು ನೀಡುತ್ತಾ ಬಂದಿದೆ. ಪಾಡ್ದನಗಳಲ್ಲಿ ನಿರಂತರವಾದ ಚಲನಶೀಲ ಮತ್ತು ಕ್ರಿಯಾಶೀಲ ಶಕ್ತಿ ಇದೆ ಎಂದು ಅವರು ನುಡಿದರು.

ಮಂಗಳೂರು ವಿಶ್ವವಿದ್ಯಾಲಯದ ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ಬಿ. ಶಿವರಾಮ ಶೆಟ್ಟಿ ಅವರು ಜಾಗತೀಕರಣದ ಸಂದರ್ಭದಲ್ಲಿ ಪಾಡ್ದನಗಳ ಕುರಿತು ಮಾತಾಡಿದರು. ಜಾಗತೀಕರಣದಿಂದ ರಾಷ್ಟ್ರೀಯವಾದ ಮತ್ತು ಬುಡಕಟ್ಟುವಾದಗಳು ಮುಖಾಮುಖಿಯಾದವು. ಜಾಗತೀಕರಣ ಪ್ರಕ್ರಿಯೆಯು ಅನೇಕತೆಯನ್ನು ಏಕತೆಯನ್ನಾಗಿ ಮಾಡಲು ಪ್ರಯತ್ನಿಸುತ್ತದೆ. ಪಾಡ್ದನಗಳ ಅಧ್ಯಯನದ ಹೊಸ ವಿಧಾನಗಳನ್ನು ಕಂಡುಕೊಳ್ಳುವವರು ಶಕ್ತಿಕೇಂದ್ರಗಳ ಕುಟಿಲತೆಗಳನ್ನು ಕೂಡಾ ವಿರೋಧಿಸಬೇಕು ಎಂದು ಅವರು ಹೇಳಿದರು. ಜಾಗತೀಕರಣದಿಂದ ಮುಕ್ತತೆಯ ವಾತಾವರಣ ಲಭಿಸಿ ತಾಂತ್ರಿಕ ಸಾಧನೆಗಳ ಮೂಲಕ ಹೊಸ ಸಾಧ್ಯತೆಗಳನ್ನು ಕೂಡಾ ಪಡೆಯಬಹುದು ಎಂದು ಅವರು ಅಭಿಪ್ರಾಯ ಪಟ್ಟರು. ಎರಡನೇ ಗೋಷ್ಠಿಯನ್ನು ಅಕಾಡೆಮಿ ಸದಸ್ಯ ಶ್ರೀ ಡಿ.ಎಂ. ಕುಲಾಲ್ ಅವರು ನಿರ್ವಹಿಸಿದರು.

ಉದ್ಘಾಟನಾ ಸಮಾರಂಭವನ್ನು ದೆಹಲಿ ತುಳುಸಿರಿಯ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ನಾಯ್ಕ್ ಅವರು ನಿರ್ವಹಿಸಿದರು. ಅಕಾಡೆಮಿಯ ಸದಸ್ಯ ಶ್ರೀ ಕೆ.ಟಿ. ವಿಶ್ವನಾಥ್ ವಂದಿಸಿದರು. ಸಮಾರೋಪ ಸಮಾರಂಭವನ್ನು ಶ್ರೀ ಅರವಿಂದ ಬಿಜೈ ಅವರು ನಿರ್ವಹಿಸಿದರು. ಶ್ರೀ ಚಂದ್ರಹಾಸ ರೈ ಅವರು ವಂದನಾರ್ಪಣೆ ಸಲ್ಲಿಸಿದರು.

ವಿಚಾರ ಸಂಕಿರಣದ ನಂತರ ಮಂಗಳೂರಿನ ಚಕ್ರಪಾಣಿ ನೃತ್ಯಕಲಾ ಕೇಂದ್ರದ ಕಲಾವಿದರಿಂದ ಪಾಡ್ದನವನ್ನು ಆಧರಿಸಿದ ಕಚ್ಚೂರ ಮಾಲ್ದಿ ಎಂಬ ಜಾನಪದ ನೃತ್ಯರೂಪಕದ ಪ್ರದರ್ಶನ ನಡೆಯಿತು. ಅ

***ಬಾಲಕೃಷ್ಣ ನಾಯ್ಕ್ ಡಿ.***





# ಕರ್ನಾಟಕ ವಾರ್ತಾ ಕೇಂದ್ರದ ಮೂಲಕ ನೋಯ್ಡಾ, ಗುರುಗಾಂವ್, ಚಂಡೀಗಢದಲ್ಲಿ ರಾಜ್ಯೋತ್ಸವ ಕಾರ್ಯಕ್ರಮ

ಕನ್ನಡದ ಸಂಸ್ಕೃತಿ ಪರಂಪರೆ ವೈಭವಯುತವಾದದ್ದು, ಕನ್ನಡದ ಶ್ರೀಮಂತ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದದ್ದು ನಮ್ಮೆಲ್ಲರ ಹೊಣೆಯಾಗಿದೆ ಎಂದು ಭಾರತ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿಗಳಾದ ಶ್ರೀ ಸೆಲ್ವಕುಮಾರ ಅವರು ಹೇಳಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರ ಹಾಗೂ ನೋಯ್ಡಾ ಕನ್ನಡ ಕೂಟವು ಇದೇ ನವಂಬರ್ 26 ರಂದು ನೋಯ್ಡಾ ಜೆ.ಎಸ್.ಎಸ್ ತಾಂತ್ರಿಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಜಂಟಿಯಾಗಿ ಆಯೋಜಿಸಿದ್ದ 61ನೇ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ಮಕ್ಕಳೊಂದಿಗೆ ಮಾತೃ ಭಾಷೆಯಲ್ಲಿಯೇ ಮಾತನಾಡಬೇಕು. ಕನ್ನಡ ನಾಡು ಸಮೃದ್ಧಿಯ ನಾಡು– ಕವಿಗಳ ಬೀಡು. ನಮ್ಮ ಬೆಳವಣಿಗೆಗೆ ಬೇಕಾದ ಎಲ್ಲಾ ಅವಕಾಶಗಳನ್ನು ಭಾಷೆ ಕಲ್ಪಿಸಿದೆ. ನಿಟ್ಟಿನಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ ಬೆಳಸಬೇಕಾದದ್ದು ನಮ್ಮೆಲ್ಲರ ಹೊಣೆಯಾಗಿದೆ ಎಲ್ಲೆ ಇರಿ ಹೇಗೆ ಇರಿ ತಾಯಿನಾಡು ಹಾಗು ಮಾತೃ ಭಾಷೆಯ ಒಡನಾಟದಲ್ಲಿರಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಶ್ರೀ ಎನ್.ಆರ್.ವಿಶು ಕುಮಾರ ಅವರು ಮಾತನಾಡಿ ಕನ್ನಡದ ಸಂಸ್ಕೃತಿಯನ್ನು ಉಳಿಸಿ ಬೆಳಸಿಕೊಂಡು ಹೋಗುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೊರನಾಡಿನ ಹಾಗೂ ಹೊರ ದೇಶದ ಕನ್ನಡಿಗರಿಗೆ ತಲುಪಿಸುವ ಕಾರ್ಯ ನಿರ್ವಹಿಸುತ್ತಿದೆ. ಹೊರನಾಡಿನಲ್ಲಿ ಹಾಗೂ ಹೊರ ದೇಶಗಳಲ್ಲಿ ನಾನಾ ಕಡೆ ನೆಲಸಿರುವ ಕನ್ನಡಿಗರು ಮತ್ತೊಮ್ಮೆ ಒಟ್ಟುಗೂಡುವ ಕಾಲ ಸನ್ನಿಹಿತವಾಗಿದೆ. ಮುಂಬರುವ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ ಕನ್ನಡಮ್ಮನ ತೇರನ್ನು ಎಳೆಯಲು ಕೈಜೋಡಿಸಲು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತೀಯ ನರ್ಸಿಂಗ್ ಕೌನ್ಸಿಲ್‌ನ ಅಧ್ಯಕ್ಷರಾದ ಶ್ರೀ ದಿಲೀಪ ಕುಮಾರ ಅವರು ಮಾತನಾಡಿ ಕನ್ನಡದ ಸಭೆ ಸಮಾರಂಭಕ್ಕೆ ಕನ್ನಡಿಗರು ಆಗಮಿಸುವುದು ವಿರಳವಾಗುವುದು ಕಂಡು ಬರುತ್ತದೆ. ಕನ್ನಡ ಹಬ್ಬದ ವಾತಾವರಣ ಇಂದು ಕಾಣಬರುತ್ತದೆ. ಕನ್ನಡಿಗರೆಲ್ಲರನ್ನು ಒಟ್ಟುಗೂಡಿಸಿ ಕನ್ನಡಮಯವಾಗಿಸಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರದ ಕ್ರಮ ಶ್ಲಾಘನೀಯ ಎಂದರು. ಈ ರೀತಿಯ ಕನ್ನಡ ಕಾರ್ಯಕ್ರಮಗಳು ಏರ್ಪಡಿಸುವ ಮೂಲಕ ಮಕ್ಕಳಿಗೆ ಕನ್ನಡದ ಸಂಸ್ಕೃತಿ ಇತಿಹಾಸ ತಿಳಿಸಲು ಸಹಾಯಕವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಹೊರನಾಡಿನಲ್ಲಿ ಇಂತಹ ಕಾರ್ಯಕ್ರಮ ಏರ್ಪಡಿಸಿರುವುದು ಸಂತೋಷವನ್ನು ತಂದಿದೆ ಎಂದರು.

ಹೊರನಾಡಿನಲ್ಲಿ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ ಪರಂಪರೆ, ಸಿನಿಮಾ ಸೇರಿದಂತೆ ಕನ್ನಡಪರವಾದ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಕನ್ನಡಿಗರಿಗೆ ಪರಚಯಿಸುವಂತಹ ಇನ್ನೂ ಅನೇಕ ಕಾರ್ಯಕ್ರಮಗಳು ಮೂಡಿಬರಲಿ ಎಂದು ಮೈಸೂರಿನ ಜೆ.ಎಸ್.ಎಸ್. ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಎಸ್.ಪಿ. ಉಮಾದೇವಿ ಅವರು ಹೇಳಿದರು.

ನೋಯ್ಡಾದ ಜೆ.ಎಸ್.ಎಸ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಕೆ. ಕಮಲ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಾರ್ತಾಧಿಕಾರಿ ಶ್ರೀ ಗಿರೀಶ್ ಎಲ್.ಪಿ ಅವರು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಅಮರೇಶ ನಿರೂಪಿಸಿದರು. ನೋಯ್ಡಾ ಕನ್ನಡ ಕೂಟದ ಕಾರ್ಯದರ್ಶಿಗಳಾದ ಶ್ರೀ ಎನ್. ಎಸ್.ಮನೋಜ ಕುಮಾರ ಅವರು ವಂದಿಸಿದರು.

ನೋಯ್ಡಾದ ಜೆ.ಎಸ್.ಎಸ್ ತಾಂತ್ರಿಕ ಮಹಾವಿದ್ಯಾಲಯದ ಸಂಯೋಜಕ ಶ್ರೀ ಪಿ.ರಾಜಣ್ಣ ಹಾಗೂ ಜೆ.ಎಸ್.ಎಸ್. ತಾಂತ್ರಿಕ ಮಹಾವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಕಾರ್ಯಕ್ರಮದ ಯಶಸ್ಸಿಗೆ ಕಾರಣೀಭೂತರಾದರು.

ಮೈಸೂರು ಆಕಾಶವಾಣಿ ಕಲಾವಿದರಾದ ಶೈಲಾ ಸಿದ್ದರಾಮಪ್ಪ ಹಾಗೂ ಅವರ ತಂಡ ನಡೆಸಿ ಕೊಟ್ಟ ಸುಗಮ ಸಂಗೀತ, ಜಾನಪದ ಗಾಯನ, ಜಾನಪದ ಗೀತೆ, ಭಾವಗೀತೆ ಹಾಗೂ ವಚನ ಗೀತ ಗಾಯನದ ಸಂಗೀತ ಕಾರ್ಯಕ್ರಮವು ಸೇರಿದ್ದ ಕೇಳುಗರ ಮನಸೂರೆಗೊಳಿಸಿದರು. ನಂತರ ನಡೆದ ಶ್ರೀ ಶಬ್ಬೀರ ಅಹ್ಮದ್ ಹಾಗೂ ಸ್ವರ ಮಧುರ ತಂಡದಿಂದ ಕನ್ನಡ ಚಲನಚಿತ್ರ ಸಂಗೀತ ಕ್ಷೇತ್ರ ನಡೆದು ಬಂದ ದಾರಿ, ಪ್ರಾರಂಭದಿಂದ ಇಂದಿನವರೆಗಿನ ಕನ್ನಡ ಚಲನಚಿತ್ರ ಗೀತೆಗಳ ಗಾಯನವನ್ನು ಜನಪ್ರಿಯ ಹಿನ್ನೆಲೆ ಗಾಯಕರಾದ ಚಂದ್ರಿಕಾ ಗುರುರಾಜ್, ಉದಯ್ ಅಂಕೋಲಾ ಹಾಗು ಸುರೇಖಾ ಇವರು ಹಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ಮಾಣದ ಕನ್ನಡ ಕಿರು ಚಿತ್ರಗಳನ್ನು ಪ್ರದರ್ಶನ ಮಾಡಲಾಯಿತು. ಕನ್ನಡ ಸಂಸ್ಕೃತಿ ಪ್ರತಿಬಿಂಬಿಸುವ ಹಾಗು ಸರ್ಕಾರದ ಅಭಿವೃದ್ಧಿ ಯೋಜನೆಗಳ ಕುರಿತು ಏರ್ಪಡಿಸಿದ್ದ ವಸ್ತು ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

ಪ್ರಪಂಚದ ನಾನಾ ಕಡೆ ನೆಲೆಸಿರುವ ಕನ್ನಡಿಗರು ಕನ್ನಡ ಒಕ್ಕೂಟಗಳನ್ನು ಸ್ಥಾಪಿಸಿಕೊಂಡು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ನಾಡಿನ ಜಲ ನೆಲ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಲು ಮತ್ತು ನಾಡಿನ ಸಾಂಸ್ಕೃತಿಕ ವೈಭವಯುತವನ್ನು ಯುವ ಪೀಳಿಗೆಗೆ ಪರಿಚಯಿಸುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಕರ್ನಾಟಕ ಸರ್ಕಾರದ ಮಾಜಿ ಗೃಹ ಸಚಿವರು ಹಾಗೂ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುಖ್ಯ ಆಯುಕ್ತರು ಆದ ಶ್ರೀ ಪಿ.ಜಿ.ಆರ್.ಸಿಂಧ್ಯ ಅವರು ಅಭಿಪ್ರಾಯಪಟ್ಟರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರ ಹಾಗೂ ಗುರುಗಾಂವ್ ಕನ್ನಡ ಸಂಘದವರು ಇದೇ ನವಂಬರ್ 27 ರಂದು ಗುರುಗಾಂವನಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು ನಾಡು ನುಡಿ ಸಂಸ್ಕೃತಿ ಉಳಿವಿನಲ್ಲಿ ಹೊರ ನಾಡ ಕನ್ನಡಿಗರ ಪಾತ್ರ ಅಪಾರವಾದದ್ದು. ನಾಡಿನಿಂದ ಸಾವಿರಾರು ಕಿಲೋ ಮೀಟರ್ ದೂರದಲ್ಲಿದ್ದೇವೆ ಎಂಬ ಕೊರಗು ನಿಮಗೆ ಬೇಡ, ಸಂಕಷ್ಟದ ಸ್ಥಿತಿಯಲ್ಲಿ ಹೊರನಾಡ ಕನ್ನಡಿಗರ ರಕ್ಷಣೆಗೆ ರಾಜ್ಯ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಸಹಾಯ ಹಸ್ತ ನೀಡುತ್ತಿದೆ. ಹೊರ ನಾಡಿನ ಕನ್ನಡಿಗರಿಗೆ ತಾಯ್ನಾಡಿನೊಂದಿಗೆ ಸದಾ ಸಂಪರ್ಕ ಇರಲು ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಐ.ಎ.ಎಸ್ ಅಧಿಕಾರಿ ಹಾಗೂ ದೆಹಲಿ ಹಣಕಾಸು ಆಯೋಗದ ಅಧ್ಯಕ್ಷರೂ ಶ್ರೀ ಸುಧೀರ ಕೃಷ್ಣ ಅವರು ಮಾತನಾಡಿ ನನ್ನ ಸೇವೆಯನ್ನು ದೀರ್ಘಕಾಲ ಕರ್ನಾಟಕದಲ್ಲಿ ಕಳೆದಿದ್ದು ನನ್ನ ಸೌಭಾಗ್ಯ ಕನ್ನಡ ನಮ್ಮೆಲ್ಲರ ನಿತ್ಯದ ಉಸಿರಾಗಲಿ ಎಂದು ಆಶಿಸಿದರು. ಕಾರ್ಯಕ್ರಮದ ಮತ್ತೊರ್ವ ಅತಿಥಿ ಕನ್ನಡಿಗರಾದ ಗುರುಗಾಂವ್‌ನ ಜಿಲ್ಲಾಧಿಕಾರಿ ಶ್ರೀ ಟಿ.ಎಲ್. ಸತ್ಯಪ್ರಕಾಶ ಅವರು ಮಾತನಾಡಿ ನಾನೊಬ್ಬ ಕನ್ನಡಿಗ ಎಂದು ಹೇಳಿಕೊಳ್ಳುವುದು ನನಗೆ ಹೆಮ್ಮೆಯ ಸಂಗತಿ. ನಾಡು ನುಡಿ ಚಿಂತನೆಗೆ ಮತ್ತು ಭಾಷಾಭಿಮಾನಕ್ಕೆ ಕರ್ನಾಟಕ ಸರ್ಕಾರ ಪ್ರೋತ್ಸಾಹಿಸುತ್ತಿರುವುದು ಅದರಲ್ಲೂ ಹೊರನಾಡ ಕನ್ನಡಿಗರ ಬಗ್ಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿರುವುದು



ಅಭಿನಂದನಾರ್ಹವಾಗಿದೆ ಎಂದು ಹೇಳಿದರು. ವೇದಿಕೆಯಲ್ಲಿ ಕರ್ನಾಟಕ ವಾರ್ತಾ ಕೇಂದ್ರದ ಉಪ ನಿರ್ದೇಶಕ ಶ್ರೀ ಮೈಸೂರು ಗಿರೀಶ್, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶ್ರೀ ಡಿ.ವಿ.ಎಸ್ ಮೂರ್ತಿ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಕೃಷ್ಣಪ್ಪ ಉಪಸ್ಥಿತರಿದ್ದರು. ನಂತರ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರ ಮತ್ತು ಕನ್ನಡ ಸಂಘ, ಚಂಡೀಗಢ್ ಇವರ ಸಂಯುಕ್ತಾಶ್ರಯಲ್ಲಿ ಇದೇ ನವಂಬರ್ 20 ರಂದು ನಡೆದ 61ನೇ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಹರಿಯಾಣ ರಾಜ್ಯದ ಪರಿಸರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕನ್ನಡಿಗರಾದ ಶ್ರೀ ಶ್ರೀಕಾಂತ ವಾಲ್ಗದ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಹೊರ ರಾಜ್ಯಗಳಲ್ಲಿ ಕನ್ನಡಿಗರಿಗೆ ನಿರಂತರವಾಗಿ ಕನ್ನಡದ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಅನೇಕ ವರ್ಷಗಳಿಂದ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ, ಪರಂಪರೆಯ ಕುರಿತಾದ ಕನ್ನಡಪರವಾದ ಕಾರ್ಯಕ್ರಮಗಳನ್ನು ಹೊರರಾಜ್ಯಗಳಲ್ಲಿ ಏರ್ಪಡಿಸಲಾಗುತ್ತಿದೆ ಎಂದರು. ಕಾರ್ಯಕ್ರಮವನ್ನು ಪಂಜಾಬ್ ಹಾಗೂ ಹರಿಯಾಣ ಉಚ್ಚ ನ್ಯಾಯಾಲಯದ ಸನ್ಮಾನ್ಯ ನ್ಯಾಯಧೀಶರಾದ ಶ್ರೀ ಪಿ.ಬಿ. ಭಜಂತ್ರಿ ಇವರು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವೈದ್ಯ ಡಾ. ವಿಜಯ ಜಿ ಗೋಣಿ ಅವರು ಮಾತನಾಡಿ 25 ವರ್ಷಗಳಿಂದಲೂ ಹೊರನಾಡಿನಲ್ಲಿ ವಾಸಿಸುತ್ತಿರುವ ತಮಗೆ ಕರ್ನಾಟಕದಲ್ಲಿ ಇದ್ದ ಅನುಭವವಾಗುತ್ತದೆ. ಚಂಡೀಗಢ್ ಕನ್ನಡಿಗರೆಲ್ಲರೂ ಒಟ್ಟಿಗೆ ಸೇರಿ ಕರ್ನಾಟಕ ರಾಜ್ಯೋತ್ಸವವನ್ನು ಅತ್ಯಂತ ಸಡಗರ ಸಂಭ್ರಮದೊಂದಿಗೆ ಆಚರಿಸುವುದು ಅತ್ಯಂತ ಸಂತೋಷದಾಯಕ ಸಂದರ್ಭವಾಗಿದೆ ಎಂದರು. ಹಾಸ್ಯ ಕಲಾವಿದ ಹಾಗೂ ಅಣುಕು ಕವಿ ಶ್ರೀ ವೈ.ವಿ. ಗುಂಡೂರಾವ್, ಚಂಡೀಗಢ್ ಕನ್ನಡ ಸಂಘದ ಅಧ್ಯಕ್ಷ ಶ್ರೀ ಗಂಗಾಧರ ಹೆಚ್ ಹೂಗಾರ ಮತ್ತಿತರರು ಉಪಸ್ಥಿತರಿದ್ದರು. ವಾರ್ತಾಧಿಕಾರಿ ಶ್ರೀ ಗಿರೀಶ ಎಲ್.ಪಿ ಇವರು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀಮತಿ ಪದ್ಮಾ ನಿರೂಪಿಸಿದರು. ಚಂಡೀಗಢ್ ಕನ್ನಡ ಸಂಘದ ಶ್ರೀ ಸುರೇಶ ಜಿ ಜಂಬಗಿ ಇವರು ವಂದಿಸಿದರು. ಅ

**ಅಮರೇಶ್**



# ನವದೆಹಲಿಯ ಕರ್ನಾಟಕ ಭವನದ ವತಿಯಿಂದ 61ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ

ಕರ್ನಾಟಕ ರಾಜ್ಯೋತ್ಸವ ಆಚರಣೆ ಅಂಗವಾಗಿ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನದಲ್ಲಿ ನವಂಬರ್ ಒಂದರಂದು ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿವಾಸಿ ಆಯುಕ್ತರಾದ ಶ್ರೀ ಅತುಲ್ ಕುಮಾರ್ ತಿವಾರಿ ಅವರು ಧ್ವಜಾರೋಹಣ ಮಾಡಿ ಭುವನೇಶ್ವರಿ ದೇವಿಯ ಪೂಜೆ ಮಾಡುವ ಮೂಲಕ ಕಾರ್ಯಕ್ರಮವನ್ನು ನೆರವೇರಿಸಿದರು. ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿರುವ ರಕ್ತದಾನ ಶಿಬಿರವನ್ನು ಕೂಡಾ ಉದ್ಘಾಟಿಸಿದರು.

ನಂತರ ಕರ್ನಾಟಕ ರಾಜ್ಯೋತ್ಸವ ಆಚರಣೆ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀ ಅತುಲ್ ಕುಮಾರ್ ತಿವಾರಿ ಅವರು ಕನ್ನಡಿಗರು ಭಾವನಾತ್ಮಕವಾಗಿ ಸ್ಪಂದಿಸುವ ಮನೋಭಾವವುಳ್ಳವರು, ಹೃದಯವಂತರು, ಶಾಂತಿ ಪ್ರಿಯರು ಹಾಗೂ ಇತರರನ್ನು ಪ್ರೀತಿಸುವ ಗುಣವುಳ್ಳವರು ಅವರು ತಿಳಿಸಿದರು. ಹುಟ್ಟಿದ ನೆಲದಿಂದ ಅನಿವಾರ್ಯವಾಗಿ ಬೇರೆಡೆಗೆ ವಲಸೆ ಬಂದಿರುವ ಕನ್ನಡಿಗರು ತಮ್ಮ ಸಂಸ್ಕೃತಿ, ಪರಂಪರೆ ನೆಲದ ಏಳ್ಗೆಗೆ ಒಟ್ಟಾಗಬೇಕಾಗಿದೆ. ನನ್ನ ಸೇವಾನುಭವದಲ್ಲಿ ಹೇಳಬೇಕೆಂದರೆ ಕನ್ನಡಿಗರು ಭಾವನಾತ್ಮಕವಾಗಿ ಸ್ಪಂದಿಸುವ ಮನೋಭಾವವುಳ್ಳವರು, ಹೃದಯವಂತರು, ಶಾಂತಿ ಪ್ರಿಯರು ಹಾಗೂ ಇತರರನ್ನು ಪ್ರೀತಿಸುವ ಗುಣವುಳ್ಳವರು, ಕನ್ನಡ ಕಂಪು ಹೊರನಾಡಿನಲ್ಲಷ್ಟೇ ಅಲ್ಲದೇ ದೇಶಾದ್ಯಂತ ಪಸರಿಸಲಿ ಎಂದು ಆಶಿಸಿದರು.

ಕರ್ನಾಟಕ ಭವನದಲ್ಲಿ ಪ್ರತಿ ಸಿಬ್ಬಂದಿ ಹೆಚ್ಚು ಶ್ರಮ ವಹಿಸಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಹೊರ ರಾಜ್ಯಗಳಲ್ಲಿ ಅದರಲ್ಲೂ ಉತ್ತರ ಭಾರತದಂತಹ ರಾಜ್ಯಗಳಲ್ಲಿ ಹಾಗೂ ಹೊರ ದೇಶಗಳಲ್ಲಿ ಸಂಕಷ್ಟಕ್ಕೆ ಸಿಲುಕುವ ಕನ್ನಡಿಗರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕಳುಹಿಸುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರದ ನೆರವಿನಿಂದ ಕರ್ನಾಟಕ ಭವನದ ಸಿಬ್ಬಂದಿ ಕರ್ತವ್ಯ ನಿರ್ವಹಿಸಿರುವುದು ಶ್ಲಾಘನೀಯ ಎಂದು ಈ ಸಂದರ್ಭ ಹೇಳಿದರು.

ಎಬಿಲಿಟಿ ಅನ್‌ಲಿಮಿಟೆಡ್‌ನ ನಿರ್ದೇಶಕರಾದ ಶ್ರೀ ಸೈಯದ್ ಎಸ್. ಪಾಷ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಕನ್ನಡ ನಾಡು ನಮ್ಮ ಶ್ರೇಯೋಭಿವೃದ್ಧಿಗಾಗಿ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿದೆ. ನವದೆಹಲಿಯ ಕರ್ನಾಟಕ ಸರ್ಕಾರದ ಕಾನೂನು ಸಲಹೆಗಾರರಾದ ಶ್ರೀ ಬ್ರಿಜೇಶ ಕಾಳಪ್ಪ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಗೌರವಾನ್ವಿತ ಆಹ್ವಾನಿತರುಗಳಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹೆಸರಾಂತ ಹಿಂದೂಸ್ತಾನಿ ಗಾಯಕ ಶ್ರೀ ವೆಂಕಟೇಶ ಅಲ್ಕೊಡ ಹಾಗೂ ಅವರ ತಂಡದಿಂದ ಪ್ರಸ್ತುತ ಪಡಿಸಿದ ಗೀತಗಾಯನ ಕೇಳುಗರನ್ನು ಭಾವಪರವಶವಾಗಿಸಿತ್ತು. ವಿದುಷಿ ಪದ್ಮಿನಿ ಅಚ್ಚಿ ಹಾಗೂ ತಂಡದವರು ನಡೆಸಿಕೊಟ್ಟ ನೃತ್ಯ ರೂಪಕ ಮನಮೋಹಕವಾಗಿತ್ತು. ಕರ್ನಾಟಕ ಭವನದ ಸಿಬ್ಬಂದಿ ಮತ್ತು ಕುಟುಂಬ ವರ್ಗದವರಿಂದ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮನ ಸೂರೆಗೊಂಡವು. ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಿತು. ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾದ ಹಾಗೂ ಐ.ಎ.ಎಸ್. ಅಧಿಕಾರಿ ಶ್ರೀಮತಿ ಅನೀಸ್ ಕೆ. ಜಾಯ್ ಅವರು ಸ್ವಾಗತಿಸಿದರು. ಜಂಟಿ ನಿವಾಸಿ ಆಯುಕ್ತ ಶ್ರೀ ಟಿ.ಎಂ. ರಂಗಸ್ವಾಮಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಆರ್. ರೇಣುಕುಮಾರ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ

**ಎಸ್. ಕುಮಾರ್**

# ಕೆನರಾ ಕಲ್ಚರಲ್ ಅಸೋಸಿಯೇಶನ್ ಸುವರ್ಣ ಮಹೋತ್ಸವ



ಕೆನರಾ ಕಲ್ಚರಲ್ ಅಸೋಸಿಯೇಶನ್‌ನ ಸುವರ್ಣ ಮಹೋತ್ಸವ ಇದೇ ನವೆಂಬರ್ 12ರಂದು ದೆಹಲಿಯ ಅಶೋಕ ರೋಡ್‌ನಲ್ಲಿರುವ ಡಿಸಿಸಿ ಕಮ್ಯುನಿಟಿ ಸೆಂಟರ್‌ನಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಕೇಂದ್ರ ಸಚಿವ ಶ್ರೀ ಆಸ್ಕರ್ ಫರ್ನಾಂಡಿಸ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿಯ ಆರ್ಚ್‌ಬಿಷಪ್ ಅನಿಲ್ ಕುಟ್ಟೊ ಮತ್ತು ಅಸೋಸಿಯೇಶನ್‌ನ ಮಾಜಿ ಅಧ್ಯಕ್ಷರುಗಳು ಹಾಗೂ ಸುಮಾರು 300ಕ್ಕಿಂತಲೂ ಹೆಚ್ಚು ಸದಸ್ಯರು ಈ ಸಮಾರಂಭದಲ್ಲಿ ಭಾಗವಹಿಸಿದರು.

1956ರಲ್ಲಿ ಆರಂಭವಾದ ಈ ಸಂಸ್ಥೆಯು ಕಳೆದ 50 ವರ್ಷಗಳಿಂದ ದೆಹಲಿಯಲ್ಲಿ ಹಲವಾರು ಅರ್ಥಪೂರ್ಣ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದು, ಕರಾವಳಿ ಪ್ರದೇಶದಿಂದ ಬಂದ ಕೊಂಕಣಿ ಜನಾಂಗದವರ ಒಂದು ಅತ್ಯಂತ ಕ್ರಿಯಾಶೀಲ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ.

ಇಂದಿನ ಈ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತ ಕರ್ನಾಟಕದ ಕರಾವಳಿಯ ಕೊಂಕಣಿ, ಕ್ರೈಸ್ತ ಸಮುದಾಯದ ಸೇವೆ ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ ಶ್ರೀ ಜಾರ್ಜ್ ಫರ್ನಾಂಡಿಸ್, ಶ್ರೀಮತಿ ಮಾರ್ಗರೇಟ್ ಆಳ್ವಾ ಹಾಗೂ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಸಲ್ಲಿಸಿದ ಸೇವೆ ತುಂಬಾ ಶ್ಲಾಘನೀಯ ಹಾಗೂ ಕನ್ನಡಿಗರು ಹೆಮ್ಮೆಪಡುವಂತಾಗಿರುತ್ತದೆ. ಶಿಕ್ಷಣ, ಆಡಳಿತ ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೂಡಾ ಕರಾವಳಿಯ ಕೊಂಕಣಿ ಸಮುದಾಯ ತನ್ನದೇ ಆದಂತಹ ಹೆಸರನ್ನು ಗಳಿಸಿದೆ ಎಂದರು. ಅದೇ ರೀತಿ ಸಾಹಿತ್ಯ ಮುದ್ರಣ ಹಾಗೂ ಪತ್ರಿಕೋದ್ಯಮ ಕ್ಷೇತ್ರದಲ್ಲಿನ ಸೇವೆಯನ್ನು ಸಹ ನೆನಪಿಸಿದರು.

ಕೆನರಾ ಕಲ್ಚರಲ್ ಅಸೋಸಿಯೇಶನ್ ತನ್ನದೇ ಆದ ಅಸ್ತಿತ್ವ ಹಾಗೂ ಸಂಸ್ಕೃತಿಯನ್ನು ಕಳೆದ 50 ವರ್ಷಗಳಿಂದ ಕಾಪಾಡಿಕೊಂಡು ಬಂದಿರುವುದು ತುಂಬಾ ಸಂತೋಷ ಕೊಡುತ್ತಿದೆ ಎಂದು ರಾಜ್ಯಸಭಾ ಸದಸ್ಯ ಶ್ರೀ ಆಸ್ಕರ್ ಫರ್ನಾಂಡಿಸ್ ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಅಸೋಸಿಯೇಶನ್‌ಗೆ ಹಾಗೂ ಸಮುದಾಯಕ್ಕೆ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಿದ ಸುಮಾರು 25ಸದಸ್ಯರನ್ನು ಸನ್ಮಾನಿಸಲಾಯಿತು.

ಸಭಾ ಕಾರ್ಯಕ್ರಮದ ನಂತರ ಯುವ ತಂಡದವರಿಂದ ನೃತ್ಯ, ಹಾಡು, ನಾಟಕ ಹಾಗೂ ಹಾಸ್ಯ ಚುಟುಕುಗಳು ಕನ್ನಡ, ಕೊಂಕಣಿ, ಹಾಗೂ ತುಳು ಭಾಷೆಯಲ್ಲಿ ನಡೆದ ಮನೋರಂಜನಾ ಕಾರ್ಯಕ್ರಮಗಳು ನೆರೆದ ಸಭಿಕರನ್ನು ರಂಜಿಸಿದವು. ಅ

*ಎಡ್ವರ್ಡ್ ಮಥಾಯಸ್*

# ದೆಹಲಿ ಕನ್ನಡ ಶಾಲೆಯಲ್ಲಿ ಸಂಭ್ರಮದ ವಾರ್ಷಿಕೋತ್ಸವ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ ದೆಹಲಿ ಕನ್ನಡ ಶಾಲೆಯ ವಾರ್ಷಿಕೋತ್ಸವವನ್ನು ಸಡಗರದಿಂದ ಇದೇ ನವೆಂಬರ್ 26ರಂದು ಆಚರಿಸಲಾಯಿತು.

ಬಂಬಾಡಿಯರ್ ಮೆಟ್ರೊ ಕಂಪೆನಿಯ ಭಾರತದ ಪ್ರತಿನಿಧಿ, ನಿರ್ದೇಶಕರು ಹಾಗೂ ಶಾಲೆಯ ಹಳೆ ವಿದ್ಯಾರ್ಥಿಯಾದ ಶ್ರೀ ಹರ್ಷ್ ಡಿಂಗ್ರ ಅವರು ದೀಪ ಬೆಳಗಿಸಿ ಸಮಾರಂಭವನ್ನು ಉದ್ಘಾಟಿಸಿದರು. ಬಳಿಕ ಮಾತಾನಾಡಿದ ಅವರು “ಗುರುಹಿರಿಯರಿಗೆ ಗೌರವ ತೋರುವ ಸಂಸ್ಕೃತಿಯನ್ನು ನಾವು ನಮ್ಮ ಶಾಲಾ ಜೀವನದಿಂದಲೇ ರೂಢಿಸಿಕೊಳ್ಳಬೇಕು. ಜೀವನದಲ್ಲಿ ಎಂದಿಗೂ, ಯಾರನ್ನೂ ಸೋಲಿಸಲು ಪ್ರಯತ್ನಿಸಬೇಡಿ ಎಲ್ಲರನ್ನು ಹೃದಯದಿಂದ ಗೆಲ್ಲುವತ್ತ ನಮ್ಮ ಚಿತ್ತವ ಬೆಳೆಸೋಣ. ಯಾವುದೇ ದುಶ್ಚಟಗಳ ದಾಸರಾಗದೇ ನಮ್ಮ ಸಮಾಜದ ಸಂಪತ್ತಾಗಬೇಕು” ಎಂದರು. ಅಲ್ಲದೆ “ಸುಮಾರು 39 ವರ್ಷಗಳ ಕಾಲದ ನಂತರ ಮಗದೊಮ್ಮೆ ಹಳೆಯ ವಿದ್ಯಾರ್ಥಿಗಳಾದ ನಮ್ಮನ್ನೆಲ್ಲಾ ಈ ಶಾಲಾ ದೇಗುಲದೊಳಗೆ ಒಂದುಗೂಡಿಸಿದ ನಮ್ಮ ನೆಚ್ಚಿನ ಪಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರಿಗೆ ನಮ್ಮ ಹೃದಯಾಂತರಾಳದ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ” ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾದ ಖ್ಯಾತ ಮಕ್ಕಳ ತಜ್ಞರಾದ ಡಾ. ಪ್ರಸನ್ನ ಎಸ್. ಭಟ್ ಅವರು ಸಮಾರಂಭವನ್ನು ಉದ್ದೇಶಿಸಿ “ವಿದ್ಯಾರ್ಥಿಗಳು ಈ ಸಮಾಜಕ್ಕೆ ಸತ್ಪ್ರಜೆಗಳಾಗಿ ಮೂಡಿ ಬರಬೇಕಾದರೆ ಮೊದಲು ಮಾನಸಿಕ ಹಾಗೂ ದೈಹಿಕವಾಗಿ ಸದೃಢವಾಗಿರಬೇಕು. ಹಾಗಾಗಿ ವಿದ್ಯಾರ್ಥಿಗಳು ಆಹಾರ ಸೇವನೆಯ ಬಗ್ಗೆ ಅಗತ್ಯವಾದ ಕಾಳಜಿ ಮತ್ತು ಬೆಳಗ್ಗಿನ ಜಾವದ ಸೂರ್ಯನ ಬಿಸಿಲಿನ ಸೇವನೆಯು ಅತ್ಯಗತ್ಯವಾಗಿದೆ. ಅದಲ್ಲದೆ ಈ ಶಾಲೆಯ ಆವರಣದಲ್ಲಿ ನಡೆಯುವ ಅಧಿವೇಶನ, ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಉತ್ತಮ ವಿದ್ಯಾರ್ಥಿಗಳನ್ನು ರೂಪಿಸಲು ಸಹಕಾರಿಯಾಗಿದೆ” ಎಂದರು.

ಸಂಸ್ಥೆಯ ವತಿಯಿಂದ ಮುಖ್ಯ ಅತಿಥಿಗಳಿಗೆ ಪಾಂಶುಪಾಲರು ಪುಷ್ಪಗುಚ್ಛವನ್ನು ನೀಡಿ ಗೌರವಿಸಿದರು. ಈ ಹಳೆ ವಿದ್ಯಾರ್ಥಿಗಳಲ್ಲಿ ಅಂತರರಾಷ್ಟ್ರೀಯ ಕಥಕ್ ನೃತ್ಯ ಕಲಾವಿದರಾದ ನಳಿನಿ ಮತ್ತು ಕಮಲಿನಿ ಸಹೋದರಿಯರು ಸಹ ಇದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ವಿ.ಆರ್ ಗುಡ್ಡೇಗೌಡ ಅವರು “ಸಂಸ್ಥೆಯು ಕೇವಲ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲ, ಕ್ರೀಡಾ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಮೋಘ ಸಾಧನೆಗೈಯುತ್ತಿದೆ. ಸಂಸ್ಥೆಯ ಅಭಿವೃದ್ಧಿಯಲ್ಲಿ, ಯಶಸ್ಸಿನಲ್ಲಿ ಭಾಗಿಗಳಾದ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾಂಶುಪಾಲರು, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳೆಲ್ಲರನ್ನು ಈ ಸಂದರ್ಭದಲ್ಲಿ ಅಭಿನಂದಿಸಲು ಸಂತೋಷಪಡುತ್ತಿದ್ದೇನೆ” ಎಂದರು.

ಕಳೆದ ಸಾಲಿನಲ್ಲಿ ಸಿಬಿಎಸ್‌ಇ ನಡೆಸಿದ ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ವೈವಿಧ್ಯಮಯ ಕಲಾ ಪ್ರತಿಭೆಯು ಅನಾವರಣಗೊಂಡು ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸಿತು. ಏಕತೆಯನ್ನು ಬಿಂಬಿಸುವ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗಳ ‘ಆಕರ್ಷಕ ನಡಿಗೆ’ ವಿನೂತನ ಕಾರ್ಯಕ್ರಮ ಎಲ್ಲರ ಮನಸೆಳೆದವು.

ಸಂಸ್ಥೆಯ ಪಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರು ಪ್ರಸ್ತುತ ಶೈಕ್ಷಣಿಕ ಸಾಲಿನ ವರದಿ ವಾಚಿಸಿದರು. ಅ

*ಅರವಿಂದ ಬಿಜೈ*





## ದೆಹಲಿಯನ್ನು ಪ್ರತಿನಿಧಿಸಲಿರುವ ಟೆನಿಸ್ ಪಟು ಲಕ್ಷ್ಮೀ ಗೌಡ

ಕು. ಲಕ್ಷ್ಮೀ ಗೌಡ ಅವರು 14 ವರ್ಷಕ್ಕಿಂತ ಕೆಳಗಿನವರ ದೆಹಲಿ ರಾಜ್ಯ ಮಟ್ಟದ ಟೆನ್ನಿಸ್ ಟೂರ್ನಮೆಂಟ್‌ನಲ್ಲಿ ಕು. ಲೀನಾ ಝಾ ಅವರನ್ನು ಸೋಲಿಸಿ ಕಂಚಿನ ಪದಕವನ್ನು ಗೆದ್ದಿದ್ದಾರೆ. ಇವರು ಜನವರಿ, 2017ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ 'ರಾಷ್ಟ್ರಮಟ್ಟದ ಶಾಲೆಗಳ ಟೆನ್ನಿಸ್ ಆಟ'ದಲ್ಲಿ ದೆಹಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ ಹಾಗೂ ಮುಂಬರುವ ಒಂದು ವರ್ಷದ ಕಾಲ ಎಲ್ಲ ಟೆನ್ನಿಸ್ ಟೂರ್ನ್‌ಮೆಂಟ್‌ಗಳಲ್ಲಿ ದೆಹಲಿ ರಾಜ್ಯದ ಪ್ರತಿನಿಧಿಯಾಗಿ ಭಾಗವಹಿಸಲಿದ್ದಾರೆ. 11 ವರ್ಷ ವಯಸ್ಸಿನ ಕು. ಲಕ್ಷ್ಮೀ ಗೌಡ ಅವರು, 12 ವರ್ಷದ ಗುಂಪಿನಲ್ಲಿ 52, 14 ವರ್ಷದ ಗುಂಪಿನಲ್ಲಿ 174 ಮತ್ತು 16 ವರ್ಷದವರ ಗುಂಪಿನಲ್ಲಿ 360ನೇ 'ಆಲ್ ಇಂಡಿಯಾ ಟೆನ್ನಿಸ್ ಅಸೋಸಿಯೇಶನ್'ನ ರ್‍ಯಾಂಕಿಂಗ್ ಪಡೆದಿರುತ್ತಾರೆ. ಪ್ರಸ್ತುತ 6ನೇ ತರಗತಿಯಲ್ಲಿ ಸಂಸ್ಕೃತಿ ಸ್ಕೂಲ್ ಚಾಣಕ್ಯಪುರಿಯ ವಿದ್ಯಾರ್ಥಿನಿಯಾಗಿದ್ದಾರೆ. ಇವರು ದೆಹಲಿ ಕರ್ನಾಟಕ ಸಂಘದ ಸಕ್ರೀಯ ಸದಸ್ಯರಾದ, ಡಿಸಿಪಿ. ಶ್ರೀ ಬಿ.ಎಲ್. ಸುರೇಶ್‌ರವರ ಸುಪುತ್ರಿ.



ಟೇಕ್ವನ್‌ಡೊ ಫೆಡರೇಶನ್ ಆಫ್ ನವದೆಹಲಿಯು ಇದೇ ಡಿಸೆಂಬರ್ 1 ರಿಂದ 4ರವರೆಗೆ ನವದೆಹಲಿಯ ತ್ಯಾಗರಾಜ ಸ್ಟೇಡಿಯಂನಲ್ಲಿ ಆಯೋಜಿಸಿದ '28ನೇ ದೆಹಲಿ ಸ್ಟೇಟ್ ಐಟಿಎಫ್ ಟೇಕ್ವನ್‌ಡೊ' ಚಾಂಪಿಯನ್‌ಶಿಫ್‌ನ 30–35 ಕೆ.ಜಿ. ವಿಭಾಗದಲ್ಲಿ ಮಾ. ಸಂತೋಷ್ ಕುಮಾರ್ ದರ್ಗಾ ಅವರು ಬೆಳ್ಳಿ ಪದಕವನ್ನು ಪಡೆದಿದ್ದಾರೆ. ಇವರು ಗುರ್‌ಗಾಂವ್ ಕನ್ನಡ ಸಂಘದ ಮಾಜಿ ಕಾರ್ಯದರ್ಶಿ ಮತ್ತು ದೆಹಲಿ ಕರ್ನಾಟಕ ಸಂಘದ ಸಕ್ರೀಯ ಆಜೀವ ಸದಸ್ಯರಾದ ಶ್ರೀ ಸಾಬುದರ್ಗಾ ಅವರ ಸುಪುತ್ರ.

**ಕು. ಲಕ್ಷ್ಮೀ ಗೌಡ ಮತ್ತು ಮಾ. ಸಂತೋಷ್ ಕುಮಾರ್ ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.** ಅ

*ಅಭಿಮತ ವರದಿ*


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Dec-2016, Vol. No.27, Issue No.3, Price Rs.1/- RNI Regn. No. 53405/91, DL-SW-1/4016/16-18
Printout Date : Dec 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



ನಾದಬ್ರಹ್ಮ ಹಂಸಲೇಖ ಅವರಿಂದ ತರಬೇತಿ ಪಡೆದು ಕಾರ್ಯಕ್ರಮ ನೀಡುತ್ತಿರುವ ಪುಟಾಣಿಗಳು





ನಾದಬ್ರಹ್ಮ ಹಂಸಲೇಖ ಅವರಿಂದ ತರಬೇತಿ ಪಡೆದು ಕಾರ್ಯಕ್ರಮ ನೀಡುತ್ತಿರುವ ಸ್ಥಳೀಯ ಕಲಾವಿದರು